ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಸೆಪ್ಟೆಂಬರ್ 24 ಬುಧವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 158 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಶ್ರೀರಾಂಪುರ ಪಪಂ ವ್ಯಾಪ್ತಿಯಲ್ಲಿ ಇನ್ನಾರು ತಿಂಗಳಲ್ಲಿ ಉಂಡುವಾಡಿ ಯೋಜನೆಯಿಂದ ಸಮರ್ಪಕ ಕುಡಿಯುವ ನೀರು ಪೂರೈಕೆ

● ಶಾಸಕ ಜಿ.ಟಿ. ದೇವೇಗೌಡರು ಘೋಷಣೆ ● ಮಾದರಿ ಪಟ್ಟಣ ಪಂಚಾಯಿತಿ ಮಾಡುವ ಭರವಸೆ ● ಪೌರ ಕಾರ್ಮಿಕರಿಗೆ ಸನ್ಮಾನ; ಅವರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು, ಸೆ.23–ನಗರಕ್ಕೆ ಹೊಂದಿಕೊಂಡಂತೆ ಇರುವ ಶ್ರೀರಾಂಪುರ ಪಟ್ಟಣ ಪಂಚಾಯಿತಿಯನ್ನು ಮಾದರಿ ಪಟ್ಟಣ ಪಂಚಾಯ್ತಿ ಆಗಿ ಮಾಡಲು ಪ್ರತಿಯೊಬ್ಬರು ಕೈ ಜೋಡಿಸಬೇಕು. ಮುಂದಿನ ಆರು ತಿಂಗಳಲ್ಲಿ ಉಂಡುವಾಡಿ ಯೋಜನೆಯಿಂದ ಕುಡಿಯುವ ನೀರು ಒದಗಿಸಲಾಗುವುದು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಶ್ರೀರಾಂಪುರ ರಿಂಗ್ ರಸ್ತೆಯ ಕಲ್ಯಾಣ ಮಂಟಪದಲ್ಲಿ ಸೋಮವಾರ ಪಟ್ಟಣ ಪಂಚಾಯಿತಿ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ, ಹಿರಿಯ ಪೌರ ಕಾರ್ಮಿಕರಿಗೆ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಶ್ರೀರಾಂಪುರ ಪಟ್ಟಣ ಪಂಚಾಯಿತಿಯಾದ ಮೇಲೆ ಸಾರ್ವಜನಿಕರ ನಿರೀಕ್ಷೆಯಂತೆ ಕೆಲಸ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಮಾದರಿ ಪಟ್ಟಣ ಪಂಚಾಯಿತಿಯನ್ನಾಗಿ ಮಾಡಬೇಕಿದೆ. ಗ್ರೇಟರ್ ಮೈಸೂರು ರಚನೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಒತ್ತಡ ಹೇರುತ್ತಿದ್ದೇನೆ. ಹಲವು ತಿಂಗಳಿಂದ ಜನರ ಸಮಸ್ಯೆಗಳನ್ನು ಆಲಿಸಿ ಪರಿಹರಿಸುವ ಕೆಲಸ ಮಾಡುತ್ತಿದ್ದೇನೆ. ಅಧಿಕಾರಿಗಳು ಕೂಡ ಪೂರ್ಣ ಸಹಕರಿಸುತ್ತಿದ್ದಾರೆ ಎಂದರು.

ಶೀಘ್ರದಲ್ಲೇ ಜನಸಂಪರ್ಕ ಸಭೆ ಮಾಡಿ ಎಲ್ಲರ ಅಹವಾಲುಗಳನ್ನು ಆಲಿಸಲಾಗುವುದು. ಮುಂದಿನ ಆರು ತಿಂಗಳಲ್ಲಿ ದಿನದ 24 ಗಂಟೆಗಳ ಕಾಲ ಶುದ್ಧ ಕುಡಿಯುವ ನೀರು ಒದಗಿಸಲಾಗುವುದು. ಈಗಾಗಲೇ ಕಾಮಗಾರಿ ಭರದಿಂದ ಸಾಗಿದೆ. ಶ್ರೀರಾಂಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಎರಡು ಎಕರೆ ಸರ್ಕಾರಿ ಭೂಮಿ ಇರುವುದರಿಂದ ಮುಂದೆ ಮನೆಗಳನ್ನು ನಿರ್ಮಿಸಿಕೊಡಲು ಸರ್ಕಾರದಿಂದ ಅನುದಾನ ಮಂಜೂರು ಮಾಡಿಸುವುದಾಗಿ ಭರವಸೆ ನೀಡಿದರು.

ಮುಡಾದಿಂದ ಹಲವಾರು ಬಡಾವಣೆಗಳು ಹಸ್ತಾಂತರವಾದ ಮೇಲೆ ಅರ್ಜಿ ಹಾಕಿದ ತಕ್ಷಣವೇ ದಾಖಲೆಗಳನ್ನು ಪಡೆದು ಖಾತೆ ಮಾಡಲಾಗುತ್ತಿದೆ. ತಮ್ಮ ಮನೆಯ, ನಿವೇಶನದ ಖಾತೆಗೆ ಮಧ್ಯವರ್ತಿಗಳ ಮೊರೆ ಹೋಗದಂತೆ ಮುಖ್ಯಾಧಿಕಾರಿಗಳು ನಿಗಾ ಇಟ್ಟಿದ್ದಾರೆ. ಜನರ ಅರ್ಜಿಗಳನ್ನು ವಿಲೇವಾರಿ ಮಾಡಿದರೆ ಮಧ್ಯವರ್ತಿಗಳ ಹಾವಳಿ ಇರುವುದಿಲ್ಲ ಎಂದರು.

ಮಕ್ಕಳೇ ಮುಂದಿನ ಆಸ್ತಿಯಾಗಿದ್ದಾರೆ. ಅವರಿಗೆ ತಪ್ಪದೇ ಶಿಕ್ಷಣ ಕೊಡಿಸಬೇಕು. ಉನ್ನತ ಶಿಕ್ಷಣ ಕೊಡಿಸಿ ಸರ್ಕಾರಿ ಅಧಿಕಾರಿಗಳನ್ನಾಗಿ ಮಾಡಬೇಕು. ಕುಡಿದು ಸಂಸಾರವನ್ನು ಹಾಳು ಮಾಡಿಕೊಳ್ಳಬೇಡಿ. ವೇತನದ ಹಣವನ್ನು ಕೂಡಿಡಬೇಕು ಎಂದರು.

ಪೌರ ಕಾರ್ಮಿಕರ ದಿನಾಚರಣೆ ಅಂದರೆ ಕುಟುಂಬದ ಹಬ್ಬ. ಪ್ರತಿನಿತ್ಯ ಕರ್ತವ್ಯ ಮಾಡುವ ಜೊತೆಗೆ ಎಲ್ಲರ ಆರೋಗ್ಯ, ಪರಿಸರವನ್ನು ಕಾಪಾಡುತ್ತಾರೆ. ಗ್ರಾಪಂ ನೌಕರರು ಪಟ್ಟಣ ಪಂಚಾಯಿತಿ ನೌಕರರನ್ನಾಗಿ ಮಾಡಲು ತುಂಬಾ ಕಷ್ಟಪಟ್ಟಿದ್ದೇನೆ. ಬೆಳಿಗ್ಗೆಯಿಂದ ಸಂಜೆ ತನಕ ಮನೆ ಮನೆಗೆ ತೆರಳಿ ಕಸ ಸಂಗ್ರಹವನ್ನು ಮಾಡಬೇಕು. ವೈಜ್ಞಾನಿಕವಾಗಿ ಕಸ ವಿಲೇವಾರಿ ಮಾಡಬೇಕು ಎಂದು ಹೇಳಿದರು. ಮೈಸೂರು ದಸರಾ ಮಹೋತ್ಸವವು ನಡೆಯುತ್ತಿದೆ. ಮಹಾರಾಜರ ಕಾಲದಿಂದಲೂ ದಸರಾ ನಡೆಸಿಕೊಂಡು ಬರಲಾಗುತ್ತಿದೆ. ಮೈಸೂರಿನ ಎಲ್ಲಾ ಕಡೆಗಳಲ್ಲಿ ಸ್ವಚ್ಛತೆಯನ್ನು ಕಾಣುತ್ತಿದ್ದೇವೆ. ಫಲಪುಷ್ಪ ಪ್ರದರ್ಶನ, ಆಹಾರ ಮೇಳ, ಕವಿಗೋಷ್ಠಿ, ಯುವಸಂಭ್ರಮ, ಕುಸ್ತಿ, ಕ್ರೀಡಾಕೂಟ ನಡೆಯುವ ಜಾಗಗಳಲ್ಲಿ ಹಗಲು–ರಾತ್ರಿ ಪೌರ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು. ಪೌರ ಕಾರ್ಮಿಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರವಾಗಿ ನಗದು ಬಹುಮಾನ ನೀಡಲಾಯಿತು. ಮುಖ್ಯಾಧಿಕಾರಿ ಎಚ್.ಎಂ.ಸುರೇಶ್, ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾ ಧಿಕಾರಿ ವಿ.ಪ್ರಿಯದರ್ಶಿನಿ, ತಹಸೀಲ್ದಾರ್ ರಾಮ ಪ್ರಸಾದ್, ಮಹೇಶ್, ಶಂಕರ್, ಸುರೇಶ್, ಶ್ರೀನಿವಾಸ್, ದೊರೆ ಮತ್ತಿತರರು ಹಾಜರಿದ್ದರು.



ಶ್ರೀರಾಂಪುರದಲ್ಲಿ ಪಟ್ಟಣ ಪಂಚಾಯಿತಿ ವತಿಯಿಂದ ಪ್ರತಿಭಾ ಪುರಸ್ಕಾರ, ಹಿರಿಯ ಪೌರ ಕಾರ್ಮಿಕರಿಗೆ ಸನ್ಮಾನ ಸಮಾರಂಭ ಏರ್ಪಡಿಸಲಾಗಿತ್ತು.

ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ವೇಳೆ ಸವಿತಾ ಸಮಾಜದವರು ನಯನಜ ಕ್ಷತ್ರಿಯ ಎಂದು ಬರೆಸಲು ಮನವಿ

ಮೈಸೂರು,ಸೆ.23(ಜಿಎ)–ರಾಜ್ಯ ಸರ್ಕಾರ ನಡೆಸುತ್ತಿರುವ ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ವೇಳೆ ಸವಿತಾ ಸಮಾಜದವರು 9ನೇ ಕಾಲಂನಲ್ಲಿ ಜಾತಿ ಎಂಬ ಕಡೆ ನಯನಜ ಕ್ಷತ್ರಿಯ ಎಂದೇ ನಮೂದಿಸಬೇಕು. ಇದರಿಂದಾಗಿ ಸಮುದಾಯದ ನಿಖರ ಜನಸಂಖ್ಯೆ ಮಾಹಿತಿ ತಿಳಿದು ಸೌಲಭ್ಯ ಪಡೆಯಲು ಸಹಕಾರಿಯಾಗುತ್ತದೆ ಎಂದು ಸವಿತಾ ಸಮಾಜ ಸಮಿತಿ ಅಧ್ಯಕ್ಷ ವಿ.ಮಂಜುನಾಥ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉಪ ಜಾತಿ ಕಾಲಂನಲ್ಲಿ ಸವಿತಾ, ಕ್ಷೌರಿಕ, ಭಜಂತ್ರಿ ಎಂದು ನಮೂದಿಸಬೇಕು. ಈಗಾಗಲೇ ಸರ್ಕಾರ ಹಜಾಮ, ನಾಯಿಂದ, ನೆನೆಯ ಬಾರದವ ಎಂಬ ಪದಗಳನ್ನು ನಿಷೇಧಿಸಿರುವುದನ್ನು ಗಮನದಲ್ಲಿರಿಸಿಕೊಳ್ಳಬೇಕೆಂದರು.

ಹಲವಾರು ಮಂದಿ ಸಮುದಾಯದ ಜಾತಿ ಹೇಳಿಕೊಳ್ಳಲು ಸಂಕೋಚ ಪಟ್ಟು ಕ್ರೈಸ್ತ ಸಮುದಾಯಕ್ಕೆ ಮತಾಂತರಗೊಳ್ಳುತ್ತಿದ್ದಾರೆ. ಈ ಸಮುದಾಯದವರಿಗೆ ಬಾಡಿಗೆ ಮನೆ ಸಿಗದಿರುವುದು ಸಹ ಇದಕ್ಕೆ ಕಾರಣವಾಗಿದೆ. ಇಂತಹವರು ತ್ರಿಶಂಕು ಸ್ಥಿತಿಗೆ ತಲುಪಬೇಕಾಗುತ್ತದೆ. ಆದ್ದರಿಂದ ನಯನಜ ಕ್ಷತ್ರಿಯ ಎಂದೇ ಬರೆಯಿಸಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಸಿ.ಶಂಕರ, ರಘು, ವಿ.ಮುರಳೀಧರ್, ಮಂದು ಕುಮಾರ್. ಟಿ.ಲೋಕೇಶ್ ಉಪಸ್ಥಿತರಿದ್ದರು.

ಮಹಿಳಾ ಹೋಟೆಲ್ ಉದ್ಯಮಿಗಳು, ಶ್ರಮಿಕರನ್ನು ಅಭಿನಂದಿಸಿದ ಸಚಿವೆ ಲಕ್ಷ್ಮಿ

ಅತಿಥಿ ದೇವೋಭವ ಹೋಟೆಲ್ ಉದ್ಯಮದ ಉದ್ದೇಶ



ಮಹಿಳಾ ಹೋಟೆಲ್ ಉದ್ಯಮಿಗಳು ಹಾಗೂ ಸಮಾಜದ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳಾ ಶ್ರಮಿಕರನ್ನು ಅಭಿನಂದಿಸಲಾಯಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್, ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ, ರವಿ ಶಾಸ್ತ್ರಿ, ಆನಂದ್ ಎಂ.ಶೆಟ್ಟಿ, ಸುಮಿತ್ರ ಎ.ತಂತ್ರಿ ಉಪಸ್ಥಿತರಿದ್ದರು.

ಮೈಸೂರು, ಸೆ.23(ಎಂಕೆ)– ಅತಿಥಿ ದೇವೋಭವ ಎನ್ನುತ್ತಾ ಸೇವೆ ಮಾಡುವ ಎಲ್ಲಾ ವರ್ಗವನ್ನ ಹೋಟೆಲ್ ಉದ್ಯಮ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದರು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘ, ಹೋಟೆಲ್ ಮಾಲೀಕರ ಸಂಘ ಹಾಗೂ ಹೋಟೆಲ್ ಮಾಲೀಕರ ಧರ್ಮದತ್ತಿ ಸಹಯೋಗದೊಂದಿಗೆ ಮಹಿಳಾ ಹೋಟೆಲ್ ಉದ್ಯಮಿಗಳು ಹಾಗೂ ಸಮಾಜದ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳಾ ಶ್ರಮಿಕರನ್ನು ಅಭಿನಂದಿಸಿ ಅವರು ಮಾತನಾಡಿದರು.

ಇವತ್ತಿನ ದಿನಗಳಲ್ಲಿ ಹೋಟೆಲ್ ಉದ್ಯಮ ಎಂಬುದು ತಮಾಷೆ ಅಲ್ಲ. ಮೈಸೂರಿನ ಹೋಟೆಲ್ ಉದ್ಯಮಿಗಳು, ಸಹಕಾರ ಬ್ಯಾಂಕ್ ಸ್ಥಾಪಿಸುವ ಮೂಲಕ ಎಲ್ಲರಿಗೂ ಆಶ್ರಯ ನೀಡುತ್ತಿದ್ದಾರೆ. ಅಲ್ಲದೆ ಹೋಟೆಲ್ ಉದ್ಯಮದಲ್ಲಿ ಸಾಧನೆ ಮಾಡಿದವರ ಗುರುತಿಸಿ ಸನ್ಮಾನಿಸುತ್ತಿರುವುದು ಶ್ಲಾಘನೀಯ ಎಂದರು. ನಾನು ಕೂಡ ಬೆಳಗಾವಿಯಲ್ಲಿ ಒಂದು ಹೋಟೆಲ್, ಎರಡು ಸಕ್ಕರೆ ಕಾರ್ಖಾನೆಯನ್ನು ಹೊಂದಿದ್ದು, ಹೋಟೆಲ್ ಉದ್ಯಮದ ಬಗ್ಗೆ ಅಲ್ಪ ಸ್ವಲ್ಪ ತಿಳಿದುಕೊಂಡಿದ್ದೇನೆ. ಹಸಿದವರಿಗೆ ಅನ್ನ ಹಾಕುವ ಮೂಲಕ ಸಾಮಾಜಿಕ ಕಾರ್ಯಕ್ರಮವನ್ನು ಹೋಟೆಲ್ ಉದ್ಯಮದವರು ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ಮಾತುಗಳನ್ನಾಡಿದರು.

ಸಂಘಟನೆ, ಸಂಘ– ಸಂಸ್ಥೆಗಳನ್ನು ಕಟ್ಟುವುದು ತಮಾಷೆಯ ಮಾತಲ್ಲ. 25 ವರ್ಷಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಸೊಸೈಟಿಗೆ ಅಡಿಗಲ್ಲು ಹಾಕಿದ್ದರು. ಅವರೇ ಬೆಳ್ಳಿ ಹಬ್ಬದ ಸಮಾರಂಭವನ್ನು ಉದ್ಘಾಟನೆ ಮಾಡಿದ್ದಾರೆ. ಇದು ನಿಜಕ್ಕೂ ಸೊಸೈಟಿಯ ದೊಡ್ಡ ಸಾಧನೆ. ಈ ಹೋಟೆಲ್ ಸೊಸೈಟಿ ಇನ್ನೂ ಎತ್ತರಕ್ಕೆ ಬೆಳೆಯಲಿ ಎಂದು ಹಾರೈಸಿದರು.

ಕೋಟಿ ದೇಣಿಗೆ: ಇವತ್ತು ಕರಾವಳಿ ಭಾಗದ ಉದ್ಯಮಿಗಳು ಅದರಲ್ಲೂ ಹೋಟೆಲ್ ಉದ್ಯಮಿಗಳು ದೇವಸ್ಥಾನದ ಜೀರ್ಣೋದ್ಧಾರಕ್ಕೆ ಒಂದೊಂದು ಕೋಟಿ ರೂ. ದೇಣಿಗೆ ನೀಡುತ್ತಾರೆ. ಇದು ಅವರ ಧನ್ಯತೆಯನ್ನು ತೋರುತ್ತದೆ ಎಂದು ಅಭಿಮಾನ ವ್ಯಕ್ತಪಡಿಸಿದರು.

ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ, ರವಿ ಶಾಸ್ತ್ರಿ, ಆನಂದ್ ಎಂ.ಶೆಟ್ಟಿ, ಸುಮಿತ್ರ ಎ.ತಂತ್ರಿ ಮತ್ತಿತರರು ಉಪಸ್ಥಿತರಿದ್ದರು.

ನಾಳೆ 'ಬಣ್ಣಬಣ್ಣದ ಬಿಂದಿಗಳು' ಬಿಡುಗಡೆ



ಮೈಸೂರು, ಸೆ.23–ಚುಟುಕು ಜಾಹ್ನವಿ ವಿ. ಸೀತಾಲಕ್ಷ್ಮಿಯವರು ರಚಿಸಿರುವ ಬಣ್ಣಬಣ್ಣದ ಬಿಂದಿಗಳು ಕವನ ಸಂಕಲನ ಇದೇ ಗುರುವಾರ(ಸೆ.25) ಲೋಕಾರ್ಪಣೆಗೊಳ್ಳಲಿದೆ ಎಂದು ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಡಾ. ಎಂಜಿಆರ್ ಅರಸು ತಿಳಿಸಿದ್ದಾರೆ.

ಮೈಸೂರಿನ ದಿ. ಇನ್ಸ್ಟಿಟ್ಯೂಷನ್ ಆಫ್ ಇಂಜಿಯರ್ಸ್ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆಗೆ ನಡೆಯಲಿರುವ ಸಮಾರಂಭವನ್ನು ವಿಧಾನ ಪರಿಷತ್ ಸದಸ್ಯ ಡಾ. ಡಿ ತಿಮ್ಮಯ್ಯ ಉದ್ಘಾಟಿಸಲಿದ್ದು, ಖ್ಯಾತ ಕವಿ ಸಿ.ಪಿ.ಕೆ ಕವನ ಸಂಕಲನ ಬಿಡುಗಡೆ ಮಾಡುವರು ಶ್ರೀಮತಿ ಭ್ರಮರ ಬಹದ್ದೂರ್ ಕೃತಿ ಬಗ್ಗೆ ಮಾತನಾಡಲಿದ್ದು, ಎಂಜಿನಿಯರ್ಸ್ ಸಂಸ್ಥೆಯ ಅಧ್ಯಕ್ಷ ಆರ್. ದೀಪು ಅಧ್ಯಕ್ಷತೆ ವಹಿಸುವರು. ಹೆಚ್.ಎಸ್. ಸುರೇಶ್ ಬಾಬು ಪುಸ್ತಕ ತಾಂಬೂಲ ವಿತರಿಸುವರು. ಮುಖ್ಯ ಅತಿಥಿಗಳಾಗಿ ಎ.ಎಸ್. ಸತೀಶ್, ಡಾ. ರತ್ನ ಹಾಲಪ್ಪಗೌಡ, ಆರ್ಯ ಅಮರನಾಥ ರಾಜೇ ಅರಸ್, ಆಗಮಿಸುವರೆಂದು ಹೇಳಿದ್ದಾರೆ.

ಜೈನ ಸಮುದಾಯದ ಮಾತಾಜಿ ನಿಧನ



ಮೈಸೂರು, ಸೆ.23– ದಿಗಂಬರ ಜೈನ ಸಮುದಾಯದ ನಿರ್ಭಯಮತಿ ಮಾತಾಜಿ ಮಂಗಳವಾರ ಸಂಜೆ ಸಮಾಧಿ ಮರಣ ಹೊಂದಿದರು.

ಅವರಿಗೆ 83 ವರ್ಷವಾಗಿತ್ತು. ಇವರ ಪೂರ್ವಾಶ್ರಮದ ಹೆಸರು ನಿರ್ಮಲಮ್ಮ. ಪುತ್ರ ಎಸ್.ಎನ್. ಪದ್ಮಪ್ರಸಾದ್ ಮತ್ತು ಪುತ್ರಿ ಎಸ್.ಎನ್. ಜ್ಯೋತಿ ಸೇರಿದಂತೆ ಇಬ್ಬರು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳನ್ನು ಅಗಲಿದ್ದಾರೆ. ಮೂಲತಃ ಸರಗೂರಿನವರಾದ ಇವರು ಕಳೆದ ಮಂಗಳವಾರ ಮೈಸೂರಿನಲ್ಲಿ ಚಾತುರ್ಮಾಸ ಮಾಡುತ್ತಿರುವ ದಿಗಂಬರ ಮುನಿ 108 ಶ್ರೀ ಪುಣ್ಯಸಾಗರ ಮುನಿಗಳಿಂದ ನಿಯಮ ಸಲ್ಲೇಖನ ವ್ರತವನ್ನು ಸ್ವೀಕರಿಸಿದ್ದರು. ಮೃತರ ಅಂತ್ಯಕ್ರಿಯೆ ನಾಳೆ (ಬುಧವಾರ) ಬೆಳಗ್ಗೆ 10 ಗಂಟೆಗೆ ಸರಗೂರಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಮಚಂದ್ರು



ಮೈಸೂರು, ಸೆ.23–ಮೈಸೂರಿನ ಗೋಕುಲಂ ನಿವಾಸಿ, ಪಿಡಬ್ಲ್ಯೂಡಿ ಕ್ಲಾಸ್ ಒನ್ ಕಂಟ್ರಾಕ್ಟರ್ ಎಸ್.ರಾಮಚಂದ್ರು(75) ಅವರು ಮಂಗಳವಾರ ರಾತ್ರಿ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ದಿವಂಗತರು ಪತ್ನಿ ಯಶೋಧಮ್ಮ, ಓರ್ವ ಪುತ್ರ–ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಬುಧವಾರ(ಸೆ.24) ಮಧ್ಯಾಹ್ನ 2 ಗಂಟೆಗೆ ಮೃತರ ಸ್ವಗ್ರಾಮ ಪಾಲಹಳ್ಳಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.09.2025 ಬುಧವಾರ, ಮಳೆ ನಕ್ಷತ್ರ: ಉತ್ತರಾ 14.09.2025ರಿಂದ 26.09.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯಣ, ಶರದ್ ಋತು ಅಶ್ವಿನಿ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಚಿತ್ತ, ರಾಹುಕಾಲ: ಮಧ್ಯಾಹ್ನ 12 ರಿಂದ 1.30 ರವರೆಗೆ

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಮೈಸೂರು ದಸರಾ ಮಹೋತ್ಸವ ಸಮಿತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು :** ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳ, ಸಾಹಿತಿಗಳೊಂದಿಗೆ ಸೆಲ್ಫಿ – ಡಾ. ಸುಕನ್ಯಾ ಮಾರುತಿ, ಡಾ. ರಾಜಪ್ಪ ದಳವಾಯಿ; ಶ್ರೀಮತಿ ಪ್ರಭಾ ಕೆ.ವಿ. ಮತ್ತು ತಂಡ, ರಾಯಚೂರು ಅವರಿಂದ ಭಾವಗೀತೆ ಗಾಯನ; ಸ್ಥಳ: ರಾಷ್ಟ್ರಕವಿ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಹಳೆ ಡಿಸಿ ಕಚೇರಿ ಎದುರು, ಬೆಳಗ್ಗೆ 11.30ಕ್ಕೆ.

■ **ಶ್ರೀ ಸುಬ್ಬರಾಯ ದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ್ ಶ್ರೀ ಪ್ರಸನ್ನ, ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ. ಬೆಳಗ್ಗೆ ಉತ್ಸವ, ಸಾಯಂಕಾಲ ಉತ್ಸವ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನದ ಆವರಣ, ಕೃಷ್ಣವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾ ಶರನ್ನವರಾತ್ರೋತ್ಸವ–2025. ತೃತೀಯಾ, ಶ್ರೀ ಕೌಮಾರೀ (ಮಯೂರವಾಹಿನಾಲಂಕಾರ), ರುದ್ರೈಕಾದಶಿನೀ ಹೋಮ, ಸ್ಥಳ: ಅಭಿನವ ಶಂಕರಾಲಯ, ಪೋರ್ಟ್ ಮೊಹಲ್ಲಾ. ಬೆಳಗ್ಗೆಯಿಂದ.

■ **ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ–2025. ಬೆಳಗ್ಗೆ 9ಕ್ಕೆ ಶ್ರೀ ಗಾಯತ್ರಿ ಹೋಮ, ಶ್ರೀ ಕೌಮಾರಿ (ಮಯೂರ ವಾಹಿನಿ) ಅಲಂಕಾರ, ಸ್ಥಳ: ದೇವಸ್ಥಾನದ ಪ್ರಾಂಗಣ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.

■ **ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ:** ಸಂಧಿವಾತ, ಶರದ್ ವಿರೇಚನ–ಪಂಚಕರ್ಮ ಚಿಕಿತ್ಸಾ ಶಿಬಿರ. ಬೊಜ್ಜು ನಿವಾರಣಾ ಶಿಬಿರ, ಸ್ಥಳ: ಜೆಎಸ್ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭಸಂಸ್ಕಾರ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ವಿವೇಕಾನಂದನಗರ ಬ್ರಾಹ್ಮಣ ಮಹಾಸಭಾ:** ಶರನ್ನವರಾತ್ರಿ, ಬೆಳಗ್ಗೆ ಶ್ರೀ ಗಾಯತ್ರೀ ದೇವಿ ವಿಶೇಷ ಪೂಜೆ, ಪ್ರಸಾದ ವಿನಿಯೋಗ, ಸಂಜೆ 7 ರಿಂದ ವಿದುಷಿ ಶ್ರೀಮತಿ ಸುವಿದ್ಯಾ ಅನಿಲ್ ಕುಮಾರ್ ಅವರಿಂದ ಭರತನಾಟ್ಯ, ಸ್ಥಳ: ಶ್ರೀ ಶಂಕರ ಪ್ರಾರ್ಥನಾ ಮಂದಿರ.

■ **ಆರುಂಧತಿ ಪತ್ತಿನ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಸ್ಥಳ: ಶ್ರೀ ರಾಮಮಂದಿರ, ಸಿ.ವಿ. ರಸ್ತೆ, ಮಂಡಿ ಮೊಹಲ್ಲಾ, ಬೆಳಗ್ಗೆ 10ಕ್ಕೆ.

■ **ನೇಕಾರರ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಸ್ಥಳ: ದಿ ಪ್ರೆಸಿಡೆಂಟ್ ಹೋಟೆಲ್, ಬೆಂಗಳೂರು–ನೀಲಗಿರಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಜೀವ್ ಸ್ನೇಹ ಬಳಗ, ವಿಪ್ರ ಮಹಿಳಾ ಸಂಗಮ, ಕೃಷ್ಣ ಕಾಲಿಂಗ್ ಚಾರಿಟಬಲ್ ಟ್ರಸ್ಟ್ :** ಮನೆ ಮನೆ ಗೊಂಬೆ ಸ್ಪರ್ಧೆ, ಸ್ಥಳ: ಟ್ರಸ್ಟ್ ಆವರಣ, ಬೆಳಗ್ಗೆ 11 ರಿಂದ.

■ **ನೇಗಿಲಯೋಗಿ ವಿವಿಧೋದ್ದೇಶ ಸೌಹಾರ್ದ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಸ್ಥಳ: ನೇಗಿಲ ಯೋಗಿ ಮರುಳೇಶ್ವರ ಸೇವಾ ಭವನದ ಹೊಸ ಕಟ್ಟಡ, ಹೊಸ ಕೋರ್ಟ್ ಎದುರು, ಜಯನಗರ, ಸಂಜೆ 4ಕ್ಕೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಕಾರ್ಯಕ್ರಮ. ಬೆಳಗ್ಗೆ 9 ರಿಂದ ಶ್ರೀ ದೇವಿ ಪಲ್ಲಕ್ಕಿ ಉತ್ಸವ, ಕೌಮಾರಿ ಪೂಜೆ, ಶ್ರೀಚಕ್ರ ಪೂಜೆ, ನವಾವರಣ ಪೂಜೆ, ವಿದ್ವಾನ್ ಸುಮಂತ್ ಮಂಜುನಾಥ್ ಮತ್ತು ವಿದುಷಿ ಮಾಳವಿಕ ಮಂಜುನಾಥ್ ಅವರಿಂದ ಕರ್ನಾಟಕ ಪಿಟೀಲು ದ್ವಂದ್ವ ವಾದನ, ಮಧ್ಯಾಹ್ನ 12ಕ್ಕೆ ಅನ್ನಾರ್ಚನೆ, ದುರ್ಗಿಲಕ್ಷ್ಮಿ ಪೂಜೆ, ಹೋಮ, ಪೂರ್ಣಾಹುತಿ, ಸಂಜೆ 4ಕ್ಕೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6ಕ್ಕೆ ಶ್ರೀ ಸ್ವಾಮೀಜಿಯವರಿಂದ ದೇವಿ ಭಜನೆ ಮತ್ತು ಪ್ರವಚನ. ಸ್ಥಳ: ನಾದಮಂಟಪ, ಗಣಪತಿ ಸಚ್ಚಿದಾನಂದ ಆಶ್ರಮ. ಊಟಿ ರಸ್ತೆ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್.ರಾಘವೇಂದ್ರ ಕೆ.ಎಸ್.ಅವರು ಕೈಯ್ಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ. ಸ್ಥಳ: ಇಂಚರ ಕಲಾ ಕ್ಷೇತ್ರ ಮಹದೇಶ್ವರ ನಗರ, ಬೆಳಗ್ಗೆ 10ರಿಂದ.

■ **ಸರಸ್ವತಿಪುರಂ ಬಳಕೆದಾರರ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಆರ್. ಲಿಂಗಪ್ಪ, ಸ್ಥಳ: ಸಂಘದ ಆವರಣ, ಬೆಳಗ್ಗೆ 10.30ಕ್ಕೆ

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಅಮೃತೇಶ್ವರ ದೇವಸ್ಥಾನ :** ಶ್ರೀ ಶ್ರೀ ದಕ್ಷಿಣಾಮ್ನಾಯ ಶೃಂಗೇರಿ ಶಾರದಾಪೀಠದ ಉಭಯ ಜಗದ್ಗುರುಗಳ ಅನುಗ್ರಹಗಳೊಂದಿಗೆ ಶರನ್ನವರಾತ್ರಿ ಪ್ರಯುಕ್ತ 75ನೇ ವರ್ಷದ ಸಹಸ್ರ ಚಂಡಿಕಾ ಮಹಾಯಾಗ, ಬೆಳಗ್ಗೆ 9.30ಕ್ಕೆ ಸಹಸ್ರ ಚಂಡಿಕಾಯಾಗ, ಛನ್ನಘಂಟಾದೇವಿಯ ಆರಾಧನೆ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಮೃತೇಶ್ವರ ದೇವಸ್ಥಾನ.

■ **ವ್ಯವಸ್ಥಾಪಕರು:** ಮೈಸೂರು ಮನೆ–ಮನೆ ದಸರಾ ಬೊಂಬೆ ಪ್ರದರ್ಶನ–2025. ಸ್ಥಳ: ಹೇಮಲತಾ ಕುಮಾರಸ್ವಾಮಿ ಅವರ ನಿವಾಸ, 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.

■ **ಮೈಸೂರು ಬೊಂಬೆ ರಂಗ ಮಂದಿರ :** ಮೈಸೂರು ಬೊಂಬೆ ಪ್ರದರ್ಶನ, ಸ್ಥಳ: ಮೈಸೂರು ಪಪ್ಪೆಟ್ ಥಿಯೇಟರ್, ಮೃಗಾಲಯದ ಎದುರು, ಸಂಜೆ 4.30 ರಿಂದ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್:** 29ನೇ ವರ್ಷದ ಶರನ್ನವರಾತ್ರಿ ಮಹೋತ್ಸವ. ಬೆಳಗ್ಗೆ 8.30ಕ್ಕೆ ಮಹಾಭಿಷೇಕ, ಶ್ರೀ ಚಂದ್ರಘಂಟಾ, ಶ್ರೀಜಾತವೇದ, ದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಸಂಜೆ 5.30ಕ್ಕೆ ಶ್ರೀ ಮಹಾವಿಷ್ಣು ದಶಾವತಾರಹೋಮ, ಮಹಾ ಧನ್ವಂತರಿ ಹೋಮ, ಸ್ಥಳ: ಫೌಂಡೇಷನ್ ಆವರಣ, ಜಯಲಕ್ಷ್ಮೀಪುರಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ದಸರಾ ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು–ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ. ಎಸ್. ಪೂರ್ಣಿಮಾ, 6.40 ದಸರಾದಲ್ಲಿ ಇಂದು ಮತ್ತು ನಾಳೆ ನಂತರ ಮೈಸೂರು ದಸರಾ ಕಾರ್ಯಕ್ರಮ. ಪ್ರಸ್ತುತಿ–ಶ್ರೀಮಾನ್ .ಎಸ್., 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.05 ರೇಷ್ಮೆ ಸಿರಿ, 9.20 ವೃತ್ತಿ ಮಾರ್ಗದರ್ಶನ, 9.30 ಮೈಸೂರು ಬ್ರಾಂಡ–ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಪ್ರಸ್ತುತಿ : ಡಾ.ಮೈಸೂರು ಉಮೇಶ್, 9.40 ಮೈಸೂರು ಸಂಸ್ಥಾನದ ಕಲಾ ಪರಂಪರೆ ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಸಾಹಿತ್ಯ: ಡಾ.ಜ್ಯೋತಿಶಂಕರ್, ಪರಿಕಲ್ಪನೆ ಹಾಗೂ ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಬನ್ನೂರು ಹೋಬಳಿ ಕುಂತನ ಹಳ್ಳಿಯ ಶಿವಮ್ಮ ಮತ್ತು ಸಂಗಡಿಗರಿಂದ ಮಾರಮ್ಮನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾ ರಂಗ–ಪ್ರವಾಸಿ ದಸರಾ, ಮೈಸೂರು ಸೀಮೆಯ ದಸರಾ ಸಂಭ್ರಮ, ಪ್ರಸ್ತುತಿ–ಕೀರ್ತನಾ, ಸಹನ ಹಾಗೂ ನೇತ್ರಾ, 4.30 ಹಿಂದಿ ಚಿತ್ರಗೀತೆಗಳು, 6.50 ಕೃಷಿರಂಗ–ಹಲೋ ಕೃಷಿರಂಗ– ಪ್ರಾಯೋಜಿತ ನೇರ ಫೋನ್–ಇನ್ ಕಾರ್ಯಕ್ರಮ, ಪ್ರಾಯೋಜಕರು–ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ವಿಷಯ–ಕೃಷಿ ತ್ಯಾಜ್ಯಗಳ ಮರು ಬಳಕೆ, ಭಾಗವಹಿಸುತ್ತಾರೆ –ಉಪ ನಿರ್ದೇಶಕರಾದ ಜಿ.ಹೆಚ್. ಯೋಗೀಶ್, ಬಾನುಲಿ ಬೇಸಾಯ–ದಣಿವರಿಯದ ಕೃಷಿಗೆ ನಮ್ಮ ಸಹಾಯ, ಪ್ರಸ್ತುತಿ–ಆರ್.ಲೋಕೇಶ್ವರಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ಕನ್ನಡ ಚಿತ್ರಗೀತೆಗಳು, 8.00 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು, ನಾಟಕ ಕ್ಷೇತ್ರದಲ್ಲಿನ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಎನ್. ನಾಗಚಂದ್ರ ಅವರೊಂದಿಗೆ ಸಂವಾದ. ಪ್ರಸ್ತುತಿ–ಉಮೇಶ್ ಎಸ್.ಎಸ್., 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಹಳ್ಳಿಹಾಡು, ಭಾಗವಹಿಸುತ್ತಾರೆ–ಜಾನಪದ ವಿದ್ವಾಂಸರಾದ ಡಾ. ಪಿ.ಕೆ. ರಾಜಶೇಖರ್ ಮತ್ತು ಸಂಗಡಿಗರು, ಪ್ರಸ್ತುತಿ–ಡಾ. ಮೈಸೂರು ಉಮೇಶ್, 10.30 ಸವಿನೆನಪು

■ **ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್ :** ದಸರಾ ಕೇಕ್ ಶೋ, ಸ್ಥಳ: ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್, ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ಕ್ಕೆ.

■ **ಶ್ರೀ ಸ್ವರ್ಣಗೌರಿ ದೇವಿಯ ಉದ್ಯಾಪನೆ ಸಮಿತಿ :** 34 ಅರಸು ಮಹಿಳೆಯರಿಂದ ಸಾಮೂಹಿಕವಾಗಿ ಶ್ರೀ ಸ್ವರ್ಣಗೌರಿ ಉದ್ಯಾಪನೆ ಮಹೋತ್ಸವ, ಬೆಳಗ್ಗೆ 6ಕ್ಕೆ ಪೂಜಾ ಕಾರ್ಯಕ್ರಮ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ಆಶೀರ್ವಚನ : ಶ್ರೀ ಎಂ.ಎಲ್. ವರ್ಚಸ್ವೀ ಶ್ರೀಕಂಠ ಸಿದ್ದಲಿಂಗರಾಜೇ ಅರಸ್, ಉಪಸ್ಥಿತರು : ಶ್ರೀ ಜ್ಞಾನಾನಂದ ಚೆನ್ನರಾಜೇ ಅರಸ್, ವಿಶೇಷ ಆಹ್ವಾನಿತರು : ಬಿ.ಎನ್. ಜಗದೀಶ್ ಬಹದ್ದೂರ್, ಡಾ. ಎಂ.ಜಿ.ಆರ್. ಅರಸ್, ಸ್ಥಳ: ಶ್ರೀರಾಮ ಸೇವಾ ಅರಸು ಮಂಡಳಿ, 3ನೇ ಮುಖ್ಯ ರಸ್ತೆ, ಕೆ.ಆರ್. ವನಂ.

■ **ಶ್ರೀ ಶ್ರೀ ಆವನೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನಂ :** ಶ್ರೀ ಶಾರದಾ ಶರನ್ನವರಾತ್ರಿ ಮಹೋತ್ಸವ, ತೃತೀಯ – ಬ್ರಹ್ಮಚಾರಿಣಿ ಅಲಂಕಾರ, ಬೆಳಗ್ಗೆ 9 ರಿಂದ ಶ್ರೀಸ್ವಯಂವರ ಪಾರ್ವತೀ ಹೋಮ, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಸ್ಫೂರ್ತಿ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀ ಆವನೀ ಶೃಂಗೇರಿ ಮಠ, ಮೈಸೂರು ಶಾಖೆ, ವಿದ್ಯಾರಣ್ಯಪುರಂ.

■ **ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ :** ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆ ಅಂಗವಾಗಿ ರಕ್ತದಾನ ಶಿಬಿರ, ಅಧ್ಯಕ್ಷತೆ : ಎಂಎಂಸಿ ಮತ್ತು ಆರ್‌ಐ ಡೀನ್ ಮತ್ತು ನಿರ್ದೇಶಕರಾದ ಡಾ. ಕೆ.ಆರ್. ದಾಕ್ಷಾಯಣಿ, ಮುಖ್ಯ ಅತಿಥಿಗಳು : ಕೆ.ಆರ್. ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ಹೆಚ್.ಪಿ. ಶೋಭಾ, ಉದ್ಘಾಟನೆ : ಮುಖ್ಯ ಆಡಳಿತಾಧಿಕಾರಿ ಪಿ. ಜಯಮಾಧವ, ಉಪಸ್ಥಿತರು : ಪ್ರಿನ್ಸಿಪಾಲ್ ಡಾ. ಪಿ. ನಂದಪ್ರಕಾಶ್, ಎಸ್. ಚಂದ್ರಶೇಖರಪ್ಪ, ಸ್ಥಳ: ರಕ್ತನಿಧಿ ಕೇಂದ್ರ, ಕೆ.ಆರ್. ಆಸ್ಪತ್ರೆ, ಬೆಳಗ್ಗೆ 10 ರಿಂದ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಪ್ರಥಮ ವರ್ಷದ ಎಂ.ಕಾಂ. ವಿದ್ಯಾರ್ಥಿಗಳ ಸೇರ್ಪಡೆ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಆಧ್ಯಾತ್ಮಿಕ ಚಿಂತಕ ಶಂಕರ್ ದೇವನೂರು, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಉಪಸ್ಥಿತರು : ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಅಧ್ಯಕ್ಷ ಟಿ. ನಾಗರಾಜು, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ :** 17ನೇ ವಾರ್ಷಿಕ ಸುಲೋಚನಾ ಪಟ್ಟಾಭಿರಾಮನ್ ಉತ್ಸವದ ಅಂಗವಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತ ಸ್ಪರ್ಧೆ, ಸ್ಥಳ: ವಿವೇಕಾನಂದ ಭಾರತೀಯ ಅಧ್ಯಯನ ಸಂಸ್ಥೆ, ಹೆಬ್ಬಾಳು, ಬೆಳಗ್ಗೆ 10ಕ್ಕೆ

■ **ಅಶ್ವಸೂರ್ಯ ರಿಯಾಲಿಟೀಸ್ :** ಚಾಮುಂಡೇಶ್ವರಿ ಸೆಲೆಬ್ರಿಟಿ ಪ್ರೀಮಿಯರ್ ಲೀಗ್, ವೈಟ್ ಬಾಲ್ ಕ್ರಿಕೆಟ್ ಟೂರ್ನಮೆಂಟ್, ಉದ್ಘಾಟನೆ : ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್, ಅಶ್ವಸೂರ್ಯ ರಿಯಾಲಿಟೀಸ್ ಮ್ಯಾನೇಜಿಂಗ್ ಡೈರೆಕ್ಟರ್ ರಂಜಿತ್ ಕುಮಾರ್, ಅಧ್ಯಕ್ಷತೆ : ಕೆಎಸ್‌ಸಿಎ ಸಂಚಾಲಕ ಹರಿಕೃಷ್ಣ, ಸ್ಥಳ: ಗ್ಲೇಡ್ಸ್ ಮೈದಾನ, ಮೈಸೂರು ವಿವಿ, ಬೆಳಗ್ಗೆ 8.30ಕ್ಕೆ.

■ **ಮೈಸೂರು ವಿವಿ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ :** ಪೂನಾ ಒಪ್ಪಂದ ಅಂಗವಾಗಿ ಭಾರತದ ರಾಜಕಾರಣದಲ್ಲಿ ಮೀಸಲು ಕ್ಷೇತ್ರಗಳ ರಾಜಕಾರಣದ ಪರಿಶೀಲನೆ ಕುರಿತು ಉಪನ್ಯಾಸ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಕೆ. ಶಿವಕುಮಾರ್, ಡಾ. ಹರೀಶ್ ಎಸ್. ವಾಂಖಡೆ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಪ್ರೊ. ಕೃಷ್ಣ ಹೊಂಬಾಳ್, ಸ್ಥಳ: ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ

■ **ಮಹಿಷ ಮಂಡಲೋತ್ಸವ ಆಚರಣಾ ಸಮಿತಿ :** ಮಹಿಷ ದಸರಾ, ಮಹಿಷ ಮಂಡಲೋತ್ಸವ, ಸಾನ್ನಿಧ್ಯ : ಜ್ಞಾನಪ್ರಕಾಶ ಸ್ವಾಮೀಜಿ, ಬೋಧಿದತ್ತ ಭಂತೇಜಿ, ಉದ್ಘಾಟನೆ : ಕೊಳತ್ತೂರು ಟಿ.ಎಸ್. ಮಣಿ, ಅಧ್ಯಕ್ಷತೆ : ಮಾಜಿ ಮೇಯರ್ ಪುರುಷೋತ್ತಮ್, ಮುಖ್ಯ ಅತಿಥಿಗಳು : ಪ್ರೊ. ಕೆ.ಎಸ್. ಭಗವಾನ್, ಪ್ರೊ. ಪಿ.ವಿ. ನಂಜರಾಜೇ ಅರಸ್, ಎಸ್. ಸಿದ್ದರಾಜು, ಸಿದ್ದಸ್ವಾಮಿ, ಸ್ಥಳ:ಚಾಮುಂಡಿಬೆಟ್ಟ, ಬೆಳಗ್ಗೆ 9ಕ್ಕೆ.

■ **ಮೈಸೂರು ವಿವಿ ರಾಷ್ಟ್ರೀಯ ಸೇವಾ ಯೋಜನೆ :** ಎನ್‌ಎಸ್‌ಎಸ್ ದಿನಾಚರಣೆ, ಎನ್‌ಎಸ್‌ಎಸ್ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಉದ್ಘಾಟನೆ : ಎನ್‌ಎಸ್‌ಎಸ್ ಅಧಿಕಾರಿ ಡಾ. ಪ್ರತಾಪ್ ಲಿಂಗಯ್ಯ, ಮುಖ್ಯ ಅತಿಥಿಗಳು : ಗಿರ್‌ಧರ್ ಉಪಾಧ್ಯಾಯ್, ಬಿ.ಕೆ. ಶಿವಣ್ಣ, ಪ್ರೊ. ಎಂ. ರುದ್ರಯ್ಯ, ಸ್ಥಳ: ಎನ್‌ಎಸ್‌ಎಸ್ ಭವನ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ಕನ್ನಡ ಕಲಾ ಅಭಿಮಾನಿ ಕ್ಷೌರಿಕ ಸೇವಾ ಬಳಗ :** ಉಚಿತ ಕ್ಷೌರಿಕ ಸೇವಾ ಶಿಬಿರ, ಸ್ಥಳ: ಮಾವುತರ ತಂಗುದಾಣ, ಅರಮನೆ ಆವರಣ, ಬೆಳಗ್ಗೆ 11ಕ್ಕೆ.




ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 24 ಬುಧವಾರ 2025



ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 158 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸೆ.26ರಿಂದ ಕೆಆರ್‌ಎಸ್‌ನಲ್ಲಿ

ಕಾವೇರಿ ಆರತಿ

■ ದಸರಾ ಅಂಗವಾಗಿ ಐದು ದಿನಗಳ ಕಾಲ ಸಾಂಕೇತಿಕವಾಗಿ, ಭವ್ಯ ಪೂಜಾ ಕಾರ್ಯಕ್ರಮ ■ ಶುಕ್ರವಾರ ಸಂಜೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪುಷ್ಪಾರ್ಚನೆ ■ ಆದಿಚುಂಚನಗಿರಿ, ಸುತ್ತೂರು, ಸಿದ್ದಗಂಗಾ ಶ್ರೀಗಳು ಸೇರಿ ವಿವಿಧ ಮಠಾಧೀಶರು, ಜನಪ್ರತಿನಿಧಿಗಳು ಭಾಗಿ ■ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾಹಿತಿ


ಸಂಗ್ರಹ ಚಿತ್ರ

ಬೆಂಗಳೂರು: ಕನ್ನಡ ನಾಡಿನ ಜೀವನದಿ 'ಕಾವೇರಿ ಆರತಿ' ಸೆ.26ರಿಂದ ಐದು ದಿನಗಳ ಭವ್ಯ ಕಾರ್ಯಕ್ರಮ ಕೆಆರ್‌ಎಸ್‌ನಲ್ಲಿ ಆಯೋಜನೆಯಾಗಿದೆ.

ಶುಕ್ರವಾರ ಸಂಜೆ 5 ಗಂಟೆಗೆ ಉಪ ಮುಖ್ಯಮಂತ್ರಿ ಹಾಗೂ ಜಲ ಸಂಪನ್ಮೂಲ ಸಚಿವ ಡಿ.ಕೆ.ಶಿವ ಕುಮಾರ್, ಕಾವೇರಿ ನದಿಗೆ ಪುಷ್ಪಾರ್ಚನೆ ಮಾಡುವ ಮೂಲಕ 'ಕಾವೇರಿ ಆರತಿ' ಕಾರ್ಯಕ್ರಮಕ್ಕೆ ಶಾಸ್ತ್ರೋಕ್ತವಾಗಿ ಚಾಲನೆ ನೀಡಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಮಾಹಿತಿ ನೀಡಿದ್ದಾರೆ.


ಡಿ.ಕೆ.ಶಿವಕುಮಾರ್

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ■ 11ನೇ ಪುಟಕ್ಕೆ

ಕಾವೇರಿ ಆರತಿಯ ವಿಧಿ ವಿಧಾನಗಳು

- 13 ಜನರಿಂದ ಆರತಿ, ತಲಾ ಇಬ್ಬರು ಸಹಾಯಕರು ಸೇರಿ ಒಟ್ಟು 40 ಜನರ ತಂಡ ಪೂಜೆಯಲ್ಲಿ ಭಾಗಿ.
- ಮೊದಲು 'ವಾತಾಪಿ ಗಣಪತಿಂ ಭಜೆ' ಮಂಗಳವಾದ್ಯದಿಂದ ಪೂಜೆ ಪ್ರಾರಂಭ.
- ಕಾವೇರಿ ಪ್ರಾರ್ಥನೆ, ಗಣಪತಿ ಪ್ರಾರ್ಥನೆ, ಗುರು ಪ್ರಾರ್ಥನೆ, ಸಂಕಲ್ಪ.
- ಕಾವೇರಿ ಸ್ತೋತ್ರದ ಮೂಲಕ ತೀರ್ಥಕ್ಕೆ ಪೂಜೆ, ಬಾಗಿನ ಅರ್ಪಣೆ.
- ಬ್ರಹ್ಮ, ವಿಷ್ಣು, ಮಹೇಶ್ವರರ ಪ್ರಾರ್ಥನೆ, ಚಾಮರ ಸೇವೆ.
- ಮೂರು ದಿಕ್ಕಿಗೂ ಶಂಖನಾದ, ಧೂಪದ ಆರತಿ, ಮಂತ್ರ ಪುಷ್ಪ ಪಠಣ.
- ಕೊನೆಯಲ್ಲಿ ಕುಂಭಾರತಿ, ನಾಗಾರತಿ, ಕಾವೇರಿ ಆರತಿಯೊಂದಿಗೆ ಪೂಜಾ ಕೈಂಕರ್ಯ ಸಂಪನ್ನ.

ಗಂಗಾ ನದಿಯಷ್ಟೇ ಪವಿತ್ರಳು ಕಾವೇರಿ

ಕೊಡಗಿನಲ್ಲಿ ಹುಟ್ಟಿ, ಕೃಷ್ಣರಾಜ ಸಾಗರದಲ್ಲಿ ನೆಲೆ ನಿಂತು ಮಂಡ್ಯ, ಮೈಸೂರು, ಬೆಂಗಳೂರು ದಕ್ಷಿಣ ಜಿಲ್ಲೆಗೆ ಕುಡಿಯುವ ನೀರು, ಲಕ್ಷಾಂತರ ಹೆಕ್ಟೇರ್ ಪ್ರದೇಶದ ಕೃಷಿ ಚಟುವಟಿಕೆಗಳಿಗೆ ಆಧಾರವಾಗಿರುವ ಕಾವೇರಿ, ತಮಿಳುನಾಡಿನ ಲಕ್ಷಾಂತರ ಹೆಕ್ಟೇರ್ ಪ್ರದೇಶದಲ್ಲಿ ಬೇಸಾಯ ಹಾಗೂ ಕುಡಿಯುವ ನೀರಿಗೆ ಕಾರಣೀಭೂತವಾಗಿ ಪಾಂಡಿಚೇರಿ ಮುಖಾಂತರ ಸಮುದ್ರದಲ್ಲಿ ಲೀನವಾಗುತ್ತಾಳೆ.

ಗಂಗೆಯಷ್ಟೇ ಪಾವಿತ್ರ್ಯ ಹೊಂದಿರುವ ಕಾವೇರಿ ನದಿಗೆ ಕಾವೇರಿ ಆರತಿ ಮಾಡಿ ಭಕ್ತಿ–ಭಾವದಿಂದ ನಮಿಸಿ ಪೂಜಿಸಬೇಕೆಂಬುದು ಉಪ ಮುಖ್ಯಮಂತ್ರಿಗಳೂ ಆದ ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಮಹಾ ಕನಸು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ 2024ರಲ್ಲಿ ಕೆಆರ್‌ಎಸ್‌ನಲ್ಲಿ ಕಾವೇರಿಗೆ ಬಾಗಿನ ಅರ್ಪಿಸುವ ಸಂದರ್ಭದಲ್ಲಿ ಡಿಸಿಎಂ ಈ ವಿಷಯವನ್ನು ಘೋಷಣೆ ಮಾಡಿದ್ದರು. ಅದರಂತೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ನೇತೃತ್ವದ ಶಾಸಕರ ನಿಯೋಗ ವಾರಣಾಸಿ ಮತ್ತು ಹರಿದ್ವಾರಕ್ಕೆ ಭೇಟಿ ನೀಡಿ ಗಂಗಾರತಿಯನ್ನು ■ 11ನೇ ಪುಟಕ್ಕೆ

ಯುವ ದಸರಾದಲ್ಲಿ ಅಮಲೇರಿಸುವ ಅಬ್ಬರದ ಸಂಗೀತ... ಕಣ್ಣು ಕೋರೈಸುವ ವಿದ್ಯುತ್ ದೀಪಗಳು...

ಮ್ಯೂಸಿಕ್ ಮಾಂತ್ರಿಕ ಅರ್ಜುನ್ ಜನ್ಯ ಮೋಡಿ; ಕುಣಿದು ಕುಪ್ಪಳಿಸಿದ ಯುವ ಸಮೂಹ

- ಗ್ರ್ಯಾಂಡ್ ಎಂಟ್ರಿ ಕೊಟ್ಟ ಅರ್ಜುನ್ ಜನ್ಯ
- ಮ್ಯೂಸಿಕಲ್ ರ್‍ಯಾಂಪ್‌ನಲ್ಲಿ ಪ್ರೇಕ್ಷಕರ ಎದೆಗೆ ಲಗ್ಗೆ

ಮೈಸೂರು, ಸೆ.23(ಪಿಎಂ)– ಅಮಲೇರಿಸುವ ಅಬ್ಬರದ ಸಂಗೀತ... ಬೃಹತ್ ವೇದಿಕೆಯಲ್ಲಿ ಮೂಡುತ್ತಿದ್ದ ಬಣ್ಣಬಣ್ಣದ ಬೆಳಕಿನ ಚಿತ್ತಾರದೊಂದಿಗೆ ಹಾಡು ನೃತ್ಯದ ಹೊನಲು... ನವೋಲ್ಲಾಸದಲ್ಲಿ ಯುವ ಸಮೂಹವೇ ಹೆಚ್ಚಾಗಿ ಕಿಕ್ಕಿರಿದು, ಕುಣಿದು ಕುಪ್ಪಳಿಸಿ ಸಂಭ್ರಮಿಸಿದ ಕ್ಷಣಕ್ಕೆ ಮೈಸೂರಿನ (ರಿಂಗ್‌ರಸ್ತೆ ಪಕ್ಕದ ಮೈದಾನ) ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನ ಸಮೀಪದ ಮೈದಾನ ಸಾಕ್ಷಿಯಾಯಿತು.

ಇಲ್ಲಿ ಸೆ.27ರವರೆಗೆ ಹಮ್ಮಿಕೊಂಡಿರುವ ಯುವ ದಸರಾದಲ್ಲಿ ಮೊದಲ ದಿನವಾದ ಮಂಗಳವಾರ ಕಂಡು ಬಂದ ಚಿತ್ರಣವಿದು. ಇಳಿ ಹೊತ್ತಿನ ತಂಗಾಳಿಯ ನಡುವೆ ಸೂಸುತ್ತಿದ್ದ ಚುಮುಚುಮು ಚಳಿಯಲ್ಲಿ ಚಿಮ್ಮಿದ ಸಂಗೀತದ ಕಿಚ್ಚು ಯುವ ಸಮೂಹವನ್ನು ಹುಚ್ಚೆದ್ದು ಕುಣಿಯುವಂತೆ ಮಾಡಿತು. ಗುಡುಗಿನಂತೆ ಕಂಪಿಸುತ್ತಿದ್ದ ಮ್ಯೂಸಿಕ್, ಮಿಂಚಿನಂತೆ ಮಿನುಗಿ ಮರೆಯಾಗುತ್ತಿದ್ದ ವೇದಿಕೆಯಲ್ಲಿನ ವಿದ್ಯುತ್ ದೀಪಗಳು ನಡುವೆ ಕನ್ನಡ ಚಿತ್ರರಂಗದ ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಮತ್ತು ತಂಡ ಸಂಗೀತದ ಮೋಡಿ ಮಾಡಿತು. ಅರ್ಜುನ್ ಜನ್ಯ ಸಂಗೀತದ ಸಡಗರಕ್ಕೆ ■ 11ನೇ ಪುಟಕ್ಕೆ


ಯುವ ದಸರಾದಲ್ಲಿ ಅರ್ಜುನ್ ಜನ್ಯ ಸಂಗೀತದ ಮೋಡಿ.



ಎಚ್ಚರ... ಎಚ್ಚರ... ಎಚ್ಚರ...

ಮೈಸೂರಲ್ಲಿ ವಯೋವೃದ್ಧರಿಗೆ ಉಳಿಗಾಲವಿಲ್ಲ; ನಕಲಿ ಅಪಘಾತಗಳ ಮೂಲಕ ಪುಂಡರಿಂದ ಸುಲಿಗೆ

- ಒಂದು ಪ್ರಕರಣದಲ್ಲಿ ಸುಲಿಗೆಕೋರನಿಗೆ ಚಳ್ಳೆಹಣ್ಣು ತಿನ್ನಿಸಿದರೆ; ಮತ್ತೊಂದರಲ್ಲಿ 61500 ಸುಲಿಗೆ; ಇನ್ನೊಂದು ಪ್ರಕರಣದಲ್ಲಿ ದಾಂಧಲೆ ಬಯಲಾಗಿ ಕಾಲ್ಕಿತ್ತ ಪುಂಡರು
- ಪೊಲೀಸರು ಗಂಭೀರವಾಗಿ ಪರಿಗಣಿಸದ ಹಿನ್ನೆಲೆಯಲ್ಲಿ ನಿರಂತರವಾಗಿ ದುಷ್ಕರ್ಮಿಗಳ ಅಟ್ಟಹಾಸ!

ಮೈಸೂರು, ಸೆ23(ಆರ್‌ಕೆ)– ಮೈಸೂರಲ್ಲಿ 'ನಕಲಿ ಅಪಘಾತ'ದ ಮೂಲಕ ಹೊಸ ಮಾದರಿ ಸುಲಿಗೆ ವ್ಯಾಪಕವಾಗಿ ನಡೆಯುತ್ತಿದೆ. ಅಚ್ಚರಿ ಎಂದರೆ ಇದಕ್ಕೆ ಹಿರಿಯ ನಾಗರಿಕರೇ ಗುರಿಯಾಗುತ್ತಿದ್ದಾರೆ.

ಕಳೆದ ಐದಾರು ತಿಂಗಳಲ್ಲಿ ಇಂತಹ ಅನೇಕ ಪ್ರಕರಣಗಳು ನಡೆದಿದ್ದರೂ ಹಲವು ಕಾರಣಗಳಿಂದ ಬೆಳಕಿಗೆ ಬಂದಿಲ್ಲ. ಸಾರ್ವಜನಿಕರಿಗೆ ಯಾವುದೇ ಅನುಮಾನ ಬಾರದಂತೆ, ಪೊಲೀಸರಿಗೂ ಸಿಕ್ಕಿಬೀಳದಂತೆ ದುಷ್ಕರ್ಮಿಗಳು ವ್ಯವಸ್ಥಿತವಾಗಿ ಸಂಚು ರೂಪಿಸುತ್ತಿದ್ದಾರೆ. ಈ ಬಗ್ಗೆ 'ಮೈಸೂರು ಮಿತ್ರ'ನಲ್ಲಿ ಪ್ರಕಟವಾದ ವರದಿಯಿಂದ ಎಚ್ಚೆತ್ತುಕೊಂಡ ವೃದ್ಧರೊಬ್ಬರು ನಕಲಿ ಅಪಘಾತ ವಂಚಕರಿಗೇ ಚಳ್ಳೆಹಣ್ಣು ತಿನ್ನಿಸಿರುವ ಪ್ರಸಂಗವೂ ನಡೆದಿದೆ.

ಪಾರಾದ ಹಿರಿಯರು: ಸೆ.18 ರಂದು ಕುವೆಂಪುನಗರದ ಶಾಂತಿಸಾಗರ್ ಬಳಿ ಅಪಘಾತದ ನೆಪವೊಡ್ಡಿ ಪುಂಡ ನೋರ್ವ ಹಿರಿಯ ನಾಗರಿಕರಿಂದ 85,000 ರೂ. ಸುಲಿಗೆ ಮಾಡಿ ಪರಾರಿಯಾದ ಬೆನ್ನಲ್ಲೇ ಬೋಗಾದಿಯ ರೂಪಾನಗರ ನಿವಾಸಿ 82 ವರ್ಷದ ಕಿರಿಯಮಾಡ ತಮ್ಮಯ್ಯ ಅವರು 'ಮೈಸೂರು ಮಿತ್ರ'ನ ವರದಿಯಿಂದ ಎಚ್ಚೆತ್ತು, ನಕಲಿ ಅಪಘಾತ ವಂಚಕನಿಗೆ ಚಳ್ಳೆಹಣ್ಣು ತಿನ್ನಿಸಿರುವ ಪ್ರಸಂಗ ಕಳೆದ ಶನಿವಾರ ನಡೆದಿದೆ. ■ 11ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ನನಗೆ ಹೊಟ್ಟೆ ಉರಿತಾ ಇದೆ...!
ಗಂಡ : ಯಾವಾಗಿನಿಂದ?
ಹೆಂಡತಿ : ಎದುರು ಮನೆ ಸುಮಕ್ಕನ ಕೊರಳಲ್ಲಿ 'ನೆಕ್ಲೆಸ್' ನೋಡಿದಾಗಿನಿಂದ!

ಮೈಸೂರು ಮಿತ್ರ
ಬುಧವಾರ, 24 ಸೆಪ್ಟೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ನಂಬಿಕೆಯಲ್ಲಿಯೂ ಸಹ ಜಾಗರೂಕರಾಗಿರಬೇಕು. ಏಕೆಂದರೆ ಕೆಲವೊಮ್ಮೆ ನಮ್ಮ ಸ್ವಂತ ಹಲ್ಲುಗಳು ನಾಲಿಗೆಯನ್ನು ಕಚ್ಚಿಬಿಡುತ್ತೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ.

ನಿಮ್ಮ ಪತ್ರಗಳು

ಜಿಲ್ಲಾಧಿಕಾರಿಗಳು, ಪೊಲೀಸ್ ಆಯುಕ್ತರಲ್ಲಿ ಮನವಿ

ಮಾನ್ಯರೆ,

ದಸರಾ ಮೆರವಣಿಗೆಯ ದಿನ ಖಾಸಗಿಯವರು ಫುಟ್‌ಪಾತ್‌ಗಳಲ್ಲಿ ಶಾಮಿಯಾನ ಹಾಕುವುದನ್ನು ಮತ್ತು ಹೋಟೆಲ್ ಮುಂದೆ ಮಾಲೀಕರು ವೇದಿಕೆ ನಿರ್ಮಿಸುವುದನ್ನು ಮತ್ತು ಸಯ್ಯಾಜಿರಾವ್ (ಬಂಬೂಬಜಾರ್) ಸರ್ವಿಸ್ ರಸ್ತೆಯಲ್ಲಿ ಮಾರಾಟಕ್ಕಿಟ್ಟಿರುವ ವಾಹನಗಳನ್ನು ತೆಗೆಸುವಂತೆ ಮನವಿ.

ವಿಶ್ವ ವಿಖ್ಯಾತ ಪ್ರಸಿದ್ಧಿ ಪಡೆದಿರುವ ಮೈಸೂರು ದಸರಾ ಮೆರವಣಿಗೆ (ಜಂಬೂ ಸವಾರಿ, ವಿಜಯದಶಮಿ) ಸಮೀಪಿಸುತ್ತಿದ್ದಂತೆ ಮೈಸೂರು ನಗರದ ಚಿತ್ರಣವೇ ಅಲಂಕಾರಿಕ ದೀಪಗಳಿಂದ ಬದಲಾಗುತ್ತಿದೆ. ದಸರಾ ಸಮೀಪಿಸುತ್ತಿದ್ದಂತೆ ವಿಶ್ವದ ನಾನಾ ಮೂಲೆಗಳಿಂದ ಜನರು ನಮ್ಮ ಮೈಸೂರು ನಗರಕ್ಕೆ ಲಗ್ಗೆಯಿಡುತ್ತಾರೆ.

ಆದರೆ ಕಳೆದ 8–10 ವರ್ಷಗಳಿಂದ ದಸರಾ ಮೆರವಣಿಗೆಯ ದಿನ ಖಾಸಗಿಯವರು ಎರಡು ಬದಿಯ ಫುಟ್‌ಪಾತ್‌ಗಳಲ್ಲಿ ಶಾಮಿಯಾನ (ಪೆಂಡಾಲ್) ಹಾಕಿಕೊಳ್ಳುತ್ತಾರೆ. ಕೆಲವು ಖಾಸಗಿ ಹೋಟೇಲ್‌ನವರು ಸಹ ತಮ್ಮ ಹೋಟೇಲ್ ಮುಂದೆ ಇರುವ ಫುಟ್‌ಪಾತ್‌ನಲ್ಲಿ ಪೆಂಡಾಲ್ ಹಾಕಿ ವೇದಿಕೆಯನ್ನು ನಿರ್ಮಿಸಿಕೊಳ್ಳುತ್ತಾರೆ. ಅದರೆ ಮೆರವಣಿಗೆ ದಿನ ಇವರಿಗೆ ಯಾರು ಅನುಮತಿ ನೀಡಿರುತ್ತಾರೋ ಗೊತ್ತಿಲ್ಲ. ಇದು ಸ್ಥಳೀಯ ಪೊಲೀಸರು ಮತ್ತು ಜಿಲ್ಲಾಡಳಿತದ ಗಮನಕ್ಕೆ ಬಂದರೂ ಇದನ್ನು ತೆಗೆಸುವುದಿಲ್ಲ. ಸಯ್ಯಾಜಿರಾವ್ ರಸ್ತೆ (ಬಂಬೂ ಬಜಾರ್) ಬಳಿ ದಸರಾ ಮೆರವಣಿಗೆ ನೋಡಲೆಂದು ಹಿಂದಿನ ಮೈಸೂರು ಮಹಾರಾಜರು ಮೆಟ್ಟಿಲುಗಳನ್ನು ನಿರ್ಮಿಸಿದ್ದಾರೆ. ಈ ಜಗಲಿ ಜನರ ಬಾಯಲ್ಲಿ ದಸರಾ ಕಟ್ಟೆ ಎಂದು ಪ್ರಸಿದ್ಧಿ ಪಡೆದಿದೆ. ಬಂಬೂಬಜಾರ್ ಸಿಗ್ನಲ್ ವೃತ್ತದಿಂದ ಹೈವೇ ವೃತ್ತದ ಸರ್ವಿಸ್ ರಸ್ತೆಯಲ್ಲಿ ಅನೇಕ ಸೆಕೆಂಡ್‌ಹ್ಯಾಂಡ್ ಕಾರ್ ಷೋ ರೂಂಗಳು ತಲೆ ಎತ್ತಿವೆ. ಇದರ ಮಾಲೀಕರು ಮೆರವಣಿಗೆಯ ದಿನ ಮಾರಾಟಕ್ಕಿರುವ ಕಾರುಗಳನ್ನು ಸರ್ವಿಸ್ ರಸ್ತೆಯಲ್ಲಿ ನಿಲ್ಲಿಸಿ ತಮ್ಮ ಅಂಗಡಿಗಳ ಮುಂದೆ ಶಾಮಿಯಾನ ಹಾಕಿಕೊಂಡಿರುತ್ತಾರೆ. ಜೊತೆಯಲ್ಲಿ ಖಾಸಗಿಯವರು ಸರ್ವಿಸ್ ರಸ್ತೆಯಲ್ಲಿ ಲಾರಿಗಳನ್ನು ನಿಲ್ಲಿಸಿರುತ್ತಾರೆ. ಇದರಿಂದ ಸೆಕೆಂಡ್‌ಹ್ಯಾಂಡ್ ಷೋ ರೂಂ ಮಾಲೀಕರು ಹಾಕುವ ಶಾಮಿಯಾನದಲ್ಲಿ ಆಕಸ್ಮಾತ್ ಇತರೆ ಜನರು ಪ್ರವೇಶಿಸಿದರೆ ಘರ್ಷಣೆಗಳಾಗುತ್ತವೆ. ಈ ಘರ್ಷಣೆ ನಡೆಯುವ ಸ್ಥಳದಲ್ಲಿ ಪೊಲೀಸರು ಇರುವುದಿಲ್ಲ. ಕಾರಣ ಅವರೆಲ್ಲಾ ಮೆರವಣಿಗೆಯ ಜವಾಬ್ದಾರಿಯಲ್ಲಿರುತ್ತಾರೆ. ಈ ಖಾಸಗಿಯವರು ಹಾಕುವ ಶಾಮಿಯಾನದಿಂದ ದೂರದ ಊರುಗಳಿಂದ ಬರುವ ವೀಕ್ಷಕರಿಗೆ ನಿರಾಸೆಯಾಗುತ್ತದೆ.

–ಎಂ.ಎನ್. ಧರಣಿ ವೆಂಕಟೇಶ, ಸಾಮಾಜಿಕ ಕಾರ್ಯಕರ್ತ, ಮೈಸೂರು

ಜಾತಿವಾರು ಸಮೀಕ್ಷೆ: ಮುಂದೂಡಿಕೆ ಸೂಕ್ತ

ಮಾನ್ಯರೆ,

ಸ್ವಾತಂತ್ರ್ಯ ಗಳಿಸಿ 78 ವರ್ಷಗಳು ಕಳೆಯಿತೆಂದು ಕೇವಲ ಆ ಸವೆಸಿದ ವರ್ಷಗಳ ಸಂಖ್ಯೆಯನ್ನು ನೋಡಿ ಸಂಭ್ರಮಿಸುತ್ತಿರುವಂತಹ ಸನ್ನಿವೇಶ ಇದೆಯೇ ಹೊರತು ಇನ್ನೂ ಧ್ವನಿ ಇಲ್ಲದ ವರ್ಗಕ್ಕೆ ನ್ಯಾಯ ಒದಗಿಸಲು ವಿಫಲವಾಗಿರುವುದು ಸತ್ಯ. ಇದರ ಪ್ರಯತ್ನವಾಗಿ ಈಗಿನ ಸಮೀಕ್ಷೆಯ ಪ್ರಶ್ನಾವಳಿಗಳನ್ನು ಹಾಗೂ ಜಾತಿವಾರು ಸಂಘಟನೆಗಳು ಸಭೆಗಳನ್ನು ನಡೆಸಿ ಹಾಗೂ ಪತ್ರಿಕೆಗಳ ಮೂಲಕ ತಮ್ಮ ಸಮಾಜಕ್ಕೆ ನೀಡುತ್ತಿರುವ ಸಂದೇಶಗಳನ್ನು ಗಮನಿಸಿದಾಗ ಇದು ಪ್ರಮುಖವಾಗಿ ಜಾತಿ ಸಮೀಕ್ಷೆಯ ಮಾಹಿತಿಯನ್ನು ಒಳಗೊಂಡಿದ್ದರೂ ತಾಂತ್ರಿಕ ಕಾರಣದಿಂದ ಮಾತ್ರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಎಂಬುದಾಗಿ ಸರ್ಕಾರ ಹೇಳುತ್ತಿದೆ. ಅದು ಏನೇ ಆದರೂ ಈಗ ಪ್ರಸ್ತುತ ಸದ್ದು ಮಾಡುತ್ತಿರುವುದು ಜಾತ್ಯಾತೀತ ರಾಷ್ಟ್ರವಾದರೂ ಧ್ವನಿ ಶಕ್ತಿಯನ್ನು ಒಳಗೊಂಡಿರುವ ಬಲಾಢ್ಯ ಜಾತಿಗಳ ಸಂಘಟನೆಗಳು ಮಾತ್ರ. ಇವೆಲ್ಲದರ ಚರ್ಚೆಗಳ, ಭಿನ್ನಾಭಿಪ್ರಾಯಗಳ ನಡವೆಯೂ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರದ ಉದ್ದೇಶ ಸೌಲಭ್ಯ ವಂಚಿತರಿಗೆ ಸವಲತ್ತುಗಳನ್ನು ತಲುಪಿಸುವೆಡೆಯ ದೃಢ ಪ್ರಯತ್ನ ಶ್ಲಾಘನಾರ್ಹ. ಇದರ ಅಂಗವಾಗಿ ಇದೇ ಸೆ. 22 ರಂದು ಈ ಬಗ್ಗೆ ಸಮೀಕ್ಷೆ ಕೈಗೊಳ್ಳಲು ಸರ್ಕಾರಿ ಆದೇಶ ಹೊರಡಿಸಲಾಗಿದೆ. ಸಮೀಕ್ಷೆ ಕೂಡ ಆರಂಭವಾಗಿದೆ. ಆದರೆ ಇದು ದಸರಾ ಸಮಯ. ಶಾಲಾ ಕಾಲೇಜುಗಳಿಗೆ ರಜೆ. ಪೋಷಕರು ಪ್ರವಾಸ ತೆರಳಿರಬಹುದಾದ ಸಂಭವಗಳೂ ಇರುತ್ತವೆ. ಅಲ್ಲದೇ ಸಮೀಕ್ಷೆ ಮಾಡುವವರಿಗೂ ಇದು ಹಬ್ಬದ ಸಮಯ. ಆದುದರಿಂದ ಸಮೀಕ್ಷೆ ಹೆಚ್ಚಿನ ಫಲಪ್ರದವಾಗಬೇಕಾದರೆ ಸ್ವಲ್ಪ ದಿನಗಳ ಮಟ್ಟಿಗೆ ಮುಂದೂಡುವುದು ಒಳಿತೇನೋ.

–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು

ನಂದಿನಿ ಮೊಸರಿನ ಬೆಲೆ ಇಳಿಸಲಿ

ಮಾನ್ಯರೆ,



ಕೇಂದ್ರ ಸರ್ಕಾರ ಜಿಎಸ್‌ಟಿಯಲ್ಲಿ ಭಾರೀ ಬದಲಾವಣೆ ತಂದಿರುವ ಕಾರಣ ಆಹಾರ ಪದಾರ್ಥಗಳ ಮೇಲಿನ ಬೆಲೆ ಕೆಲವು ಶೂನ್ಯಕ್ಕೆ ಹಾಗೂ 5% ಇಳಿಕೆಯಾಗಿವೆ. ದಿನಾಂಕ 19.8.25 ರ ಪತ್ರಿಕೆಗಳಲ್ಲಿ ಸೆಪ್ಟೆಂಬರ್ 22 ರಿಂದ ಮೊಸರು, ತುಪ್ಪದ ಬೆಲೆ ಇಳಿಕೆಯಾಗಲಿವೆ. ಮೊಸರಿನ ಬೆಲೆ ಲೀಟರ್‌ಗೆ 4 ರೂ ಇಳಿಕೆಯಾಗಲಿದೆ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕರು ಹೇಳಿಕೆ ನೀಡಿದ್ದರು. ಪ್ರಸ್ತುತ 12% ಇದ್ದ ಜಿಎಸ್‌ಟಿ ಈಗ 5% ಅಥವಾ ಶೂನ್ಯಕ್ಕೆ ಇಳಿದಿದೆ. ಆದರೆ 20.9.25 ರಂದು ಈಗ ಕೆಎಂಎಫ್ ಮೊಸರಿನ ಬೆಲೆ ಇಳಿಸುವ ನಿರ್ಧಾರದಿಂದ ಹಿಂದೆ ಸರಿದಿದೆ. ಇದು ಗ್ರಾಹಕರ ಸುಲಿಗೆಯಾಗಿದೆ. ಹಾಗೂ ಗ್ರಾಹಕ ಕಾನೂನಿಗೆ ವಿರುದ್ಧವಾಗಿದೆ. ಕೇಂದ್ರ ಸರ್ಕಾರ ತೆರಿಗೆ ಇಳಿಸಿದರೂ ಕೆಎಂಎಫ್ ಎಂದಿನಂತೆ ದರೋಡೆ ವರಸೆಯನ್ನು ಮುಂದುವರಿಸಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಕ್ರಮ ಕೈಗೊಂಡು ಬೆಲೆ ಇಳಿಸಿ ಗ್ರಾಹಕರ ಹೊರೆ ಕಡಿಮೆ ಮಾಡಲಿ. ಮುಖ್ಯಮಂತ್ರಿಗಳು ಈ ಬಗ್ಗೆ ಕ್ರಮ ವಹಿಸಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ನೋಡಬನ್ನಿ ನಮ್ಮ ದಸರಾ...!

ನೋಡಬನ್ನಿ ನಮ್ಮ ಕರುನಾಡ ದಸರಾ...!
ವಿಶ್ವದೆಲ್ಲೆಡೆ ಪಸರಿಸಿದ ನಮ್ಮ ನಾಡ ಹೆಸರ.
ರಮ್ಯ ಮನೋಹರ ಅರಮನೆಯೇ ಮೈಸೂರಿಗೆ ಸಿಂಗಾರ...!
ವಿದ್ಯುತ್ ಅಲಂಕಾರವೇ ಅವಳುದರದ ಬಂಗಾರ.
ಕಣ್ಣೆರಡು ಸಾಲದು ನೋಡಲು ಖಾಸಗಿ ದರ್ಬಾರು...!
ರಾಜರ ಪೋಷಾಕಿನಲ್ಲೇ ನಡೆವುದಿಲ್ಲಿ ಎಲ್ಲ ಕಾರುಬಾರು.
ಬೆಟ್ಟದಿಂದಿಳಿದು ಬರುವಳು ತಾಯಿ ಚಾಮುಂಡಿ...!
ಸಾಗುವುದು ನಂತರ ಕರುನಾಡ ಸಾಂಸ್ಕೃತಿಕ ಬಂಡಿ.
ಅಭಿಮನ್ಯುವಿನ ಗಾಂಭೀರ್ಯ ನಡಿಗೆಯ ಜಂಬೂಸವಾರಿ...!
ಮನಸ್ಸಿಗೆ ಉಲ್ಲಾಸ ನೀಡುವ ಕಲೆಗಳ ತರಾವರಿ.
ಒಮ್ಮೆಯಾದರು ದಸರೆಯ ಈ ವೈಭವವ ನೋಡಬನ್ನಿ...!
ಚಾಮುಂಡಮ್ಮನಿಗೆ ಉಘೇ ಎಂದು ಹೇಳಬನ್ನಿ.

–ಸಬಿತ ಕೊಡಂದೇರ, ಆಂಗ್ಲ ಭಾಷೆಯ ಉಪನ್ಯಾಸಕರು, ಮೈಸೂರು.

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸರಳತೆಯ ನೀಡೆನಗೆ ಮುದ್ದುರಾಮ

ಲೋಕದಲ್ಲಿ ಆಡಂಬರ ವಿಜೃಂಭಿಸುತ್ತಿದೆ. ಸಮಾರಂಭಕ್ಕೆ ಬರುವ ಅತಿಥಿಗಳು ಗರಿಗರಿ ಸೂಟು ಟೈಗಳನ್ನು ಹಾಕಿಕೊಂಡು ಬಂದರೆ ವಿಶೇಷ ಮರ್ಯಾದೆ. ಮದುವೆಗೆ ಬರುವ ಸ್ತ್ರೀಯರು ಅಗಲ ಅಂಚಿನ ರೇಷ್ಮೆ ಸೀರೆಯನ್ನೂ ಥಳ ಥಳಿಸುವ ವಜ್ರ ಖಚಿತ ಬಂಗಾರದ ಆಭರಣಗಳನ್ನೂ ತೊಟ್ಟು ಬಂದರೆ ಅತ್ಯಾದರದ ಸ್ವಾಗತ. ವಿವಾಹ ಮಂಡಪದ ಅಲಂಕಾರಕ್ಕೇ ಲಕ್ಷಾಂತರ ರೂಪಾಯಿಗಳ ಖರ್ಚು ಇತ್ಯಾದಿ ಎಲ್ಲೆಲ್ಲಿ ನೋಡಿದರೂ ವೈಭವವನ್ನು ತೋರಿಸಿಕೊಳ್ಳುವ ಹಂಬಲ.

ಹೀಗೆ ಸಮಾಜವಿದ್ದರೂ ಜ್ಞಾನಿಗಳು ತೋರಿಕೆಗೆ ಆಸೆಪಡದೆ ಸರಳತೆಯನ್ನೇ ಅವಲಂಬಿಸುತ್ತಾರೆ. ಇದಕ್ಕೆ ಶ್ರೇಷ್ಠ ಉದಾಹರಣೆ ಶ್ರೀ ಪೂಜ್ಯ ಸಿದ್ದೇಶ್ವರ ಸ್ವಾಮಿಗಳಾಗಿದ್ದರು. ವಸ್ತ್ರದಿಂದ ಶೋಭಿಸಬೇಕೆಂದು ಅವರೆಂದೂ ಅಪೇಕ್ಷಿಸಲಿಲ್ಲ. ಕೋಟಿ ರೂಪಾಯಿಗಳ ಕಾರಿನಲ್ಲಿ ಬಂದು ಜನರನ್ನು ಮೆಚ್ಚಿಸಬೇಕೆಂದು ಬಯಸಲಿಲ್ಲ. ಸರಳತೆಯೇ ಮೂರ್ತಿವೆತ್ತಂತೆ ಅವರಿದ್ದರು. ಮಾತಿನಲ್ಲೂ ಅವರು ಸರಳವಾಗಿದ್ದರು. ಜನರಿಗೆ ಅರ್ಥವಾಗದ ಪದಪುಂಜಗಳನ್ನು ಬಳಸಿ ಮರಳುಗೊಳಿಸಲು ಅವರು ಪ್ರಯತ್ನಿಸುತ್ತಿರಲಿಲ್ಲ. ಸರಳತೆ, ಸಿಂಪ್ಲಿಸಿಟಿ ಎಂಬುದು ಅವರ ಸ್ವಭಾವವೇ ಆಗಿತ್ತು.

ಸಿದ್ದೇಶ್ವರ ಸ್ವಾಮಿಗಳಲ್ಲಿ ಅಚಲ ಶ್ರದ್ಧೆಯನ್ನು ಹೊಂದಿದ್ದ ಕವಿ ಕೆ.ಸಿ. ಶಿವಪ್ಪ ಅವರು ಸರಳತೆಯನ್ನೇ ಗುರುವಿನಿಂದ ಬೇಡಿಕೊಳ್ಳುತ್ತಾರೆ ಒಂದು ಚೌಪದಿಯಲ್ಲಿ –

ಕಲಿಸೆನಗೆ ಓ ಗುರವೆ ಮರುಗುವುದ ಮಣಿಯುವುದ
ಪರಸುಖಕೆ ಹಿಗ್ಗುವುದ ನೋವನಿಳಿಸುವುದ
ಬೀಗದಿಹ ಮನವೊಂದ, ಸರಳತೆಯ ನೀಡೆನಗೆ
ಮನ್ನಿಸೈ ತಪ್ಪುಗಳ ಮುದ್ದುರಾಮ

ಇಲ್ಲಿ ಏಳು ಕೋರಿಕೆಗಳಿವೆ. ಒಂದನೆಯ ಪ್ರಾರ್ಥನೆ ಪರರಿಗಾಗಿ ಮರುಗುವುದನ್ನು ಕಲಿಸು ಎಂಬುದು. ಕಷ್ಟದಲ್ಲಿದ್ದವರಿಗಾಗಿ ಮರುಗುವುದು ಮಾನವನ ಮುಖ್ಯ ಗುಣ. ಆ ಮರುಕವೇ ಹುಟ್ಟದಿದ್ದರೆ ಉಪಕಾರ ಮಾಡುವ ಬುದ್ಧಿ ಹೇಗೆ ಹುಟ್ಟೀತು? ಗುರು ಅದನ್ನು ಕಲಿಸಬೇಕು. ಎರಡನೆಯ ಕೋರಿಕೆ ಮಣಿಯುವುದನ್ನು ಕಲಿಸು ಎಂಬುದು. ವಯಸ್ಸಿನಲ್ಲಿ, ವಿದ್ಯೆಯಲ್ಲಿ, ಗುಣದಲ್ಲಿ, ದೊಡ್ಡವರು, ಹಿರಿಯರು ಇರುತ್ತಾರೆ. ಅಂತಹವರಿಗೆ ವಿನಯದಿಂದ ನಮಸ್ಕರಿಸುವುದೇ ಮಣಿಯುವುದು. ಮೂರನೆಯ ಕೋರಿಕೆ ಪರ ಸುಖಕೆ ಹಿಗ್ಗುವುದನ್ನು ಕಲಿಸಬೇಕೆಂದು. ನಾವು ನಮಗೆ ಒಳ್ಳೆಯದಾದಾಗ ಹಿಗ್ಗುತ್ತೇವೆ. ಆದರೆ ಬೇರೆ ಯಾರಿಗೋ ಒಳ್ಳೆಯದಾದರೆ ಮಾತ್ಸರ್ಯ ನಮ್ಮನ್ನು ಆಕ್ರಮಿಸುತ್ತದೆ. ಹಾಗೆ ಆಗದಿರಲಿ. ಪರರಿಗೆ ಹಿತವಾದಾಗಲೂ ನಾವು ಹಿಗ್ಗುವ ಗುಣವನ್ನು ಗುರು ಕಲಿಸಬೇಕು. ನಮ್ಮ ಮತ್ತು ನಮ್ಮವರ ನೋವನ್ನು ಇಳಿಸಲು ನಾವು ಪ್ರಯತ್ನಿಸುವುದು ಇದ್ದೇ ಇದೆ. ಆದರೆ ಪರರಿಗೆ ನೋವಾದರೂ ಅದನ್ನು ಇಳಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುವುದನ್ನೂ ಗುರು ಕಲಿಸಬೇಕು. ಐಶ್ವರ್ಯದಿಂದ, ರೂಪದಿಂದ, ಅಧಿಕಾರದಿಂದ ನಾವು ಬೀಗುತ್ತೇವೆ. ಬಿಂಕದಿಂದ ನಡೆದುಕೊಳ್ಳುತ್ತೇವೆ. ಹಾಗೆ ಮಾಡದೆ ಬೀಗದೆ ಇರುವ ಮನಸ್ಸನ್ನು ಗುರು ನೀಡಬೇಕು.

ಎಲ್ಲಕ್ಕಿಂತ ಹೆಚ್ಚಾಗಿ ಸರಳತೆಯನ್ನು, ಸರಳ ಸ್ವಭಾವವನ್ನು ಗುರು ನಮಗೆ ಕಲಿಸಬೇಕು. Simple living and high thinking ನಮ್ಮ ವ್ರತವಾಗಬೇಕು. ಈ ಎಲ್ಲಾ ಅಂಶಗಳಲ್ಲಿ ನಾವು ಮಾಡಿರುವ ತಪ್ಪುಗಳನ್ನು ಗುರು ಕ್ಷಮಿಸಬೇಕೆನ್ನುವುದು ಮುದ್ದುರಾಮನ ಪ್ರಾರ್ಥನೆ.

ಸರಳತೆ ಇಲ್ಲದವರು ಅನವಶ್ಯಕವಾದ ವಸ್ತು ಸಂಗ್ರಹವನ್ನು ಮಾಡುತ್ತಾರೆ. ನಮ್ಮಲ್ಲಿ ಮುಖ್ಯಮಂತ್ರಿಯಾಗಿದ್ದ ಒಬ್ಬಾಕೆ ಸಾವಿರ ಪಾದರಕ್ಷೆಗಳನ್ನು ಇಟ್ಟುಕೊಂಡಿದ್ದಳೆಂದು ಕೇಳಿದ್ದೇವೆ. ಈಗಲೂ ಕೆಲವರು ಎರಡು, ನಾಲ್ಕು ಕಾರುಗಳನ್ನು ಮನೆಯಲ್ಲಿ ಇಟ್ಟುಕೊಂಡಿರುವ ಮಹಾನುಭಾವರಿದ್ದಾರೆ. ಅಂತಹ ಆಡಂಬರಗಾರರನ್ನು ಕುರಿತು ನಮ್ಮ ಮುದ್ದುರಾಮ ಹೇಳುತ್ತಾನೆ –

ಇರುವೊಂದು ತಲೆಗಾಗಿ ನೂರು ಟೋಪಿಗಳೇಕೆ?
ನಾವ್ ನಡೆವ ಕಾಲೆರಡು ನೂರು ಜೋಡೇಕೆ?
ಈ ಕಾಯ ಮುಚ್ಚಲಿಕೆ ಸೀರೆ ಸಾವಿರವೇಕೆ?
ಸರಳತೆಯ ನೀ ಕಲಿಯೊ ಮುದ್ದುರಾಮ ॥

ಮನುಷ್ಯರಿಗೆ ಇರುವುದು ಒಂದೇ ತಲೆ. ಬ್ರಹ್ಮನಿಗೆ ನಾಲ್ಕು ಷಣ್ಮುಖನಿಗೆ ಆರು, ರಾವಣನಿಗೆ ಹತ್ತು ತಲೆಗಳಿದ್ದುವು ಎಂಬುದು ಕಲ್ಪನಾ ಲೋಕದಲ್ಲಿ ಮಾತ್ರ ಚೆನ್ನ. ಹಾಗಿರುವ ಒಂದು ತಲೆಗೆ ಒಂದು ಟೋಪಿ ಸಾಕು. ನೂರು ಟೋಪಿ ಅನವಶ್ಯಕ. ತಲೆಗೆ ಟೋಪಿ ಇಲ್ಲದೆ ಬಿಸಿಲಿನಲ್ಲಿ ನಡೆಯುವವರಿಗೆ, ನೂರು ಜನರಿಗೆ ಅವನ್ನು ಹಂಚಿದರೆ ಸಾರ್ಥಕ. ನಮಗಿರುವುದು ಎರಡು ಕಾಲು. ಅವಕ್ಕೆ ಒಂದೇ ಜೋಡು (ಒಂದು ಜೋಡಿ ಚಪ್ಪಲಿಗಳು) ಸಾಕಲ್ಲವೆ? ನೂರು ಜೊತೆ ಚಪ್ಪಲಿಗಳೇಕೆ? ಹಣವಿದೆ, ಖರ್ಚು ಮಾಡಬೇಕಾಗಿದೆ ಎಂದರೆ ಸುಡುವ ರಸ್ತೆಯ ಮೇಲೆ ಬರಿಗಾಲಿನಲ್ಲಿ ನಡೆಯುವ ನೂರು ಜನ ಬಡವರಿಗೆ ಕೊಡಿಸಿ. ಮೈ ಮುಚ್ಚಲು ಬಟ್ಟೆ ಬೇಕು. ಅದರೆ ಒಬ್ಬರಿಗೆ ಸಾವಿರ ಸೀರೆ ಏಕೆ? ಆಡಂಬರವನ್ನು ಬಿಟ್ಟು ಸರಳವಾಗಿ ಬದುಕುವುದನ್ನು ನೀನು ಕಲಿತುಕೋ ಎನ್ನುತ್ತಿದ್ದಾನೆ ಮುದ್ದುರಾಮ.

ಎಷ್ಟೋ ಜನರಿಗೆ ಸಭೆಯಲ್ಲಿ ಎದುರಾಗಿ ವೇದಿಕೆಯ ಮೇಲೆ ಕುಳಿತುಕೊಳ್ಳಬೇಕೆಂಬ ಹಂಬಲ. ಅದಾಗದಿದ್ದರೆ ಎಲ್ಲರಿಗಿಂತ ಮುಂದಿನ ಸಾಲಿನಲ್ಲಿ ಆದರೂ ಕುಳಿತುಕೊಳ್ಳಬೇಕು, ಅಧ್ಯಕ್ಷರೋ ಭಾಷಣಕಾರರೋ ತಮ್ಮ ಹೆಸರನ್ನು ಹೇಳಿ 'ಇವರೂ ಉಪಸ್ಥಿತರಾಗಿದ್ದಾರೆ' ಎಂದು ಹೇಳಬೇಕು ಎಂಬುದು ಅವರ ಅಪೇಕ್ಷೆ. ಅವರಿಗೆ ಮುದ್ದುರಾಮನ ಮಾತು –

ಪಂಡಿತರ ಸಂಗದಲಿ ಕೂರು ನೀ ಮಣೆ ಮೇಲೆ
ಮರೆ ರತ್ನ ಖಚಿತ ಸಿಂಹಾಸನದ ಮೋಹ
ಕಳಪೆ ತೋರಿಕೆಯತ್ತ ಮೂಗು ಮುರಿವುದು ಮೇಲು
ಮಣೆ ಹಾಕು ಸರಳತೆಗೆ ಮುದ್ದುರಾಮ

ತಿಳಿದವರ ಮಧ್ಯದಲ್ಲಿದ್ದಾಗ ನನಗೆ ಉನ್ನತವಾದ ಪೀಠವೇ ಬೇಕು ಎಂಬ ಆಶೆ ಬೇಡ. ನಾನು ಶ್ರೀಮಂತ, ನನಗೆ ಕೂರಲು ರತ್ನ ಸಿಂಹಾಸನವೇ ಬೇಕು ಎಂಬ ಧೋರಣೆ ಸಲ್ಲದು. ಆ ಮೋಹವನ್ನಿಟ್ಟುಕೊಳ್ಳಬೇಡ. ಎಲ್ಲರಿಗಾಗಿ ಹಾಕಿದ ಮಣೆಗಳಲ್ಲಿ ಒಂದರ ಮೇಲೆ ಕುಳಿತಕೊಂಡರೆ ಸಾಕು. ಕೆಲವರು ಆ ಸಭೆಗಳಲ್ಲೂ ತಮ್ಮ ಹೆಗ್ಗಳಿಕೆಯನ್ನು ತೋರಿಸಲು ಯತ್ನಿಸುತ್ತಿರುತ್ತಾರೆ. ಅಂತಹವರ ಬಗೆಗೆ ಮೂಗು ಮುರಿಯುವುದೇ ಲೇಸು.

ಮಣೆ ಹಾಕುವುದೆಂದರೆ ಗೌರವವನ್ನು ತೋರಿಸುವುದು. ಸರಳತೆಗೇ ನಾವು ಮಣೆ ಹಾಕಬೇಕು. ಆಡಂಬರಕ್ಕಲ್ಲ ಎಂಬುದು ಮುದ್ದುರಾಮನ ಉಪದೇಶ.

ಬಾಳಿನಲ್ಲಿ ಸಾಧಿಸಬೇಕಾದದ್ದು ಎಷ್ಟೋ ಇದೆ. ಎಲ್ಲವನ್ನೂ ಸಾಧಿಸುವುದು ಬದುಕಿನ ಮಿತ ಕಾಲದಲ್ಲಿ ಅಶಕ್ಯ. ಯಾವುದಕ್ಕೆ ಆದ್ಯತೆ (Priority) ಎಂದು ಪಟ್ಟಿ ಮಾಡಿಕೊಳ್ಳಬೇಕು. ಆ ಪಟ್ಟಿಯೂ ಅತೀ ದೀರ್ಘವಾದರೆ ಕಷ್ಟ ಅದರ ಬಗೆಗೆ ಮುದ್ದುರಾಮನ ನುಡಿಯನ್ನು ಕೇಳಿಸಿಕೊಳ್ಳೋಣ –

ಬಾಳಿನಾದ್ಯತೆ ಪಟ್ಟಿ ಇರಲಿ ಬಲುಮಿತಿಯಲ್ಲಿ
ಸಿಂಗರಿಸುವುದು ಸುಲಭ ಕಡಿಮೆ ಗೊಂಬೆಗಳ
ನೂರೆಂಟು ಸಂಬಂಧ ತೊಡಕಿನತ್ತೊಯ್ಯುವುದು
ಮೊರೆ ಹೋಗು ಸರಳತೆಗೆ ಮುದ್ದುರಾಮ.

ಎಲ್ಲದಕ್ಕೂ ಒಂದು ಮಿತಿಯಿರಬೇಕು. ಸಭೆಯಲ್ಲಿ ಅವಕಾಶ ಸಿಕ್ಕಿತೆಂದು ಗಂಟೆಗಟ್ಟಲೇ ಮಾತನಾಡಬಾರದು. ಭಾಷಣಕ್ಕೆ ಹೇಗೋ ಹಾಗೇ ಲೇಖನಕ್ಕೂ ಮಿತಿಯಿರಬೇಕು.

ಜಿಹ್ವೇ ಪ್ರಮಾಣಂ ಜಾನೀಹಿ ಭಾಷಣೇ ಭೋಜನೇSಪಿಚ।
ಅತ್ಯುಕ್ತಿರತಿಭುಕ್ತಿಶ್ಚ ಸದ್ಯಃ ಪ್ರಾಣಾಪಹಾರಿಣೀ॥

ಎಂಬ ಶ್ಲೋಕವಿದೆ. ನಾಲಿಗೆಗೆ ಎರಡು ಕೆಲಸ. ಒಂದು ಭಾಷಣ, ಇನ್ನೊಂದು ಭೋಜನ. ಈ ಎರಡರಲ್ಲೂ ಮಿತಿಯನ್ನು ಪಾಲಿಸಬೇಕು. ಅತಿಯಾಗಿ ಮಾತನಾಡಿದರೂ ಅತಿಯಾಗಿ ತಿಂದರೂ ಆರೋಗ್ಯಕ್ಕೆ ಒಳ್ಳೆಯದಲ್ಲ. ಪ್ರಾಣವೇ ಹೋಗಬಹುದು ಎಂಬುದು ಶ್ಲೋಕದ ತಾತ್ಪರ್ಯ. ಆದ್ದರಿಂದ ಬಾಳಿನಿಂದ ಸಾಧ್ಯವಾಗುವುದನ್ನು ಪಟ್ಟಿ ಮಾಡುವಾಗಲೂ ಅದಕ್ಕೆ ಮಿತಿ ಇರಬೇಕು. ದಸರೆಯ ಹಬ್ಬದಲ್ಲಿ ಗೊಂಬೆ ಕೂರಿಸುವ ಸಂಪ್ರದಾಯವಿದೆ. ಪೆಟ್ಟಿಗೆಯಲ್ಲಿಟ್ಟಿದ್ದ ಗೊಂಬೆಗಳನ್ನು ತೆಗೆದು ಧೂಳನ್ನು ವರೆಸಿ ಅಲಂಕಾರ ಮಾಡಿ ನೀಟಾಗಿ ಕೂಡಿಸಬೇಕು. ಕೆಲವೇ ಬೊಂಬೆಗಳಿದ್ದರೆ ಆ ಕೆಲಸ ಸುಲಭ. ಲೆಕ್ಕವಿಲ್ಲದಷ್ಟು ಗೊಂಬೆಗಳಾದರೆ ದಿಕ್ಕು ತೋಚದಂತಾಗುತ್ತದೆ. ಅವುಗಳ ಸಿಂಗಾರ ಆಗುವುದು ಹೇಗೆ? ಜಗತ್ತಿನ ಸಂಬಂಧ ಗಳು ಹೆಚ್ಚಾದಷ್ಟೂ ಜೀವನ ತೊಡಕುಗಳಿಂದ ತುಂಬಿದಂತಾಗುತ್ತದೆ. ಯಾವ ಸಂಬಂಧವು ಯಾವ ಸಮಸ್ಯೆಯನ್ನು ತರುವುದೋ ಹೇಳಲಾರದು. ನೂರೆಂಟು ಸಂಬಂಧಗಳು ತೊಡಕಿಗೇ ಕಾರಣ. ಅದನ್ನು ತಪ್ಪಿಸಲು ಇರುವ ಉಪಾಯ ಸರಳತೆ. ಯಾವುದರಲ್ಲೂ ಸಂಕೀರ್ಣತೆ ಬೇಡ. ಯಾವುದಕ್ಕೂ ಗಂಟು ಬೀಳುವುದು ಬೇಡ. ಆ ಗಂಟುಗಳನ್ನು ಬಿಡಿಸಿಕೊಳ್ಳುವ ಗೊಡವೆಯೇ ಬೇಡ ಎನ್ನುವುದು ಮುದ್ದುರಾಮನ ಮನದಾಶೆ. ಸಹಜ ಸ್ವಭಾವದಲ್ಲಿದ್ದರೆ ಸರಳತೆ. ಮುಖವಾಡಗಳನ್ನು ಧರಿಸುತ್ತಾ ಹೋದರೆ ಸಂಕೀರ್ಣತೆ. ನಮ್ಮ ಜೀವನ ಸಂಕೀರ್ಣವಾಗಿ ಸಮಸ್ಯಾತ್ಮಕವಾಗುವುದಕ್ಕೆ ಕಾರಣ ನಾವು ಧರಿಸುವ ವಿವಿಧ ಮುಖವಾಡಗಳು. ಮನೆಯಲ್ಲೊಂದು ಮುಖವಾಡ, ಕಚೇರಿಯಲ್ಲಿನ್ನೊಂದು, ಮಾರುಕಟ್ಟೆಯಲ್ಲಿ ಮತ್ತೊಂದು, ಭಾಷಣದ ಸಭೆಯಲ್ಲಿ ಮಗದೊಂದು. ಈ ಮುಖವಾಡಗಳನ್ನು ಕಿತ್ತೊಗೆದು ಸದಾ ಸರ್ವತ್ರ ಸಹಜವಾಗಿರು ಎನ್ನುತ್ತಾನೆ ಮುದ್ದುರಾಮ.

ಇರು ಸಹಜನೆಲೆಯಲ್ಲಿ ಕಳಚಿ ನೀ ಮೊಗವಾಡ
ಸಾಸುವೆಯ ಸುಖವಿಲ್ಲ ಕಪಟ ಸೋಗಿಂದ
ಇಬ್ಬನಿಯ ಹನಿಯಂತೆ ಪಾರದರ್ಶಕವಾಗು
ಚೆಲುವು ಸರಳತೆ ರೂಪ ಮುದ್ದುರಾಮ.

ಮೊಗವಾಡ ಎಂದರೆ ಮುಖವನ್ನು ಮರೆಮಾಚಿ ಬೇರೆಯ ರೀತಿ ಕಾಣುವಂತೆ ಮಾಡುವ ಮುಸುಕು. ಆ ಮುಖವಾಡವನ್ನು ಕಳಚಿ ಬಿಸುಟು, ನೀನು ಸಹಜವಾದ, ಸ್ವಾಭಾವಿಕವಾದ ನೆಲೆಯಲ್ಲಿರು. ಕಪಟದ ಸೋಗನ್ನು ಹಾಕಿಕೊಳ್ಳಬೇಡ. ಇಲ್ಲದ ವಿನಯವನ್ನು ಗೌರವ ಭಾವನೆಯನ್ನೂ ತೋರಿಸುವ ನಾಟಕ ಅನಪೇಕ್ಷಿತ. ಕಪಟದ ಎಂದರೆ ವಾಸ್ತವವಲ್ಲದ ಸೋಗಿಂದ ಸಾಸುವೆಯಷ್ಟೂ, ಅಣುವಿನಷ್ಟೂ ಸುಖವಿಲ್ಲ. ಇಬ್ಬನಿಯ ಹನಿಯಂತೆ, ಬೆಳಗಿನ ಜಾವದಲ್ಲಿ ಬೀಳುವ ಹಿಮದ ಕಣದಂತೆ, ಪಾರದರ್ಶಕನಾಗು. Be transparent. ಸರಳತೆಯ ರೂಪವೇ ಚೆಲುವು.

ಪ್ರಪಂಚದಲ್ಲಿ ಬೇರೆ ಯಾವ ಪ್ರಾಣಿಯೂ ಮುಖವಾಡವನ್ನು ಹಾಕಿಕೊಂಡು ತನ್ನನ್ನು ಆಕರ್ಷಕವಾಗಿ ಮಾಡಿಕೊಳ್ಳುವುದಿಲ್ಲ. ಹಸುವಾಗಲಿ, ಹುಲಿಯಾಗಲಿ, ನವಿಲಾಗಲಿ ಕಪಟದ ಸೋಗನ್ನು ತೋರಿಸುವುದಿಲ್ಲ. (ಗೋಸುಂಬೆಯೊಂದು ಆತ್ಮರಕ್ಷಣೆಗಾಗಿ ಬಣ್ಣಗಳನ್ನು ಬದಲಾಯಿಸುತ್ತದೆ ಎಂದು ಕಂಡಿದ್ದೇವೆ). ಅವೆಲ್ಲ ಸಹಜ ಸುಂದರ ಸರಳತೆಯೇ ಅವುಗಳ ಔದಾರ್ಯ.

ನಿಜವಾದ ಸಂತರು ಎಂದೂ ಆಡಂಬರಗಾರರಲ್ಲ. ಸರಳತೆಯೇ ಅವರ ಲಕ್ಷಣವೆನ್ನುತ್ತಾನೆ ಮುದ್ದುರಾಮ.

ಸಂತನೆಂದರೆ ಯಾರು? ದಿವ್ಯತೆಯ ಅರಿತವನು
ಸರಳತೆಯ ಸೂತ್ರದಲಿ ಸುಖವ ಕಂಡವನು
ಮಮತೆ ಬಂಧನ ಕಳಚಿ ಬಲುದೂರ ನಿಂತವನು
ಎಲ್ಲರಲಿ ಅವನೊಬ್ಬ ಮುದ್ದುರಾಮ.

ದಿವ್ಯತೆಯನ್ನು ಕಾಣುವುದು ಸಂತನ ಒಂದು ಅಂಶವಾದರೆ, ಸರಳ ಜೀವನದಲ್ಲೇ ಸುಖವನ್ನು ಕಾಣುವುದು ಎರಡನೆಯ ಅಂಶ. ಮಮಕಾರದ ಕಟ್ಟನ್ನು ಕಳಚಿ ಅದರಿಂದ ತುಂಬ ದೂರ ನಿಲ್ಲುವುದು ಸಂತನ ಮೂರನೆಯ ಅಂಶ. ಅವನ ನಾಲ್ಕನೆಯ ಅಂಶ ಎಲ್ಲರಲ್ಲಿ ಒಬ್ಬನಾಗಿರುವುದು. ತಾನು ಶ್ರೇಷ್ಠ, ಎಲ್ಲರಿಗಿಂತ ಮೇಲಿನವನು ಎಂಬ ಭಾವನೆ ಅವನಲ್ಲಿರುವುದಿಲ್ಲ. ಸಂತನಾಗಲು ಕಾಷಾಯ ವಸ್ತ್ರವನ್ನೇ ಧರಿಸಬೇಕಾಗಿಲ್ಲ. ಸಿಂಹಾಸನದ ಮೇಲೆ ಹೇಳತೀರಬೇಕಾಗಿಲ್ಲ. ಅವನ ಮುಖ್ಯ ಲಕ್ಷಣ ಸರಳ ಜೀವನ ಎಂಬುದನ್ನು ಕವಿ ಕೆ.ಸಿ. ಶಿವಪ್ಪ ಅವರು ತಿಳಿಸಿದ್ದಾರೆ. ಸರಳತೆ ನಮ್ಮ ಜೀವನ ಸೂತ್ರವಾಗಲಿ.

ದಸರಾ ಗಜಪಡೆ, ಅಶ್ವಪಡೆಗೆ ಅಂತಿಮ ಹಂತದ ಸಿಡಿಮದ್ದು ಸಿಡಿಸುವ ತಾಲೀಮು ಯಶಸ್ವಿ

ಜಂಬೂಸವಾರಿಗೆ ಗಜ, ಅಶ್ವಪಡೆ ಅಣಿ; ಅಧಿಕಾರಿಗಳ ವಿಶ್ವಾಸ



ದಸರಾ ವಸ್ತುಪ್ರದರ್ಶನದ ಪಾರ್ಕಿಂಗ್ ಸ್ಥಳದಲ್ಲಿ ಮಂಗಳವಾರ ಅಂತಿಮ ಹಂತದ ಸಿಡಿಮದ್ದು ತಾಲೀಮನ್ನು ಯಶಸ್ವಿಯಾಗಿ ನಡೆಸಲಾಯಿತು.

ಜಂಬೂಸವಾರಿಗೆ ಗಜಪಡೆ ಸಜ್ಜಾಗಿದೆ

ಜಂಬೂಸವಾರಿಗೆ ದಸರಾ ಗಜಪಡೆ ಸಜ್ಜಾಗಿದ್ದು, ಅಂತಿಮ ಹಂತದ ಸಿಡಿಮದ್ದು ತಾಲೀಮನ್ನು ಯಶಸ್ವಿಯಾಗಿ ನಡೆಸಲಾಗಿದೆ. ಎಲ್ಲಾ ಆನೆಗಳ ಆರೋಗ್ಯ ಉತ್ತಮವಾಗಿದ್ದು, ಅವುಗಳಿಗೆ ವಿಶೇಷ ಆರೈಕೆ ಮುಂದುವರೆಸಲಾಗಿದೆ. ಜಂಬೂಸವಾರಿಗೆ ಗಜಪಡೆ ಸಜ್ಜುಗೊಳಿಸಲು ನಡೆಸುವ ಎಲ್ಲಾ ಹಂತದ ತಾಲೀಮು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ.

- ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ

ಮೈಸೂರು, ಸೆ.23(ಎಂಟಿವೈ)– ಜಂಬೂ ಸವಾರಿ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ದಸರಾ ಗಜಪಡೆಗೆ ಮಂಗಳವಾರ ಅಂತಿಮ ಹಂತದ ಸಿಡಿಮದ್ದು ಸಿಡಿಸುವ ತಾಲೀಮನ್ನು ಯಶಸ್ವಿಯಾಗಿ ನಡೆಸಲಾಯಿತು.

ದಸರಾ ವಸ್ತುಪ್ರದರ್ಶನ ಆವರಣದ ಪಾರ್ಕಿಂಗ್ ಸ್ಥಳದಲ್ಲಿ ಇಂದು ಬೆಳಗ್ಗೆ ಅಂತಿಮ ಹಂತದ ಸಿಡಿಮದ್ದು ತಾಲೀಮಿನಲ್ಲಿ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ 14 ಆನೆ ಹಾಗೂ ಅಶ್ವಪಡೆಯ 35 ಕುದುರೆಗಳು ಪಾಲ್ಗೊಂಡಿದ್ದವು. ಸಿಎಆರ್ ಡಿಸಿಪಿ ಸಿದ್ದನಗೌಡ ಪಾಟೀಲ್ ನೇತೃತ್ವದಲ್ಲಿ ಫಿರಂಗಿ ದಳದ 35 ಮಂದಿ ತಂಡ 7 ಫಿರಂಗಿಯಿಂದ ತಲಾ ಮೂರು ಸುತ್ತಿನಂತೆ 21 ಬಾರಿ ಕುಶಾಲತೋಪು ಸಿಡಿಸಿ, ಸೈ ಎನಿಸಿಕೊಂಡರು. ಕಳೆದ ಎರಡು ಬಾರಿ ನಡೆದ ಸಿಡಿಮದ್ದು ತಾಲೀಮಿನಲ್ಲಿ ಗಜಪಡೆ ಮತ್ತು ಅಶ್ವಪಡೆ ಕೆಲವು ಆನೆ ಹಾಗೂ ಕುದುರೆ ಚದುರಿದರೆ, ಅಂತಿಮ ಹಂತದ ತಾಲೀಮಿನಲ್ಲಿ ಸಿಡಿಮದ್ದು ಶಬ್ದಕ್ಕೆ ಮಿಸುಕಾಡದೆ ಭರವಸೆ ಮೂಡಿಸಿದವು.

ಜಂಬೂಸವಾರಿ ವೇಳೆ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಲಾಗಿರುವ ನಾಡದೇವಿ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ವೇಳೆ ಪೊಲೀಸ್ ಬ್ಯಾಂಡ್ ವಾದನದ ತಂಡ ರಾಷ್ಟ್ರಗೀತೆ ನುಡಿಸಲಿದ್ದು, ಈ ಸಂದರ್ಭದಲ್ಲಿ ಒಂದು ನಿಮಿಷದೊಳಗೆ 21 ಬಾರಿ ಕುಶಾಲ ತೋಪು ಸಿಡಿಸಿ ಗೌರವ ಸಮರ್ಪಿಸಲಿದೆ. ಅಂದು ಕಿಕ್ಕಿರಿದು ಜನ ಸೇರುವು ದರಿಂದ ಸಿಡಿಮದ್ದು ಶಬ್ದಕ್ಕೆ ಆನೆ ಮತ್ತು ಕುದುರೆಗಳು ವಿಚಲಿತವಾಗದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಮೂರು ಬಾರಿ ಸಿಡಿ ಮದ್ದು ತಾಲೀಮು ನಡೆಸಿ, ಸಜ್ಜುಗೊಳಿಸಲಾಗಿದೆ.

ಜಂಬೂಸವಾರಿ ಮೆರವಣಿಗೆ ದಿನ ಸಿಡಿಮದ್ದು ಸಿಡಿಸುವ ವೇಳೆ ಅಂಬಾರಿ ಆನೆ ಅಭಿಮನ್ಯು ಹಾಗೂ ಅದರ ಎರಡೂ ಬದಿಯಲ್ಲಿ ನಿಲ್ಲುವ ಎರಡು ಕುಮ್ಕಿ ಆನೆಗಳು ಮಾತ್ರ ಅರಮನೆಯಲ್ಲಿರುತ್ತವೆ. ಉಳಿದ ಆನೆಗಳು ಜಂಬೂಸವಾರಿ ಮೆರವಣಿಗೆಯ ಆರಂಭ ಹಾಗೂ ಮಧ್ಯದಲ್ಲಿ ಸಾಗುತ್ತವೆ. ಅಶ್ವಪಡೆಯ ಎರಡು ತುಕಡಿಗಳು ಅಂಬಾರಿ ಮುಂದೆ ಸಾಗುವುದರಿಂದ ಅಶ್ವಪಡೆಗೆ ಸಿಡಿಮದ್ದು ತಾಲೀಮು ಅಗತ್ಯವಿತ್ತು. ಕಳೆದ ವಾರ ನಡೆದಿದ್ದ ಎರಡೂ ತಾಲೀಮಿನಲ್ಲಿ ಬೆಚ್ಚಿದ್ದ ಆನೆ ಮತ್ತು ಕೆಲ ಕುದುರೆಗಳು ಇಂದು ಸಿಡಿಮದ್ದಿನ ಶಬ್ದಕ್ಕೆ ಅಂಜಲಿಲ್ಲ.

ಭದ್ರತೆ: ಸಿಡಿಮದ್ದು ತಾಲೀಮು ವೀಕ್ಷಣೆಗೆ ಸಾರ್ವಜನಿಕರಿಗೆ ನಿರ್ಬಂಧ ಹೇರಲಾಗಿತ್ತು. ಪಾರ್ಕಿಂಗ್ ಮೈದಾನದ ಗೇಟ್‌ಗಳನ್ನು ಬಂದ್ ಮಾಡಿ, ಭದ್ರತೆಗಾಗಿ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಡಿಸಿಎಫ್ ಡಾ.ಐ.ಬಿ. ಪ್ರಭುಗೌಡ, ನಗರ ಸಶಸ್ತ್ರ ಮೀಸಲು ಪಡೆಯ ಡಿಸಿಪಿ ಸಿದ್ದನಗೌಡ ಪಾಟೀಲ್, ಎಸಿಪಿ ಕುಮಾರಸ್ವಾಮಿ, ಅರಮನೆ ಭದ್ರತಾ ವಿಭಾಗದ ಎಸಿಪಿ ಹೆಚ್.ಎಂ. ಚಂದ್ರಶೇಖರ್, ಆರ್‌ಎಫ್‌ಓ ನದೀಮ್, ಪಶುವೈದ್ಯ ಡಾ.ಆದರ್ಶ್, ಸಹಾಯಕರಾದ ರಂಗರಾಜು, ಅಕ್ರಂ ಇನ್ನಿತರರು ಪಾಲ್ಗೊಂಡಿದ್ದರು.

ಗೃಹಲಕ್ಷ್ಮಿಯ ಆಗಸ್ಟ್ ತಿಂಗಳ ಬಾಕಿ ಶೀಘ್ರವೇ ಪಾವತಿ

ಮೈಸೂರಿನಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಭರವಸೆ



ಮೈಸೂರು, ಸೆ.23(ಬಿಎಲ್‌ಯು)– ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಯ ಆಗಸ್ಟ್ ತಿಂಗಳ ಬಾಕಿ ಹಣವನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಭರವಸೆ ನೀಡಿದರು.

ನಗರದ ಜೆ.ಕೆ.ಮೈದಾನದಲ್ಲಿ ಇಂದು ಮಹಿಳಾ ದಸರಾ ಉದ್ಘಾಟನಾ ಕಾರ್ಯಕ್ರಮಕ್ಕೂ ಮುನ್ನ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕಳೆದ ಮೂರು ದಿನಗಳ ಹಿಂದೆ ಜುಲೈ ತಿಂಗಳ ಹಣ ಪಾವತಿ ಮಾಡಿದ್ದೇವೆ.

ಗೃಹಲಕ್ಷ್ಮಿ ಯೋಜನೆಯಡಿ ಎರಡು ಸಾವಿರ ರೂಪಾಯಿಯನ್ನು ಈ ತನಕ 22 ತಿಂಗಳು ನೀಡಲಾಗಿದೆ. ದಸರಾ ಹಬ್ಬದ ಖರ್ಚಿಗಾಗಿ ಮಹಿಳೆಯರಿಗೆ ಹಣದ ಅವಶ್ಯಕತೆ ಇದೆ ಎಂಬುದು ನಮಗೆ ತಿಳಿದಿದೆ. ಆದ ಕಾರಣ ಆಗಸ್ಟ್ ತಿಂಗಳ ಬಾಕಿ ಹಣವನ್ನು ಮಹಿಳೆಯರ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತೇವೆ ಎಂದು ಸಚಿವೆ ಆಶ್ವಾಸನೆ ನೀಡಿದರು.


ಕರ್ನಾಟಕದ 1.24 ಕೋಟಿ ಮಹಿಳೆಯರು ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಾಗಿದ್ದಾರೆ. ಕೆಲವು ಸಂದರ್ಭದಲ್ಲಿ ಹಣ ಪಾವತಿ ವಿಳಂಬವಾಗಬಹುದು. ಆದರೆ ಬಾಕಿ ಉಳಿಸಿಕೊಳ್ಳುವುದಿಲ್ಲ ಎಂದು ಲಕ್ಷ್ಮಿ ಹೆಬ್ಬಾಳ್ಕರ್ ಸ್ಪಷ್ಟಪಡಿಸಿದರು. ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ದೇಶ–ವಿದೇಶದಿಂದ ಲಕ್ಷಾಂತರ ಜನರು ಆಗಮಿಸುತ್ತಾರೆ. ದಸರಾದಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಕಾರ್ಯಕ್ರಮ ಆಯೋಜಿಸಲಾಗಿದೆ. ಅಲ್ಲದೆ ಮಹಿಳಾ ಉದ್ಯಮಿಗಳು ಹಾಗೂ ಮಹಿಳಾ ಸ್ವ ಸಹಾಯ ಸಂಘಗಳು ತಾವು ಉತ್ಪಾದನೆ ಮಾಡಿದ ವಸ್ತುಗಳನ್ನು ಮಾರಾಟ ಮಾಡಲು ಇಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಮೈಸೂರು ದಸರಾ ಉದ್ಘಾಟನಾ ಸಮಾರಂಭದಲ್ಲಿ ಭಾಗಿಯಾಗಿದ್ದ ಬಾನು ಮುಷ್ತಾಕ್ ಅವರು ದಸರಾ ಸಾಂಪ್ರದಾಯಿಕ ಹಾಗೂ ಧಾರ್ಮಿಕ ಭಾವದ ಕಾರ್ಯಗಳಲ್ಲಿ ಭಾಗಿಯಾಗಿದ್ದಾರೆ. ಬೂಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಅಂತಹವರಿಂದ ದಸರಾ ಉದ್ಘಾಟನೆ ಮಾಡಿಸುತ್ತಿರುವುದು ಹಿರಿಮೆಯ ವಿಚಾರವಾಗಿದೆ ಎಂದು ಅಭಿಪ್ರಾಯಪಟ್ಟರು.

ಸಾಹಿತ್ಯಕ್ಕೆ ಜಾತಿ, ಧರ್ಮದ ಹಣೆಪಟ್ಟಿ ಕಟ್ಟಿದರೆ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸುವವರು ಯಾರು ಎಂದು ಪ್ರಶ್ನಿಸಿದ ಲಕ್ಷ್ಮಿ ಹೆಬ್ಬಾಳ್ಕರ್ ಅವರು, ಇನ್ನು ಮುಂದಾದರೂ ನಾಡಿನ ಸಾಂಸ್ಕೃತಿಕ ಉತ್ಸವಕ್ಕೆ ಯಾರೂ ಅಡ್ಡಿಪಡಿಸಬಾರದು ಎಂದು ಮನವಿ ಮಾಡಿದರು.

ಅಲ್ಪಸಂಖ್ಯಾತ ಸಮುದಾಯದ ಮಹಿಳೆಯೊಬ್ಬರು ಕನ್ನಡದಲ್ಲಿ ಪುಸ್ತಕಗಳನ್ನು ಬರೆದು ಅದನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಗೊಳಿಸಿರುವುದಕ್ಕೆ ಎಲ್ಲರೂ ಪ್ರಶಂಸೆ ವ್ಯಕ್ತಪಡಿಸಬೇಕು ಎಂದು ಲಕ್ಷ್ಮಿ ಹೆಬ್ಬಾಳ್ಕರ್ ಸಲಹೆ ನೀಡಿದರು.

ಮೈಸೂರು ಜಿಲ್ಲಾ ಕನ್ನಡ ಜಾಗೃತಿ ಸಮಿತಿಗೆ ನೇಮಕ



ಮೈಸೂರು, ಸೆ. 23– ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ವಿನೋದಮ್ಮ ಅವರನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಗೊಳಿಸಲು ಮೈಸೂರು ಜಿಲ್ಲಾ ಕನ್ನಡ ಜಾಗೃತಿ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ಸರ್ಕಾರ ನೇಮಕ ಮಾಡಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

"ಬ್ಯಾಂಕಿನ ರಕ್ಷಣೆ ಹಾಗೂ ಅಭಿವೃದ್ಧಿಯೇ ನಮ್ಮ ಗುರಿ" ಸ್ಥಾಪನೆ : 1910 "ನಿಮ್ಮ ಸೇವೆಯೇ ನಮ್ಮ ಕರ್ತವ್ಯ"



ದಿ ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಶ್ರೀ ಹರ್ಷರಸ್ತೆ, ಮೈಸೂರು - 570 001

ನವರಾತ್ರಿ ದಸರಾ ಹಬ್ಬದ ಹಾರ್ದಿಕ ಶುಭಾಷಯಗಳೊಂದಿಗೆ

2025-30ನೇ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆ

ದಿನಾಂಕ : 02-11-2025





ದಿ|| ಜಿ.ಆರ್. ಚನ್ನಕೇಶವಯ್ಯ ಬಿ.ಪಾಪಣ್ಣ
ಮಾಜಿ ಅಧ್ಯಕ್ಷರು

ಶ್ರೀಮತಿ ಹೆಚ್. ಇಂದಿರಾ ವೆಂಕಟಲಿಂಗಯ್ಯ
ಮಾಜಿ ಶಾಸಕರಾದ ದಿ|| ಎಂ. ವೆಂಕಟಲಿಂಗಯ್ಯ ಅವರ ಧರ್ಮಪತ್ನಿ
ಬ್ಯಾಂಕಿನ ಮಾಜಿ ಅಧ್ಯಕ್ಷರು

ಎನ್. ಕುಶಲ್‌ಕುಮಾರ್
ಮಾಜಿ ಉಪಾಧ್ಯಕ್ಷರು
ಮತ್ತು ಮಾಜಿ ನಗರಪಾಲಿಕೆ ಸದಸ್ಯರು

ದಿನೇಶ್ ಎಂ. ವೆಂಕಟಲಿಂಗಯ್ಯ
ಹಾಲಿ ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರು
ಮಾಲೀಕರು : ಇಂದಿರ ವೆಂಕಟಲಿಂಗಯ್ಯ ಡಿ.ವಿ.ಕನ್ವೆನ್ಷನ್ ಹಾಲ್
ಸಿದ್ಧಾರ್ಥನಗರ, ಮೈಸೂರು
ಮೊ : 9980853559

ಮಾನ್ಯರೇ,

ಶ್ರೀ ದಿನೇಶ್ ಎಂ. ವೆಂಕಟಲಿಂಗಯ್ಯರವರು ಮೊದಲ ಬಾರಿಗೆ ಬ್ಯಾಂಕಿನ ನಿರ್ದೇಶಕರಾಗಿ ಹಾಗೂ ಅಧ್ಯಕ್ಷರಾಗಿ 2015-16, 2016-17ರಲ್ಲಿ 27 ವರ್ಷಗಳ ನಂತರ ಗರಿಷ್ಠ 10% ಲಾಭಾಂಶ ಕೊಟ್ಟು ಮತ್ತು ಮರಣನಿಧಿಯ ಮೊಬಲಗನ್ನು ರೂ. 3,000/- ರಿಂದ 7,000/-ಗಳಿಗೆ ಹೆಚ್ಚಿಸಿ ಬ್ಯಾಂಕಿನಿಂದ ಸಾಲ ಕೊಡುವ ಮಿತಿಯನ್ನು 27 ಲಕ್ಷಗಳಿಗೆ ಹೆಚ್ಚಿಸಿ ಸಾಲದ ಮೇಲಿನ ಬಡ್ಡಿಯನ್ನು ಶೇ. 18 ರಿಂದ ಶೇ. 15ಕ್ಕೆ ಇಳಿಕೆ ಮಾಡಿ ಬ್ಯಾಂಕಿನ ವ್ಯವಹಾರವನ್ನು ಸಂಪೂರ್ಣ ಕಂಪ್ಯೂಟರೀಕರಣ (CTS) ಗೊಳಿಸಿ, ಮೊಟ್ಟಮೊದಲ ಬಾರಿಗೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ಕೊಟ್ಟು ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಕೊಟ್ಟು ಬ್ಯಾಂಕು ಅಭಿವೃದ್ಧಿ ಹೊಂದಲು ಕಾರಣಕರ್ತರಾಗಿರುತ್ತಾರೆ.

ದಿನಾಂಕ : 02-11-2025 ರಂದು ಬ್ಯಾಂಕಿನ ನಿರ್ದೇಶಕ ಮಂಡಳಿಗೆ ನಡೆಯಲಿರುವ ಚುನಾವಣೆಯಲ್ಲಿ, ಹಾಲಿ ಮತ್ತು ಮಾಜಿ ಬ್ಯಾಂಕಿನ ನಿರ್ದೇಶಕರ ಸಹಕಾರದೊಂದಿಗೆ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ, ಮಾಜಿ ಶಾಸಕರಾದಂತಹ ದಿ|| ಎಂ. ವೆಂಕಟಲಿಂಗಯ್ಯ ಹಾಗೂ ಬ್ಯಾಂಕಿನ ಮಾಜಿ ಅಧ್ಯಕ್ಷರಾದ **ಶ್ರೀಮತಿ ಹೆಚ್. ಇಂದಿರಾ ವೆಂಕಟಲಿಂಗಯ್ಯ**ನವರ ಮಗ ಹಾಗೂ ಬ್ಯಾಂಕಿನ ಮಾಜಿ ಉಪಾಧ್ಯಕ್ಷರು ಹಾಗೂ ನಜರ್‌ಬಾದಿನ ಮಾಜಿ ನಗರಪಾಲಿಕೆಯ ಸದಸ್ಯರಾದ **ಶ್ರೀ ಎನ್. ಕುಶಾಲ್‌ಕುಮಾರ್**ರವರ ಸಹೋದರರು ಆದ **ಶ್ರೀ ದಿನೇಶ್ ಎಂ. ವೆಂಕಟಲಿಂಗಯ್ಯನವರಿಗೆ** ಹರಸಿ ಆಶೀರ್ವದಿಸಿ ಮತ್ತೊಮ್ಮೆ ಬ್ಯಾಂಕಿನ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಡಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇವೆ.

ಕನಿಷ್ಠ 1000 ರೂ.ಗಳ ಷೇರು ಮೊಬಲಗು ಹೊಂದಿರುವ ಎಲ್ಲಾ ಸದಸ್ಯರಿಗೂ ಚುನಾವಣೆಯಲ್ಲಿ 13 ಮತ ಮಾತ್ರ ಚಲಾಯಿಸಲು ಅವಕಾಶವಿರುತ್ತದೆ.

ಇಂತಿ ತಮ್ಮ ವಿಶ್ವಾಸಿಗಳಾದ
(signature)
ದಿನೇಶ್ ವೆಂಕಟಲಿಂಗಯ್ಯ
(signature)
(ಹೆಚ್. ಇಂದಿರಾ ವೆಂಕಟಲಿಂಗಯ್ಯ)



ಮೈಸೂರು ದಸರಾ ಮಹೋತ್ಸವ–2025

ಅರಮನೆ ಮುಂಭಾಗದ ಪ್ರಧಾನ ವೇದಿಕೆಯಲ್ಲಿ ಕೇರಳದ ರಾಕ್ ಬ್ಯಾಂಡ್ ಅಬ್ಬರ

● ಯುವ ಜನತೆಗೆ ಮಸ್ತ್ ಮಜಾ
● ಸಾಂಪ್ರದಾಯಿಕ ಪ್ರೇಕ್ಷಕರಿಗೆ ಮುಜುಗರ

ಮೈಸೂರು, ಸೆ.23(ಎಸ್‌ಬಿಡಿ)– ಶಾಸ್ತ್ರೀಯ ಸಂಗೀತ, ನೃತ್ಯ, ಜಾನಪದ, ಶರಣರ ವಚನ–ದಾಸರ ವಾಣಿ, ಕವಿಗಳ ಸಾಲು, ಸುಗಮ ಸಂಗೀತದಂತಹ ಸಾಂಪ್ರದಾಯಿಕ ಕಲಾಪ್ರಕಾರಗಳಿಗೆ ಮೀಸಲಾಗಿದ್ದ ಅರಮನೆ ಮುಂಭಾಗದ ಪ್ರಧಾನ ವೇದಿಕೆಯಲ್ಲಿಂದು ಕೇರಳದ ರಾಕ್ ಬ್ಯಾಂಡ್ ಅಬ್ಬರಿಸಿತು.

ಸಾಂಪ್ರದಾಯಿಕ ಕಲಾಪ್ರಕಾರಗಳನ್ನು ಮೀರಿ ಕೆಲ ವರ್ಷಗಳಿಂದ ಚಲನಚಿತ್ರ ಗೀತೆಗಳ ಗಾಯನಕ್ಕೂ ಈ ವೇದಿಕೆಯಲ್ಲಿ ಅವಕಾಶ ನೀಡಲಾಗುತ್ತಿದೆ. ಆದರೆ ಈ ಬಾರಿ ರಾಕ್ ಬ್ಯಾಂಡ್‌ಗೂ ವೇದಿಕೆ ಸಿಕ್ಕಿದ್ದು ವಿಶೇಷವಾಗಿತ್ತು. ಬಹುತೇಕ ಮಂದಿ ಈ ಹೊಸ ಪ್ರಯತ್ನಕ್ಕೆ ಜೈ ಎಂದು ಕುಣಿದು ಕುಪ್ಪಳಿಸಿದರಾದರೂ ಹಲವು ವರ್ಷಗಳಿಂದ ಅರಮನೆ ವೇದಿಕೆಯ ಕಾರ್ಯಕ್ರಮಗಳನ್ನು ವೀಕ್ಷಿಸಿಕೊಂಡು ಬಂದಿರುವವರು ಬೇಸರ ವ್ಯಕ್ತಪಡಿಸಿದ್ದು, ಕಂಡುಬಂದಿತು.

ಕುಣಿಸಿದ ಬ್ಯಾಂಡ್: ಕೇವಲ 11 ವರ್ಷಗಳಲ್ಲಿ ಭಾರತ ಸೇರಿದಂತೆ 30ಕ್ಕೂ ಹೆಚ್ಚು ದೇಶಗಳಲ್ಲಿ 800ಕ್ಕೂ ಹೆಚ್ಚು ಕಾರ್ಯಕ್ರಮಗಳ ನೀಡಿ, ತನ್ನದೇ ಆದ ಪ್ರೇಕ್ಷಕ ವರ್ಗವನ್ನು ಸೃಷ್ಟಿಸಿಕೊಂಡಿರುವ ಥೈಕ್ಕುಡಂ ಬ್ರಿಡ್ಜ್ ಬ್ಯಾಂಡ್, ಜಾನಪದ ಮತ್ತು ಶಾಸ್ತ್ರೀಯ ಧ್ವನಿ ಮತ್ತು ವಾದ್ಯಗಳ ಸಮ್ಮಿಳಿತದೊಂದಿಗೆ ನೆರೆದಿದ್ದವರನ್ನು ಕುಣಿದು ಕುಪ್ಪಳಿಸುವಂತೆ ಮಾಡಿತು. ಕಲಾವಿದರೊಬ್ಬರು 'ಎಲ್ಲರಿಗೂ ನಮಸ್ಕಾರ, ಎಲ್ಲರಿಗೂ ದಸರಾ ಹಬ್ಬದ ಶುಭಾಶಯಗಳು' ಎಂದು ಕನ್ನಡದಲ್ಲೇ ಹೇಳಿ, ಕಾರ್ಯಕ್ರಮ ಆರಂಭಿಸಿದರು.

ನವರಸಂ ಪ್ರಸ್ತುತಿ, ಇಳಯರಾಜ ಅವರ ಸಂಯೋಜನೆಯ 'ರೆಟ್ಟೈ ವಾಲ್ ಕುರುವಿ' ಸಿನಿಮಾದ 'ರಾಜರಾಜ ಸೋಳನ್ನ...', 'ತೇರಿ ದಿವಾನಿ ದಿವಾನಿ...', 'ಓಂಶಿವೋಂ...' ತಮಿಳಿನ '96' ಸಿನಿಮಾದ 'ಕಾತಲೆ ಕಾತಲೆ...', 'ಕೇಳದೆ ನಿಮಗೀಗ...' ಸೇರಿದಂತೆ ಕನ್ನಡ, ಮಲಯಾಳಂ ಹಾಗೂ ಹಿಂದಿ ಭಾಷೆಯ ಹಲವಾರು ಆಲ್ಬಂ ಹಾಡುಗಳನ್ನು ವಿಶಿಷ್ಟ ರಾಕ್ ಬ್ಯಾಂಡ್ ಮ್ಯೂಸಿಕ್ ಮೂಲಕ ಪ್ರಸ್ತುತಪಡಿಸಿ ರಂಜಿಸಿದರು. ಕೇರಳದಿಂದ ವಿದ್ಯಾಭ್ಯಾಸಕ್ಕೆ ಆಗಮಿಸಿರುವ ಯುವಜನತೆ ಹಾಗೂ ಪ್ರವಾಸಿಗರು ಸೇರಿದಂತೆ ನೆರೆದಿದ್ದವರು ಶಿಳ್ಳೆ, ಚಪ್ಪಾಳೆಯೊಂದಿಗೆ ಕುಣಿದು ಕುಪ್ಪಳಿಸಿ, ಸಂಭ್ರಮಿಸಿದರು.





ಮೈಸೂರು ಅರಮನೆ ಮುಂಭಾಗದ ವೇದಿಕೆಯಲ್ಲಿ ಮಂಗಳವಾರ 'ಥೈಕ್ಕುಡಂ ಬ್ರಿಡ್ಜ್ ಬ್ಯಾಂಡ್' ತಂಡವು ಕಾರ್ಯಕ್ರಮ ನೀಡಿತು. ಈ ವೇಳೆ ನೆರೆದಿದ್ದ ಯುವಸ್ತೋಮವನ್ನು ಮತ್ತೊಂದು ಚಿತ್ರದಲ್ಲಿ ಕಾಣಬಹುದು.

ಭಾಷೆ ಗಡಿ ಮೀರಿ ಶ್ರೋತೃಗಳ ಹಾಗೂ ಪ್ರೇಕ್ಷಕರ ಮನಸ್ಸಿಗೆ ಮುದ ನೀಡುವುದೇ ಕಲೆಯ ಮೂಲ ಉದ್ದೇಶ. ಈ ನಿಟ್ಟಿನಲ್ಲಿ ದಸರಾ ಮಹೋತ್ಸವದಲ್ಲಿ ಮೊದಲ ಬಾರಿ ಕಾರ್ಯಕ್ರಮ ನೀಡಿದ ಥೈಕ್ಕುಡಂ ಬ್ರಿಡ್ಜ್ ಬ್ಯಾಂಡ್ ಯಶಸ್ವಿಯಾಯಿತು. ಅಬ್ಬರದ ಸಂಗೀತದ ಜೊತೆಗೆ ಭಕ್ತಿಪ್ರಧಾನ ಹಾಗೂ ಭಾವನಾತ್ಮಕ ಹಾಡುಗಳ ಮೂಲಕ ಎಲ್ಲಾ ವರ್ಗದ ಪ್ರೇಕ್ಷಕರ ಮನಮುಟ್ಟಿತು. ಜೊತೆಗೆ ಈ ಮಾದರಿಯ ಕಾರ್ಯಕ್ರಮಕ್ಕೆ ಅರಮನೆ ವೇದಿಕೆಗಿಂತ ಯುವ ದಸರಾ ಅಥವಾ ಪ್ರತ್ಯೇಕ ವೇದಿಕೆ ಕಲ್ಪಿಸಿದ್ದರೆ ಸೂಕ್ತ. ಕಿವಿಗಡಚುವ ಭಾರೀ ಶಬ್ದದಿಂದ ಅರಮನೆ ಅಂಗಳದಲ್ಲೇ ಇರುವ ಆನೆಗಳೂ ವಿಚಲಿತಗೊಳ್ಳಬಹುದು. ಈ ಬಗ್ಗೆ ಯೋಚಿಸಿ, ಕಾರ್ಯಕ್ರಮ ರೂಪಿಸುವುದು ಒಳ್ಳೆಯದು ಎಂಬ ಅಭಿಪ್ರಾಯಗಳೂ ಕೇಳಿಬಂದವು.

ಸಂಗೀತ–ನೃತ್ಯ ರಸಾಯನ: ಇದಕ್ಕೂ ಮುನ್ನ ಡಾ.ಶ್ವೇತ ಮಡಪ್ಪಾಡಿ ನೇತೃತ್ವದಲ್ಲಿ ಪ್ರಸ್ತುತಗೊಂಡ 'ಕನ್ನಡ ಕಾಜಾಣ' ಪ್ರೇಕ್ಷಕರಿಗೆ ಮುದ ನೀಡಿತು. 'ಹಚ್ಚೇವು ಕನ್ನಡದ ದೀಪ, ಕರುನಾಡ ದೀಪ, ಸಿರಿನುಡಿಯ ದೀಪ...', 'ಮೊದಲಿಗೆ ಅಲ್ಲಮ ಪ್ರಭುವಿಗೆ ಶರಣಾರ್ಥಿ, ಕೂಡಿಕುಂತ ಜನಕ್ಕೆಲ್ಲಾ ನಮ್ಮ ನಮನ, ಗೀಯಗೀಯ...', 'ಬಂಗಾರನೀರ ಕಡಲಾಚೆಗೀಚೆಗಿದೆ ನೀಲನೀರ ತೀರ....', 'ಅಗಲಿ ಇರಲಾರೆನೋ ಮರೆತು ಇರಲಾರೆನೋ ನಿನ್ನನ್ನ...', 'ಸೂಜಿಗಳ ಮುತ್ತುಗಳ ಮಾರ ಬಂದೆನಮ್ಮ...' ಸೇರಿದಂತೆ ಕನ್ನಡದ ಹಲವು ಕವಿಮಹಾಶಯರ ಕೃತಿಗಳನ್ನು ಜಾನಪದ ಸೊಗಡಿನಲ್ಲಿ ಉಣಬಡಿಸಿದರು. ಮೈಸೂರಿನ ಭಾರತೀಯ ವಿದ್ಯಾಭವನ ತಂಡದ 'ನೃತ್ಯ ರೂಪಕ', ರವಿರಾಜ್ ಎಸ್.ಹಾಸು ತಂಡದ 'ವಚನ ದಾಸ ತತ್ವ ವೈಭವ', ಶ್ರೀಮತಿ ಸ್ಮಿತಾ ಶ್ರೀಪತಿ ತಂಡದ 'ಭರತನಾಟ್ಯ', ಅಭಿಷೇಕ್ ರಘುರಾಮ್ ತಂಡದ 'ಕರ್ನಾಟಕ ಶಾಸ್ತ್ರೀಯ ಸಂಗೀತ' ಕಾರ್ಯಕ್ರಮಗಳು ಸಾಂಪ್ರದಾಯಿಕ ಪ್ರೇಕ್ಷಕರಿಗೆ ರಸದೌತಣ ನೀಡಿದವು.

ಅರಮನೆ ಮುಂದೆ ಚಿತ್ತಾಕರ್ಷಕ ರಂಗೋಲಿ

● ಒಂದಕ್ಕಿಂತ ಒಂದು ವಿಶೇಷ ಚಿತ್ತಾರ ● ಕೆಲವೊಂದರಲ್ಲಿ ನೈಜ ಸಂದೇಶ ಸಾರುವ ಯತ್ನ



ಅರಮನೆ ಮುಂದೆ ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ಆಯೋಜಿಸಿದ್ದ ರಂಗೋಲಿ ಸ್ಪರ್ಧೆಯಲ್ಲಿ ಜಂಬೂಸವಾರಿಯ ಚಿತ್ತಾಕರ್ಷಕ ರಂಗೋಲಿ ಎಲ್ಲರ ಕಣ್ಮನ ಸೆಳೆಯಿತು

ಮೈಸೂರು, ಸೆ.23(ಎಂಟಿವೈ)– ಮೈಸೂರು ಅರಮನೆಯ ಮುಂಭಾಗದಲ್ಲಿ ಮಹಿಳಾ ದಸರಾ ಉಪಸಮಿತಿ ಆಯೋಜಿಸಿದ್ದ ರಂಗೋಲಿ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ 180 ಸ್ಪರ್ಧಿಗಳು ಚಿತ್ತಾಕರ್ಷಕ ರಂಗೋಲಿ ಬಿಡಿಸುವ ಮೂಲಕ ದಸರಾ ಸಂಭ್ರಮ ಇಮ್ಮಡಿಗೊಳಿಸಿದರು.

ಮಂಗಳವಾರ ಬೆಳಗ್ಗೆ ದಸರಾ ಮಹೋತ್ಸವದ ಅಂಗವಾಗಿ ಮಹಿಳಾ ಮತ್ತು ಮಕ್ಕಳ ಇಲಾಖೆ ಮತ್ತು ಮಹಿಳಾ ದಸರಾ ಉಪಸಮಿತಿ ಆಯೋಜಿಸಿದ್ದ ರಂಗೋಲಿ ಸ್ಪರ್ಧೆಯಲ್ಲಿ ವಿವಿಧೆಡೆಯಿಂದ ಆಗಮಿಸಿದ್ದ 180 ಮಂದಿ ಮಹಿಳೆಯರು, ಯುವತಿಯರು, ಕೆಲ ಯುವ ಕಲಾವಿದರು ನಾನಾ ಸಂದೇಶ ಸಾರುವ ರಂಗೋಲಿ ಬಿಡಿಸಿ ಸೈ ಎನಿಸಿಕೊಂಡರು.

ರಂಗೋಲಿಯಲ್ಲಿ ಮಕ್ಕಳು ಮೊಬೈಲ್ ಗೀಳಿಗೆ ಒಳಗಾಗಿರುವ ಸಂದೇಶ ಕುರಿತ 'ಡೋಂಟ್ ಬಿ ಅಡಿಕ್ಟೆಡ್' ರಂಗೋಲಿ, ರಾಜ್ಯ ಸರ್ಕಾರದ ಗೃಹ ಜ್ಯೋತಿ, ಹುಲಿ ಮೇಲೆ ಕುಳಿತ ಚಾಮುಂಡೇಶ್ವರಿ, ದುರ್ಗಾದೇವಿ ಮತ್ತು ದೇವಿಗೆ ಕಾವಲಾಗಿರುವ ಆನೆಯ ಚಿತ್ರ, ಹೆಣ್ಣಾಗಿ ಹುಟ್ಟಿರುವುದಕ್ಕೆ ನಾವೆಲ್ಲಾ ಹೆಮ್ಮೆ ಪಡೋಣ ಪರಿಕಲ್ಪನೆಯ ಚಿತ್ರ, ನಂದಿ ಮತ್ತು ಶಿವಲಿಂಗ, ಚಾಮುಂಡಿ ಬೆಟ್ಟದ ಗೋಪುರ, ಓಂಕಾರದಲ್ಲಿ ಗಣೇಶ, ಗಂಡ ಭೇರುಂಡ, ನವಿಲಿನ ಚಿತ್ರ, ದಸರಾ ಆನೆ, ರಥ, ಬಾಲ ಕೃಷ್ಣ ಸೇರಿದಂತೆ ವಿವಿಧ ಚಿತ್ರಗಳನ್ನು ರಂಗೋಲಿಯಲ್ಲಿ ಬಿಡಿಸುವ ಮೂಲಕ ಸ್ಪರ್ಧಿಗಳು ತಮ್ಮ ಕಲಾತ್ಮಕತೆಯನ್ನು ಅನಾವರಣ ಮಾಡಿದರು.

ಸ್ಪರ್ಧೆಗೆ ಶಾಸಕ ಶ್ರೀವತ್ಸ, ಕುರುಬಾರಹಳ್ಳಿಯ ಕಲಾವಿದ ಪುನೀತ್ ಅವರು ಅರ್ಜುನನ ನೆನಪಿನಲ್ಲಿ ಮೂಡಿಸಿದ್ದ ಅರ್ಜುನ ಆನೆಯ ರಂಗೋಲಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು.

ವಿಜೇತರು: 180 ಸ್ಪರ್ಧಿಗಳು ಬಿಡಿಸಿದ್ದ ರಂಗೋಲಿಯನ್ನು ಅವಲೋಕಿಸಿದ ತೀರ್ಪುಗಾರರು ಅಂತಿಮವಾಗಿ ಮೈಸೂರಿನ ಶಾರದಾದೇವಿ ನಗರದ ಲಕ್ಷ್ಮೀ ಅವರಿಗೆ ಪ್ರಥಮ ಬಹುಮಾನ, ಸಂಜನಾ ಅವರಿಗೆ ದ್ವಿತೀಯ ಹಾಗೂ ದಿವ್ಯಶ್ರೀ ಅವರಿಗೆ ತೃತೀಯ ಬಹುಮಾನ ನೀಡಿದರು.

ಈ ಸಂದರ್ಭದಲ್ಲಿ ಮಹಿಳಾ ದಸರಾ ಉಪ ಸಮಿತಿ ಉಪ ವಿಶೇಷಾಧಿಕಾರಿ ಸವಿತ, ಕಾರ್ಯಾಧ್ಯಕ್ಷ ಬಿ.ಬಸವರಾಜು, ತೀರ್ಪುಗಾರರಾದ ಮೀನಾಕ್ಷಿ ರವಿಕುಮಾರ್, ಸ್ತ್ರೀಶಕ್ತಿ ಒಕ್ಕೂಟದ ಜಿಲ್ಲಾಧ್ಯಕ್ಷೆ ಪ್ರೇಮಕುಮಾರಿ, ದಸರಾ ಉಪಸಮಿತಿ ಕಾರ್ಯದರ್ಶಿ ಚರಿತಾ, ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಆಹಾರ ಮೇಳದಲ್ಲಿ ಮಾಂಸಾಹಾರಕ್ಕೆ ಭಾರಿ ಡಿಮ್ಯಾಂಡ್

160ರಲ್ಲಿ 130 ಮಳಿಗೆಗಳಲ್ಲಿ ಮಾಂಸಾಹಾರ ಮಾರಾಟ

ಮೈಸೂರು, ಸೆ.23(ಜಿಎ)ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ಆಹಾರ ಮೇಳದಲ್ಲಿ ಮಾಂಸಾಹಾರಕ್ಕೆ ಭಾರೀ ಡಿಮ್ಯಾಂಡ್. ಆಹಾರ ಪ್ರಿಯರು ಹೆಚ್ಚಿನ ಸಂಖ್ಯೆಯಲ್ಲಿ ಲಗ್ಗೆ ಇಡುತ್ತಿದ್ದಾರೆ.

ಮಹಾರಾಜ ಕಾಲೇಜು ಮೈದಾನದಲ್ಲಿ ಅರಂಭವಾಗಿರುವ ಆಹಾರ ಮೇಳದಲ್ಲಿ ಒಟ್ಟು 160ರ ಪೈಕಿ 130 ಮಳಿಗೆಗಳಲ್ಲಿ ಮಾಂಸಾಹಾರ ಕಲ್ಪಿಸಲಾಗುತ್ತಿದೆ. ಪ್ರತಿನಿತ್ಯ ಸಾವಿರಾರು ಮಂದಿ ರುಚಿ ರುಚಿಯಾದ ನಾನಾ ವಿಧದ ಮಾಂಸಹಾರವನ್ನು ತಿಂದು ತೇಗುತ್ತಿದ್ದಾರೆ. ಪ್ರತಿ ಮಳಿಗೆಯಲ್ಲೂ ನೂರಾರು ಪ್ಲೇಟ್ ಮಾಂಸಹಾರ ಖರ್ಚಾಗುತ್ತಿದೆ.

ಮಡಿಕೆ ಬಿರ್ಯಾನಿ, ನಾಟಿಕೋಳಿ ಬಿರಿಯಾನಿ, ಬೊಂಬು ಬಿರಿಯಾನಿ, ಹೊಸಕೋಟೆ ಬಿರಿಯಾನಿ, ಗೌಡ್ರು ಮನೆ ಊಟ, ಚಿಕ್ಕಪೇಟೆ ಬಿರಿಯಾನಿ, ನಾಟಿಕೋಳಿ ಬಿರಿಯಾನಿ, ಮಂಡ್ಯ ನಾಟಿ ಪಲಾವ್ ಸೇರಿದಂತೆ ವಿವಿಧ ಮಾಂಸಹಾರ ಭರ್ಜರಿಯಾಗಿ ವ್ಯಾಪಾರವಾಗುತ್ತಿದ್ದು, ಸಾರ್ವಜನಿಕರು ಬಾಯಿ ಚಪ್ಪರಿಸಿ ಸವಿಯುತ್ತಿದ್ದಾರೆ.

ಮತ್ಸ್ಯದರ್ಶಿನಿಗೆ ಹೆಚ್ಚಿನ ಬೇಡಿಕೆ : ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದಿಂದ ಮತ್ಸ್ಯದರ್ಶಿನಿ ಮಳಿಗೆ ಸ್ಥಾಪಿಸಿದ್ದು, ಅಲ್ಲಿ ಸಿಗುವ ಸಾಗರದ ನಾನಾ ಬಗೆಯ ಮೀನುಗಳಿಗೆ ಹೆಚ್ಚಿನ ಬೇಡಿಕೆ ಇದ್ದು, ಆಹಾರ ಪ್ರಿಯರು ಹುಡುಕಿಕೊಂಡು ಬಂದು ಮತ್ಸ್ಯ ಖಾದ್ಯ ಸವಿಯುತ್ತಿದ್ದಾರೆ ಎಂದು ಮ್ಯಾನೇಜರ್ ಲಿಂಗೇಶ್ ತಿಳಿಸಿದರು.

ಮಳಿಗೆಯಲ್ಲಿ ಬಂಗುಡೆ ಫ್ರೈ, ಕ್ರಂಬ್ ಅಂಜಲ್ ಫ್ರೈ, ಸೀಗಡಿ ಫ್ರೈ, ಮೀನಿನ ಕಬಾಬ್, ಬಿಳಿ ಮಾಂಜಿ ಫ್ರೈ, ಫಿಶ್ ಫಿಂಗರ್ ಫ್ರೈ, ಕ್ರಾಬ್ ಕ್ಲಾ, ಕಾಣೆ ಫ್ರೈ ಲಭ್ಯವಿದ್ದು, ಎಲ್ಲಾ ರೀತಿ ತಿನಿಸುಗಳನ್ನು ಸವಿಯುತ್ತಿದ್ದಾರೆ. ಇಂದು ಮಧ್ಯಾಹ್ನದಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಸದ್ಯದಲ್ಲಿಯೇ ಮೈಸೂರಿನಲ್ಲಿ ಮತ್ಸ್ಯದರ್ಶಿನಿ ಆರಂಭಿಸಲು ಈಗಾಗಲೇ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಡಿಪಿಆರ್ ಸಲ್ಲಿಸಲಾಗಿದೆ. ನಾಲ್ಕು ತಿಂಗಳೊಳಗೆ ಮತ್ಸ್ಯದರ್ಶಿನಿ ಮೈಸೂರಿನಲ್ಲಿ ಆರಂಭವಾಗಲಿದೆ ಎಂದರು.



ದಸರಾ ಆಹಾರ ಮೇಳದಲ್ಲಿ ಜನವೋ ಜನ

ಉತ್ತಮ ವ್ಯವಸ್ಥೆ : ದಸರಾ ಆಹಾರ ಮೇಳ ಉಪಸಮಿತಿ ವತಿಯಿಂದ ಮಹಾರಾಜ ಕಾಲೇಜು ಮೈದಾನದಲ್ಲಿ ಈ ಬಾರಿ ಎರಡನೇ ಸಲ ಆಹಾರ ಮೇಳ ಆಯೋಜಿಸಿದ್ದು, ಕಳೆದ ಬಾರಿಗಿಂತ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿದ್ದಾರೆ. ಕುಳಿತುಕೊಳ್ಳಲು ಕುರ್ಚಿ, ಟೇಬಲ್ ವ್ಯವಸ್ಥೆ, ಕುಡಿಯಲು, ಕೈತೊಳೆಯಲು ನೀರಿನ ವ್ಯವಸ್ಥೆ, ಸ್ಥಳದಲ್ಲಿಯೇ ಹಸಿ, ಒಣ ಕಸ ವಿಂಗಡಣೆ ಸೇರಿದಂತೆ ಮಳೆ ಬಂದರೂ ನೆನೆಯದ ವ್ಯವಸ್ಥೆ ಕಲ್ಪಿಸಿರುವುದರಿಂದ ಆಹಾರ ಪ್ರಿಯರು ಮತ್ತು ಮಳಿಗೆದಾರರು ಸಂತಸ ವ್ಯಕ್ತಪಡಿಸಿದರು.



ಕಾವ್ಯ ಭೇದ–ಭಾವಗಳ ಮೀರಿ ಭಾವನೆಗಳ ಬೆಳೆಸುತ್ತದೆ

ಕವಯಿತ್ರಿ ಪ್ರೊ.ಗೀತಾ ವಸಂತ ಅಭಿಮತ



ದಸರಾ ಕವಿಗೋಷ್ಠಿಯಲ್ಲಿ ಕವಯಿತ್ರಿ ಪ್ರೊ.ಗೀತಾ ವಸಂತ ಮಾತನಾಡಿದರು. ನಗರಪಾಲಿಕೆ (ಕಂದಾಯ) ಉಪ ಆಯುಕ್ತ ಜಿ.ಎಸ್.ಸೋಮಶೇಖರ್, ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಮುಕುಂದ ರಾಜ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ.ಎನ್.ಕೆ.ಲೋಲಾಕ್ಷಿ ಮತ್ತಿತರರಿದ್ದರು.

ಮೈಸೂರು, ಸೆ.23(ಎಂಕೆ)– ಕಾವ್ಯ ಬರೀ ರಚನೆಯಲ್ಲ ಶೋಧನೆಯಾಗಿರಬೇಕು. ಸತ್ಯವನ್ನು ಆರಾಧಿಸಿದರೆ ಉತ್ತಮ ಕಾವ್ಯಗಳು ಜನನವಾಗುತ್ತವೆ ಎಂದು ಕವಯಿತ್ರಿ ಪ್ರೊ.ಗೀತಾ ವಸಂತ ಅಭಿಪ್ರಾಯಿಸಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ 5 ದಿನಗಳ ದಸರಾ ಕವಿಗೋಷ್ಠಿ(ಪಂಚ ಕಾವ್ಯದೌತಣ –ಪ್ರಭಾತ, ಪ್ರಚುರ, ಪ್ರಜ್ವಲ, ಪ್ರತಿಭಾ ಮತ್ತು ಪ್ರಬುದ್ಧ)ಯ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಕಾವ್ಯವು ಜಾತಿ, ಧರ್ಮ, ಲಿಂಗ ಭೇದಗಳ ಆಚೆಗೆ ಎಲ್ಲರನ್ನು ಒಗ್ಗೂಡಿಸಿ ಬೆಸೆಯುವ ಕೆಲಸ ಮಾಡುತ್ತದೆ ಎಂದರು.

ಸಣ್ಣಕಾವ್ಯ, ಮಹಾಕಾವ್ಯ ಹಾಗೂ ಪ್ರಾಚೀನ ಕಾವ್ಯಗಳು ಜನರ ಆಶೋತ್ತರಗಳನ್ನು ಅಭಿವ್ಯಕ್ತಗೊಳಿಸಲಿದ್ದು, ಭಾವಕೋಶ, ಅನುಭವ ಕೋಶದಿಂದ ತಾತ್ವಿಕವಾಗಿ ಕಟ್ಟುವುದೇ ಕಾವ್ಯ ಎಂದ ಅವರು ಕುವೆಂಪು ಹೇಳಿದಂತೆ ಕವಿಗಳು ವಿಶ್ವಮಾನವ ಪ್ರಜ್ಞೆಯನ್ನು ಹೊಂದಬೇಕು ಎಂದು ತಿಳಿಸಿದರು.

ಗೀತ ರಚನಾಕಾರ ಕವಿರಾಜ್ ಮಾತನಾಡಿ, ನಿಸರ್ಗವು ಕೆಲವು ವ್ಯಕ್ತಿಗಳಿಗೆ ಮಾತ್ರ ಬರವಣಿಗೆಯ ಸೃಜನಶೀಲತೆಯನ್ನು ನೀಡುತ್ತದೆ. ಕವಿತೆಯು ಸಮಾಜದಲ್ಲಿ ಸಣ್ಣ ಬದಲಾವಣೆಗೆ ಬೀಜ ಬಿತ್ತುತ್ತವೆ. ನಾವು ರಚಿಸಿರುವ 4 ಸಾಲುಗಳು ಯಾವುದೋ ಒಂದು ಜೀವಕ್ಕೆ ಉಪಯೋಗವಾದರೆ ಸಾಕು. ಟ್ರೋಲ್ ಯುಗದಲ್ಲಿ ಸಮಚಿತ್ತವಾಗಿ ಮಾತನಾಡುವವರನ್ನು ಸಮಾಜ ಗಮನಿಸುವುದಿಲ್ಲ. ಹಾಗಾಗಿ ರಮ್ಯತೆಯಿಂದ ಆಚೆಗೆ ಬಂದು ಸಮಾಜದ ತಲ್ಲಣಗಳಿಗೆ ಈಗಿನ ಕವಿಗಳು ದನಿಯಾಗಬೇಕು ಎಂದು ಸಲಹೆ ನೀಡಿದರು.

ಪ್ರಾದೇಶಿಕ ಕವಿಗಳಿಂದ ಕವನ ವಾಚನ: ಪಂಚಕಾವ್ಯದೌತಣದ ಮೊದಲ ದಿನದ 'ಪ್ರಭಾತ ಕವಿಗೋಷ್ಠಿ'ಯಲ್ಲಿ ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಹಾಗೂ ಕೊಡಗು ಜಿಲ್ಲೆಗಳಿಂದ ಆಗಮಿಸಿದ ಪ್ರಾದೇಶಿಕ ಕವಿಗಳು ಸ್ವರಚಿತ ಕವನಗಳನ್ನು ವಾಚಿಸಿ ನೆರೆದ ಕನ್ನಡಾಭಿಮಾನಿಗಳಿಂದ ಸೈ ಎನಿಸಿಕೊಂಡರು. ನಗರಪಾಲಿಕೆ (ಕಂದಾಯ)ಉಪ ಆಯುಕ್ತ ಜಿ.ಎಸ್.ಸೋಮಶೇಖರ್, ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಮುಕುಂದ ರಾಜ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ.ಎನ್.ಕೆ. ಲೋಲಾಕ್ಷಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ದಸರಾ ಸಿಎಂ ಕಪ್ ಕ್ರೀಡಾಕೂಟ

ಮೊದಲ ದಿನವೇ ಜಾವೆಲಿನ್, ಹೈಜಂಪ್ ಸೇರಿ ನಾನಾ ವಿಭಾಗದಲ್ಲಿ 8 ದಾಖಲೆ ನಿರ್ಮಾಣ

ಮೈಸೂರು, ಸೆ.23(ವಿವಿಹೆಚ್)– ನಾಡಹಬ್ಬ ಮೈಸೂರು ದಸರಾ ಸಿಎಂ ಕಪ್–2025 ವಿವಿಧ ಕ್ರೀಡಾಕೂಟಗಳ ಮೊದಲ ದಿನವೇ ಮಹಿಳಾ ಮತ್ತು ಪುರುಷರ ವಿವಿಧ ವಿಭಾಗಗಳಲ್ಲಿ ಕ್ರೀಡಾಪಟುಗಳು ಹೊಸ ದಾಖಲೆ ನಿರ್ಮಿಸಿದ್ದಾರೆ. ಅದರಲ್ಲೂ ಅಥ್ಲೆಟಿಕ್ಸ್‌ನಲ್ಲಿ 8 ಹೊಸ ಕೂಟ ದಾಖಲೆಗಳು ನಿರ್ಮಾಣವಾಗಿವೆ.

ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣ ಸೇರಿದಂತೆ ನಗರದ ವಿವಿಧ ಭಾಗಗಳಲ್ಲಿ ಆಯೋಜಿಸಿರುವ ನಾಲ್ಕು ದಿನಗಳ ಕ್ರೀಡಾಕೂಟದಲ್ಲಿನ ಮೊದಲ ದಿನ 8 ನೂತನ ದಾಖಲೆಗಳಿಗೆ ಸಾಕ್ಷಿಯಾಯಿತು. ಮೈಸೂರು ಭಾಗದ ಶ್ರಾವ್ಯ ಜಾವೆಲಿನ್‌ನಲ್ಲಿ, ಎಸ್.ಬಿ.ಸುಪ್ರಿಯಾ ಹೈ ಜಂಪ್ ವಿಭಾಗದಲ್ಲಿ ನೂತನ ದಾಖಲೆ ನಿರ್ಮಿಸಿದರು.



ಪುರುಷರ ವಿಭಾಗ: 100 ಮೀ. ಓಟ ವಿಭಾಗದಲ್ಲಿ ಬೆಂಗಳೂರು ಗ್ರಾಮಾಂತರದ ಗೌತಮ್.ಎಂ ಅವರು ಕೇವಲ 10.74 ಸೆಕೆಂಡ್‌ಗಳಲ್ಲಿ ಗುರಿಮುಟ್ಟಿ ದಾಖಲೆ ಬರೆದಿದ್ದಾರೆ. ಆ ಮೂಲಕ ಹಳೆಯ ದಾಖಲೆ(10.85 ಸೆ.)ಯನ್ನು ಮುರಿದಿದ್ದಾರೆ. 400 ಮೀಟರ್‌ನಲ್ಲಿ ಬೆಂಗಳೂರು ನಗರದ ಶ್ರೀನಾಥ ದಳವಿ 47.78 ಸೆಕೆಂಡುಗಳಲ್ಲಿ ಹೊಸ ದಾಖಲೆ ಬರೆದಿದ್ದಾರೆ. ಇದರೊಂದಿಗೆ ಹಳೆಯ ದಾಖಲೆಯನ್ನು(48.73) ಪುಡಿಗಟ್ಟಿದರು.

1,500 ಮೀಟರ್ ಓಟದ ಪುರುಷರ ವಿಭಾಗದಲ್ಲಿ ಬೆಂಗಳೂರು ಗ್ರಾಮಾಂತರ ವಲಯದ ಎಂ.ಎಸ್. ಅಶ್ರಿತ್ (ಪ್ರ) 3.57 ನಿಮಿಷಗಳಲ್ಲಿ ಕ್ರಮಿಸಿ, 4.02 ನಿಮಿಷಗಳ ಓಟದ ಹಳೆಯ ದಾಖಲೆಯನ್ನು ಸರಿಗಟ್ಟಿದರು.

ಹೈ ಜಂಪ್ ವಿಭಾಗದಲ್ಲಿ ಬೆಂಗಳೂರು ಗ್ರಾಮೀಣ ಭಾಗದ ಸುದೀಪ್ 2.00 ಮೀ ಎತ್ತರಕ್ಕೆ ಜಗಿಯುವ ಮೂಲಕ ನೂತನ ದಾಖಲೆ ಬರೆದು, ಈ ಹಿಂದಿನ ದಾಖಲೆಯನ್ನು(1.95 ಮೀ) ಮುರಿದರೆ, ಡಿಸ್ಕಸ್ ಥ್ರೋನಲ್ಲಿ ದಕ್ಷಿಣ ಕನ್ನಡದ ನಾಗೇಂದ್ರ ಅಣ್ಣಪ್ಪ ನಾಯಕ್ 52.78 ಮೀ ದೂರಕ್ಕೆ ಎಸೆಯುವ ಮೂಲಕ ಹಳೆಯ 50.52 ಮೀ ದಾಖಲೆಯನ್ನು ಸರಿಗಟ್ಟಿದ್ದಾರೆ. ಇವು ಮೊದಲ ದಿನ ಪುರುಷರ ವಿಭಾಗದಲ್ಲಿ ದಾಖಲಾದ ರೆಕಾರ್ಡ್‌ಗಳಾಗಿವೆ.

ಮಹಿಳಾ ವಿಭಾಗ: ಇತ್ತ ಮಹಿಳಾ ಕ್ರೀಡಾಪಟುಗಳು ತಾವೇನು ಕಡಿಮೆ ಇಲ್ಲ ಎಂಬಂತೆ 100 ಮೀ ಓಟದಲ್ಲಿ ಬೆಂಗಳೂರು ನಗರದ ನಿಯೋಲ್ ಅನ್ನಾ ಕಾರ್ನೆಲಿಯೊ 12.00 ಸೆಕೆಂಡುಗಳು ಕ್ರಮಿಸಿ ನೂತನ ದಾಖಲೆ ಬರೆದು ಹಳೆಯ 12.24 ಸೆ. ದಾಖಲೆಯನ್ನು ಮುರಿದಿದ್ದಾರೆ.

ಹೈ ಜಂಪ್‌ನಲ್ಲಿ ಮೈಸೂರು ಭಾಗದ ಎಸ್.ಬಿ. ಸುಪ್ರಿಯಾ 1.71 ಮೀ. ಎತ್ತರಕ್ಕೆ ಜಿಗಿಯುವ ಮೂಲಕ 1.63 ಮಿ. ಜಗಿತದ ಹಳೆ ದಾಖಲೆ ಮುರಿದರು.

ಮೈಸೂರು ಭಾಗದ ಶ್ರಾವ್ಯ 45.53 ಮೀ. ದೂರದ ವರೆಗೆ ಜಾವೆಲಿನ್ ಎಸೆದು ಹಳೆಯ 40.40 ಮೀ. ದಾಖಲೆಯನ್ನು ಪುಡಿಗಟ್ಟಿದರು. ಆ ಮೂಲಕ ಮೊದಲ ದಿನ 8 ನೂತನ ಮೈಲುಗಲ್ಲುಗಳು ಸ್ಥಾಪನೆಯಾದವು.

ಚಾಮುಂಡೇಶ್ವರಿ ದೇವಾಲಯದ ನೌಕರ ಸಾವು; ಅರ್ಧ ದಿನ ಮುಖ್ಯ ದ್ವಾರ ಬಂದ್



ಮೈಸೂರು,ಸೆ.23– ಚಾಮುಂಡಿಬೆಟ್ಟದ ದೇವಾಲಯದಲ್ಲಿ ಸನ್ನಿಧಿ ಕಾವಲುಗಾರರಾಗಿ ಸೇವೆ ಸಲ್ಲಿಸುತ್ತಿದ್ದ ರಾಜು(37) ಅನಾರೋಗ್ಯದಿಂದ ಕಳೆದ ರಾತ್ರಿ ನಿಧನರಾಗಿದ್ದು, ಮಂಗಳವಾರ ಮಧ್ಯಾಹ್ನದವರೆಗೂ ಚಾಮುಂಡೇಶ್ವರಿ ದೇವಾಲಯದ ಮುಖ್ಯದ್ವಾರ ಬಂದ್ ಮಾಡಿ ಉತ್ತರ ಬಾಗಿಲಿನಿಂದ ದೇವಾಲಯಕ್ಕೆ ಭಕ್ತರ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ಚಾಮುಂಡಿಬೆಟ್ಟದ ಕುರುಬರ ಬೀದಿ ನಿವಾಸಿ ವೀರಭದ್ರಸ್ವಾಮಿ ಅವರ ಪುತ್ರ ರಾಜು ಅವರು ತಂದೆ ನಿವೃತ್ತಿಯ ನಂತರ ಚಾಮುಂಡಿಬೆಟ್ಟದ ದೇವಾಲಯದಲ್ಲಿ ಸನ್ನಿಧಿ ಕಾವಲುಗಾರರಾಗಿ ಕಳೆದ 8 ವರ್ಷದಿಂದ ಸೇವೆ ಸಲ್ಲಿಸುತ್ತಿದ್ದರು. ಶಿವಾರ್ಚಕ ಎಂದು ಕರೆಯಲ್ಪಡುತ್ತಿದ್ದ ರಾಜು ಅವರು ಕಳೆದ ಕೆಲ ತಿಂಗಳಿಂದ ಅನಾರೋಗ್ಯಕ್ಕೀಡಾಗಿದ್ದರು. ಚಿಕಿತ್ಸೆ ಪಡೆಯಲು ಮಂಡ್ಯಗೆ ತೆರಳಿದ್ದಾಗ ಕಳೆದ ರಾತ್ರಿ ನಿಧನರಾಗಿದ್ದಾರೆ. ಮೃತದೇಹವನ್ನು ಚಾಮುಂಡಿಬೆಟ್ಟದ ಅವರ ನಿವಾಸಕ್ಕೆ ತಂದು ವಿಧಿ ವಿಧಾನ ದಂತೆ ಮಧ್ಯಾಹ್ನ ಚಾಮುಂಡಿಬೆಟ್ಟದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸ ಲಾಯಿತು. ಮೃತ ರಾಜು ತಂದೆ, ತಾಯಿ, ಪತ್ನಿ, ಇಬ್ಬರು ಹೆಣ್ಣು ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ.

ಮುಖ್ಯದ್ವಾರ ಬಂದ್, ಉತ್ತರ ದ್ವಾರದಿಂದ ಭಕ್ತರ ಪ್ರವೇಶ

ಚಾಮುಂಡಿಬೆಟ್ಟದಲ್ಲಿ ಯಾವುದೇ ಜಾತಿ, ಜನಾಂಗದವರು ಸಾವಾದರೆ ಚಾಮುಂಡೇಶ್ವರಿ ದೇವಾಲಯದ ಮುಖ್ಯ ದ್ವಾರ ಬಂದ್ ಮಾಡಿ, ಉತ್ತರ ದ್ವಾರದಿಂದ ಭಕ್ತರನ್ನು ದೇವಾಲಯ ಪ್ರವೇಶಕ್ಕೆ ಅವಕಾಶ ಮಾಡಿಕೊಡುವ ಪದ್ಧತಿ ಇದೆ. ಅಂತ್ಯ ಸಂಸ್ಕಾರ ನೆರವೇರಿದ ಬಳಿಕ ವಿಶೇಷ ಪೂಜೆ ಮಾಡಿ ಮುಖ್ಯ ದ್ವಾರ ತೆರೆಯಲಾಗುತ್ತದೆ. ಇಂದು ಸನ್ನಿಧಿ ಕಾವಲುಗಾರ ರಾಜು ನಿಧನ ಹಿನ್ನೆಲೆಯಲ್ಲಿ ದೇವಾಲಯದ ಮುಖ್ಯದ್ವಾರ ಅರ್ಧ ದಿನ ಬಂದ್ ಮಾಡಲಾಗಿತ್ತು. ಅಂತ್ಯಸಂಸ್ಕಾರ ನೆರವೇರಿದ ಬಳಿಕ ಮುಖ್ಯದ್ವಾರ ತೆರೆಯಲಾಯಿತು.

ಸಮೀಕ್ಷೆಯಲ್ಲಿ ಗಾಣಿಗ ಎಂದು ಬರೆಸಲು ಮನವಿ

ಮೈಸೂರು, ಸೆ.23–ರಾಜ್ಯ ಸರ್ಕಾರ ನಡೆಸುತ್ತಿರುವ ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ವೇಳೆ ಜಾತಿ ಕಾಲಂನಲ್ಲಿ ಗಾಣಿಗ ಎಂದು ಬರೆಸಲು ಮೈಸೂರು ನಗರ (ಜಿಲ್ಲಾ) ಗಾಣಿಗರ ಹಿತ ರಕ್ಷಣಾ ವೇದಿಕೆ(ಬೆಲವತ್ತ)ಯ ಅಧ್ಯಕ್ಷ ಬೆಲವತ್ತ ಶಿವಕುಮಾರ್ ಮನವಿ ಮಾಡಿದ್ದಾರೆ.

ಈಗಾಗಲೇ ಸಮೀಕ್ಷೆ ಆರಂಭವಾಗಿದ್ದು, ಗಾಣಿಗ ಸಮುದಾಯದವರು ಧರ್ಮ ಕಾಲಂನಲ್ಲಿ ಹಿಂದೂ ಎಂದು, ಜಾತಿ ಕಾಲಂನಲ್ಲಿ ಗಾಣಿಗ ಎಂದು, ಉಪಜಾತಿ ಕಾಲಂನಲ್ಲಿ ಶಿವಜ್ಯೋತಿ ಪಣ–ಗಾಣಿಗ ಎಂದು ಬರೆಸುವಂತೆ ಅವರು ತಮ್ಮ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸಮಾಜದ ಬಾಂಧವರು ಜಾತಿ ಕಾಲಂನಲ್ಲಿ ಗಾಣಿಗ ಎಂದು ಬರೆಸುವುದರಿಂದ ಸರ್ಕಾರದಿಂದ ಮುಂದಿನ ದಿನಗಳಲ್ಲಿ ಸಿಗುವ ಸವಲತ್ತುಗಳು ಮತ್ತು ಮೀಸಲಾತಿಗಳನ್ನು ಪಡೆಯಲು ಅನುಕೂಲವಾಗುವುದರಿಂದ ಇದನ್ನೇ ಬರೆಸುವಂತೆ ಅವರು ಕೋರಿದ್ದಾರೆ.

ಜಿಲ್ಲಾ ಪಂಚಾಯತ್ ಕಾರ್ಯಾಲಯ, ಮೈಸೂರು

ಇ–ಮೇಲ್: ceo_zp_mys@nic.in, zpmysceo@gmail.com,

ದೂರವಾಣಿ ಸಂಖ್ಯೆ: 0821–2330052

ಸಂ: ಸಿ.ಆರ್.ಟಿ/25/2013–14 ದಿನಾಂಕ: 21.09.2025

ವಕೀಲರ ನೇಮಕಾತಿಗೆ ಅಧಿಸೂಚನೆ

ಮೈಸೂರು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ದಾಖಲಾಗುವ ಪ್ರಕರಣಗಳನ್ನು ಪ್ರತಿನಿಧಿಸಲು ವಕೀಲರನ್ನು ನೇಮಕಾತಿಗೊಳಿಸುವ ಸಂಬಂಧ Call for Application for empanelment of Advocate/sರ ಪ್ರತಿ, Annexure-A ಅರ್ಜಿ ಪ್ರತಿಯನ್ನು mysore.nic.in Website ನಲ್ಲಿ Upload ಗೊಳಿಸಲಾರುತ್ತದೆ. ಅದರಂತೆ ಅರ್ಜಿಯನ್ನು Website ನಲ್ಲಿ ಪಡೆದು ಭರ್ತಿ ಮಾಡಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು ರವರ ವಿಳಾಸಕ್ಕೆ ಅಥವಾ ಇ–ಮೇಲ್ ceo_zp_mys@nic.in ಮೂಲಕ ಸಲ್ಲಿಸುವುದು. ಅರ್ಜಿ ಸಲ್ಲಿಸಲು ದಿನಾಂಕ 30.09.2025 ಕೊನೆಯ ದಿನಾಂಕವಾಗಿರುತ್ತದೆ.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪರವಾಗಿ,
ಜಿಲ್ಲಾ ಪಂಚಾಯತ್, ಮೈಸೂರು

DIPR/DDMYS/09/KSMCA/534/2025-26

ಕರ್ನಾಟಕ ಸರ್ಕಾರ
ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ

ನ್ಯೂ ಸಯ್ಯಾಜಿ ರಾವ್ ರಸ್ತೆ, ವಿಶ್ವೇಶ್ವರಯ್ಯ ವೃತ್ತ, ಮೈಸೂರು–570001

ದೂ.: 0821–2443701, 0821–2442205 ಫ್ಯಾ.ಸಂ.:0821–2443701

E-mail ID:gamcmysore@gmail.com

ಸಂಖ್ಯೆ: ಸಆಆ/16/ಸರಬ/2025–26 ದಿನಾಂಕ: 19.09.2025

ದರಪಟ್ಟಿ ಆಹ್ವಾನ ಪ್ರಕಟಣೆ

ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು ಇಲ್ಲಿನ ಕಾಲೇಜು ಬಸ್ಸು, ಸಂಖ್ಯೆ ಕೆಎ–55–ಜಿ 7018ರ ದುರಸ್ತಿ ಹಾಗೂ ಹೊಸ ಟೈರುಗಳನ್ನು ಅಳವಡಿಸಲು ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು ದಿ: 29.09.2025ರ ಅಪರಾಹ್ನ 5.00 ಗಂಟೆಯೊಳಗಾಗಿ ದರಪಟ್ಟಿಯನ್ನು ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಪ್ರಾಚಾರ್ಯರು, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ

DIPR/DDMYS/1000/KSMCA/537/2025-26

ಮೈಸೂರು ಪ್ರಾಂತೀಯ ಪ್ರಾಥಮಿಕ ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

ಜಿಲ್ಲಾ ಶಿಕ್ಷಕರ ಸದನ, ಮೈಸೂರು ಡೈರಿ ಪಕ್ಕ, ಬನ್ನೂರು ರಸ್ತೆ, ಮೈಸೂರು – 570011
(ಜಿ.ಆರ್.ಎಂ / ಎಸ್–7: ಎಚ್. ಎಚ್. ಎಸ್.: 126,
ನೊಂ ಸಂ. 37289 / 2010–11 ದಿ. 25–04–2011)

ವಾರ್ಷಿಕ ಮಹಾಸಭೆ ಆಹ್ವಾನ ಪತ್ರಿಕೆ

ಮಾನ್ಯರೇ

ಮೇಲ್ಕಂಡ ನಮ್ಮ ಸಹಕಾರ ಸಂಘದ 2024–25ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿ: 25.09.2025 ಗುರುವಾರ ಬೆಳಿಗ್ಗೆ 10–00 ಘಂಟೆಗೆ ಮೈಸೂರಿನ ಮಹಾಜನ ಎಜುಕೇಷನ್ ಸೊಸೈಟಿ, ಮಹಾಜನ ಪ್ರೌಢಶಾಲೆ, ಸುಬ್ಬಲಕ್ಷ್ಮಿ ಹಾಲ್, ಜಯಲಕ್ಷ್ಮಿ ಪುರಂ, ಮೈಸೂರು ಇಲ್ಲಿ ಸಂಘದ ಅಧ್ಯಕ್ಷರಾದ ಹೆಚ್. ಬಿ. ಬಸವರಾಜುರವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಎಲ್ಲಾ ಮಾನ್ಯ ಸದಸ್ಯರುಗಳಿಗೆ ಅಂಚೆ ಮೂಲಕ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು ಆಹ್ವಾನ ಪತ್ರಿಕೆ ತಲುಪದೇ ಇರುವ ಸದಸ್ಯರು ಇದೇ ಆಹ್ವಾನ ಪತ್ರಿಕೆ ಎಂದು ತಿಳಿದು ದಯಾಮಾಡಿ ಸದರಿ ಮಹಾಸಭೆಯಲ್ಲಿ ಭಾಗವಹಿಸಬೇಕೆಂದು ಕೋರುತ್ತೇನೆ

ಆಡಳಿತ ಮಂಡಳಿ ಆಜ್ಞೆ ಮೇರೆಗೆ
ಸಹಿ/– ತಾತ್ಕಾಲಿಕ ಕಾರ್ಯದರ್ಶಿ

ಪಟ್ಟಣ ಪಂಚಾಯಿತಿ ಕಾರ್ಯಾಲಯ, ರಮ್ಮನಹಳ್ಳಿ

ಮೈಸೂರು ಜಿಲ್ಲೆ – 571107

ಇ–ಮೇಲ್: ka.rammanahalli.tp@gmail.com

ಸಂಖ್ಯೆ: ಪಪಂರ/ಜಿ.ಇ.–03/ಟಿ.ಪ್ರ/ಪಿ.ಆರ್.–02/2025–26 ದಿನಾಂಕ: 10.09.2025

ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮೂಲಕ)

ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಗೆ ಹೊರಗುತ್ತಿಗೆ ಆಧಾರ ಮೇಲೆ ಮಾನವ ಸಂಪನ್ಮೂಲ ಒದಗಿಸಲು, ಮುಖ್ಯಾಧಿಕಾರಿಗಳ ದೈನಂದಿನ ಕೆಲಸ ಕಾರ್ಯಗಳಿಗಾಗಿ ಹೊರಗುತ್ತಿಗೆ ಆಧಾರ ಮೇಲೆ ನಾಲ್ಕು ಚಕ್ರದ ವಾಹನ ಸೌಲಭ್ಯ ಒದಗಿಸಲು ಮತ್ತು ಎಸ್.ಎಫ್.ಸಿ ಕುಡಿಯುವ ನೀರು ಅನುದಾನದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಕಾಮಗಾರಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ.

1) ಟೆಂಡರ್‌ನ್ನು ಸಲ್ಲಿಸಲು ಕಡೆಯ ದಿನಾಂಕ: 10.10.2025 ಸಂಜೆ 5.30 ಗಂಟೆಯವರೆಗೆ. 2) ಟೆಂಡರ್ ತೆರೆಯುವ ದಿನಾಂಕ: **13.10.2025**ರಂದು ಕಛೇರಿಯ ಅವಧಿಯಲ್ಲಿ ಅಥವಾ ಮುಂದೆ ಸೂಚಿಸುವ/ನಿಗಧಿಪಡಿಸುವ ದಿನಾಂಕದಂದು ತೆರೆಯಲಾಗುವುದು.

ಕ್ರ. ಸಂ.	ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಷರಾ
1	DMA/2025-26/SE6255	6.19	15,500/-	
2	DMA/2025-26/SE6256	4.80	12,500/-	
3	DMA/2025-26/WS/WORK_INDENT47225/CALL-2	4.75	5,940/-	ಎಸ್.ಟಿ. ಗುತ್ತಿಗೆದಾರರಿಗೆ ಮೀಸಲು

ಸೂಚನೆ: 1) ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳು ಇದ್ದರೆ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಅದರೆ ಕೆಪಿಪಿಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು https://kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/–
ಆಡಳಿತಾಧಿಕಾರಿಗಳು
ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ

ಸಹಿ/–
ಮುಖ್ಯಾಧಿಕಾರಿ
ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ

DIPR/MYS/1010/SA/2025-26

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಕಣೇನೂರು ಅಂಚೆ, ಸಂಗಮ ಕ್ಷೇತ್ರದಲ್ಲಿರುವ "ಶ್ರೀ ಸದ್ಗುರು ಮಹದೇವ ತಾತ ಭಕ್ತ ಮಂಡಳಿ (ರಿ)" ರವರ ಟ್ರಸ್ಟ್‌ನ ಪರವಾಗಿ ಸಮಸ್ತ ಸಾರ್ವಜನಿಕರ ಗಮನಕ್ಕಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ:– ಈ ಕೆಳಗೆ ಶೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಬಳ್ಳಾರಿ ಜಿಲ್ಲೆ, ಆಲ್ಲಿಪುರದಿಂದ ಬಂದು ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ ಸೊತ್ತ ದಾಖಲೆ, ಶ್ರೀ ಸಂಗಮೇಶ್ವರ ಯಾತ್ರ ಸ್ಥಳದಲ್ಲಿ ಇದ್ದ ಶ್ರೀ ಶ್ರೀ ಶ್ರೀ ಸದ್ಗುರು ಜ್ಞಾನ ರಂಭಾಪುರಿ ಮಠದ ಮಹದೇವಸ್ವಾಮಿಗಳವರು ಅಂದರೆ ಶ್ರೀ ಶ್ರೀ ಶ್ರೀ ಸದ್ಗುರು ಮಹದೇವ ತಾತ ಎಂಬ ಯೋಗಿಗಳು ದಿ:06–10–1980 ರ ನೋಂದಾಯಿತ ಕ್ರಯಪತ್ರದ ಮೂಲಕ ಕ್ರಯಕ್ಕೆ ಪಡೆದು, ಅವರ ಮಾಲೀಕತ್ವ, ಸ್ವಾಧೀನಾನುಭವಕ್ಕೆ ಒಳಪಟ್ಟ ಅವರ ಸ್ವಯಾರ್ಜಿತ ಸ್ವತ್ತಾಗಿರುತ್ತದೆ. ಶ್ರೀ ಶ್ರೀ ಶ್ರೀ ಸದ್ಗುರು ಮಹದೇವ ತಾತರವರು ಹಿಂದೆ ಸಂಗಮ ಕ್ಷೇತ್ರದಲ್ಲಿ 1980 ನೇ ಇಸವಿ ಸುಮಾರಿಗೆ ಸಮಾಜವನ್ನು ಆಧ್ಯಾತ್ಮ ಜ್ಞಾನದತ್ತ ತನ್ನದೇ ವಿಶಿಷ್ಟ ರೀತಿಯಲ್ಲಿ ಮುನ್ನಡೆಸುತ್ತಾ ನೆಲೆಸಿದ್ದರು. ಅವರು 102ನೇ ವಯಸ್ಸಿನಲ್ಲಿ ದಿ:30–12–1987 ರಲ್ಲಿ ಸಂಗಮ ಕ್ಷೇತ್ರದಲ್ಲಿ ಲಿಂಗೈಕ್ಯರಾಗಿದ್ದು, ಅವರ ಭಕ್ತ ವೃಂದವು ಅವರ ಐಕ್ಯ ಸ್ಥಳವಾದ ಸಂಗಮ ಕ್ಷೇತ್ರದಲ್ಲಿ ಗದ್ದುಗೆ, ದೇವಸ್ಥಾನ, ಗೋಶಾಲೆ, ಛತ್ರ ಇತ್ಯಾದಿ ಕಟ್ಟಡಗಳನ್ನು ನಿರ್ಮಿಸಿ ಪೂಜಾ ಕೈಂಕರ್ಯವನ್ನು ನಡೆಸುತ್ತಾ ಬಂದಿದ್ದು, ಇದೊಂದು ಪುಣ್ಯಕ್ಷೇತ್ರವಾಗಿರುತ್ತದೆ. ತದನಂತರ ದಿ:16–09–2011 ರಲ್ಲಿ ನಮ್ಮ ಕಕ್ಷಿದಾರರ ಶ್ರೀ ಶ್ರೀ ಶ್ರೀ ಸದ್ಗುರು ಮಹದೇವ ತಾತ ಭಕ್ತ ಮಂಡಳಿ (ರಿ) ಟ್ರಸ್ಟ್ ಅಸ್ತಿತ್ವಕ್ಕೆ ಬಂದಿರುತ್ತದೆ. ಅಂತೆಯೇ ಯೋಗಿಗಳಾದ ಶ್ರೀ ಶ್ರೀ ಶ್ರೀ ಸದ್ಗುರು ಮಹದೇವ ತಾತರವರ ಇಚ್ಛೆ, ಆದೇಶದಂತೆ ಸಂಗಮ ಕ್ಷೇತ್ರದ ದೇವಾಲಯದಲ್ಲಿ ನಮ್ಮ ಕಕ್ಷಿದಾರರ ಟ್ರಸ್ಟ್ ದಿನನಿತ್ಯ ಪೂಜಾ ಕೈಂಕರ್ಯ, ಭಕ್ತಾದಿಗಳಿಗೆ ದಾಸೋಹ, ಬಡ ವಿದ್ಯಾರ್ಥಿಗಳಿಗೆ ವಿದ್ಯಾಸಂಸ್ಥೆ ಇತ್ಯಾದಿ ಸೇವಾ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ. ಶೆಡ್ಯೂಲ್ ಸ್ವತ್ತನ್ನು ಈ ಮೇಲೆ ನಮೂದಿಸಿರುವಂತೆ ಕ್ರಯಕ್ಕೆ ಪಡೆದ ಮಹದೇವಸ್ವಾಮಿಗಳವರು ಅಂದರೆ, ಶ್ರೀ ಶ್ರೀ ಶ್ರೀ ಸದ್ಗುರು ಮಹದೇವ ತಾತ ರವರು ಯೋಗಿಗಳಾಗಿದ್ದು, ಅವರ ಮರಣದ ನಂತರ ಯಾವುದೇ ವಾರಸುದಾರರು ಇಲ್ಲದ ಪ್ರಯುಕ್ತ ನಮ್ಮ ಕಕ್ಷಿದಾರರ ಟ್ರಸ್ಟ್ ಶೆಡ್ಯೂಲ್ ಸ್ವತ್ತಿನಲ್ಲಿರುವ ಗದ್ದುಗೆ, ದೇವಸ್ಥಾನ, ಇತ್ಯಾದಿಗಳ ನಿರ್ವಹಣೆ ಮಾಡುತ್ತಾ ಬಂದಿದ್ದು, ಶ್ರೀ ಶ್ರೀ ಶ್ರೀ ಸದ್ಗುರು ಮಹದೇವ ತಾತ ರವರ ಆಣತಿಯಂತೆ ವಿವಿಧ ಮೇಲೆ ನಮೂದಿಸಿದ ಸೇವಾ ಕಾರ್ಯಗಳನ್ನು ನಡೆಸುತ್ತಾ ಬಂದು, ಶೆಡ್ಯೂಲ್ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದು, ಸೇವಾ ಕಾರ್ಯವನ್ನು ನಡೆಸುತ್ತಿರುತ್ತಾರೆ. ಮುಂದಿನ ದಿನಗಳಲ್ಲಿ ಶೆಡ್ಯೂಲ್ ಸ್ವತ್ತಿಗೆ ಯಾವುದೇ ವ್ಯಾಜ್ಯ, ತಕರಾರು ಉಂಟಾಗದಿರಲೆಂದು ನಮ್ಮ ಕಕ್ಷಿದಾರರ ಟ್ರಸ್ಟ್‌ನವರು ಶೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಟ್ರಸ್ಟ್‌ನ ನಾಮಾಂಕಿತದಲ್ಲಿ ನೋಂದಣಿ ಪ್ರಕ್ರಿಯೆ ದಾಖಲಾತಿ, ಖಾತೆ ವರ್ಗ್ಗೆ ಮಾಡಿಸಿಕೊಳ್ಳುವ ಇರಾದೆ ಹೊಂದಿದ್ದು, ಈ ವಿಷಯವನ್ನು ಸಾರ್ವಜನಿಕರ ಗಮನಕ್ಕೆ ತಂದಿರುತ್ತೇವೆ. ಒಂದು ವೇಳೆ ಶೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಳಿಗೆ, ಸಂಘ ಸಂಸ್ಥೆಗಳಿಗೆ, ಬ್ಯಾಂಕ್, ಇಲಾಖೆ ಇತ್ಯಾದಿಯವರಿಗೆ ಯಾವುದೇ ರೀತಿಯ ಹಕ್ಕು ಅಧಿಕಾರ ಇದ್ದ ಪಕ್ಷದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದ 15 ದಿನಗಳ ಒಳಗಾಗಿ ಈ ಕೆಳಗೆ ನಮೂದಿಸಿರುವ ವಕೀಲರನ್ನು ಅವರ ಕಛೇರಿಯಲ್ಲಿ ಭೇಟಿಯಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ತದನಂತರ ಬರುವ ಯಾವುದೇ ತಕರಾರುಗಳಿಗೆ ಮಾನ್ಯತೆ ಇರುವುದಿಲ್ಲವೆಂದು ತಿಳಿಯಪಡಿಸಲಾಗಿದೆ.

ಷೆಡ್ಯೂಲ್

ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ವರದನಹಳ್ಳಿ ಗ್ರಾಮಕ್ಕೆ ಸೇರಿರುವ ಸ.ನಂ.48 ರ 4 ಎಕರೆ 0.24 ಗುಂಟೆ ಜಮೀನು ಮತ್ತು ಅದಕ್ಕೆ ಚಕ್ಕುಬಂದಿ:– ಪೂರ್ವಕ್ಕೆ: ಕಬಿನಿ ಮತ್ತು ಕೈಗು ನದಿಗಳ ಸಂಗಮ; ಪಶ್ಚಿಮಕ್ಕೆ: ಹುಚ್ಚಿಗಣಿ ಗ್ರಾಮದ ಕಾಳೇಗೌಡರ ಮಗ ಈರೇಗೌಡರವರ ಜಮೀನು; ಉತ್ತರಕ್ಕೆ: ಕಬಿನಿ ಹೊಳೆ; ದಕ್ಷಿಣಕ್ಕೆ: ಸಂಗಮ ಕ್ಷೇತ್ರಕ್ಕೆ ಸೇರಿದ ಸ್ವತ್ತು.

ಸಹಿ/– ಶ್ರೀ.ಕೆ.ಎಸ್. ಮೃತ್ಯುಂಜಯ, ಶ್ರೀಮತಿ ಅನುರಾಧ.ಬಿ.ಆರ್.
ಶ್ರೀ ರವೀಶ್.ಹೆಚ್.ಎಸ್, ಕು. ನವ್ಯ.ಎನ್.ಎನ್.
ವಕೀಲರು, ಎನ್.ಎ.ಎಸ್.ಆರ್ಕೇಡ್, 1ನೇ ಮಹಡಿ, 19ನೇ ಕ್ರಾಸ್,
ಎಕ್ಸ್ ಟೆನ್ಷನ್, ಎಂ.ಜಿ.ಎಸ್. ರಸ್ತೆ, ನಂಜನಗೂಡು ಟೌನ್
ಮೊ: 9448390627

ಸ್ಥಳ: ನಂಜನಗೂಡು
ದಿನಾಂಕ : 23/9/2025

DOCUMENTS LOST

Original Sale Deed in the name of S.K. Nagamani & original Gift Deed in the name of Akshay M. S. and other documents pertaining to site No. 42, Property No. 12-2-544-237C situated at Hemavathi Nagar (Ward 12), Hassan have been lost.

Finders Please Contact:
94825 80667

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಅದರ ಮಾಲೀಕರಾದ, **(1). ಅಸೀನಾ ಬಾನು ಬಿನ್ ಲೇಟ್. ರಜಾಕ್, (2). ಜಮ್ರುದ್ ಪಾಷಾ ಬಿನ್ ಲೇಟ್, ರಜಾಕ್, (3). ಜಬೀನ್ ತಾಜ್ ಬಿನ್. ಲೇಟ್. ರಜಾಕ್, (4), ಹಕ್ ಪಾಷ ಬಿನ್ ಲೇಟ್, ರಜಾಕ್, (5), ಮಹಮ್ಮದ್ ಜಫ್ರುಲ್ಲಾ ಬಿನ್. ಲೇಟ್, ರಜಾಕ್, (6). ಫರ್ಜಾನ ಬಾನು ಕೋಂ.** ಲೇಟ್. ಮಹಮ್ಮದ್ ರಫಿಕ್ ಉಲ್ಲಾ, ಮಹಮ್ಮದ್ ಸಾಹಿಲ್ ಮತ್ತು ಸಾದಿಯ ಅಂಜುಂ ಬಿನ್. ಲೇಟ್. ಮಹಮ್ಮದ್ ರಫಿಕ್ ಉಲ್ಲಾ ಇವರ ಪರವಾಗಿ ಜನಕ ತಾಯಿ ಫರ್ಜಾನ ಬಾನು. ಇವರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ,

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷಿದಾರರು ನಿರ್ಬಂದಿತರಾಗುವುದಿಲ್ಲ.

ಷೆಡ್ಯೂಲ್

ಐಟಂ–1: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮದ ಸರ್ವೆ ನಂಬರ್ 36/2, ರಲ್ಲಿನ ಇಪ್ಪತ್ತೊಂದು ಗುಂಟೆ (0.21.00.00) ಖುಷ್ಕಿ ಜಮೀನು ಸದರಿ ಜಮೀನಿಗೆ ಚಕ್ಕು ಬಂದಿ: ಪೂರ್ವಕ್ಕೆ : ಶಫಿ ಉಲ್ಲಾ ರವರ ಉಳಿಕೆ ಜಮೀನು, ಪಶ್ಚಿಮಕ್ಕೆ : ಅಬ್ದುಲ್ ಲತೀಫ್ ರವರ ಜಮೀನು. ಉತ್ತರಕ್ಕೆ : ನಿಂಗಶೆಟ್ಟಿ ರವರ ಜಮೀನು. ದಕ್ಷಿಣಕ್ಕೆ : ಅಬ್ದುಲ್ ಲತೀಫ್ ರವರ ಜಮೀನು.

ಐಟಂ–2: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮದ ಸರ್ವೆ ನಂಬರ್ 37/2, ರಲ್ಲಿನ ಮೂವತ್ತು ಗುಂಟೆ (0.30.00.00) ಖುಷ್ಕಿ ಜಮೀನು ಸದರಿ ಜಮೀನಿಗೆ ಚಕ್ಕು ಬಂದಿ: ಪೂರ್ವಕ್ಕೆ : ನಿಂಗಶೆಟ್ಟಿ ರವರ ಜಮೀನು, ಪಶ್ಚಿಮಕ್ಕೆ : ಮೆಹಬೂಬ್ ಜಾನ್ ರವರ ಜಮೀನು, ಉತ್ತರಕ್ಕೆ : ಮೆಹಬೂಬ್ ಜಾನ್ ರವರ ಜಮೀನು, ದಕ್ಷಿಣಕ್ಕೆ : ಶಫಿ ಉಲ್ಲಾ ರವರ ಉಳಿಕೆ ಜಮೀನು.

ಸಹಿ/– ಎಂ.ಎನ್.ಪ್ರಕಾಶ್ ಕಾಳಪ್ಪ, ವಕೀಲರು

Reg. No. KAR 1996-2000, #2-3, First Floor, PRI Complex, 67/7A,
New Sayyajirao Road, Fort Mohalla, Mysore-570004
Cell: 93431 12535 E-mail: mnprakashkalappa@gmail.com

ಸ್ಥಳ: ಮೈಸೂರು, ದಿನಾಂಕ:: 18/09/2025

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಅದರ ಮಾಲೀಕರಾದ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡ ಕಾನ್ಯ ಗ್ರಾಮದ ವಾಸಿಯಾದ **ಶ್ರೀ. ಅಬ್ದುಲ್ ಶುಕೂರ್** ಬಿನ್. ರಹೀಮ್ ಸಾಬ್ ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ,

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಬಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂದಿತರಾಗುವುದಿಲ್ಲ.

ಷೆಡ್ಯೂಲ್

ಐಟಂ–1: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮದ ಸರ್ವೆ ನಂಬರ್ 36/5, ರಲ್ಲಿನ ಇಪ್ಪತ್ತೆರಡು ಗುಂಟೆ (0.22.00.00) ಖುಷ್ಕಿ ಜಮೀನು ಸದರಿ ಜಮೀನಿಗೆ ಚಕ್ಕು ಬಂದಿ: ಪೂರ್ವಕ್ಕೆ : ಪಂಚಾಕ್ಷರಿ ರವರ ಜಮೀನು, ಪಶ್ಚಿಮಕ್ಕೆ : ಅಬ್ದುಲ್ ಶುಕೂರ್ ರವರ ಉಳಿಕೆ ಜಮೀನು, ಉತ್ತರಕ್ಕೆ : ಹಕ್ ಪಾಷ ರವರ ಜಮೀನು, ದಕ್ಷಿಣಕ್ಕೆ : ಶಿವಮೂರ್ತಿ ರವರ ಜಮೀನು

ಐಟಂ–2: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮದ ಸರ್ವೆ ನಂಬರ್ 37/5, ರಲ್ಲಿನ ಮೂವತ್ತು ಗುಂಟೆ (0.30.00.00) ಖುಷ್ಕಿ ಜಮೀನು ಸದರಿ ಜಮೀನಿಗೆ ಚಕ್ಕು ಬಂದಿ: ಪೂರ್ವಕ್ಕೆ : ಸರ್ವೆ ನಂಬರ್ 37/4, ಪಶ್ಚಿಮಕ್ಕೆ : ಚಿಕ್ಕಕಾನ್ಯ ಗ್ರಾಮ ಗಡಿ, ಉತ್ತರಕ್ಕೆ : ಸರ್ವೆ ನಂಬರ್ 38, ದಕ್ಷಿಣಕ್ಕೆ : ಸರ್ವೆ ನಂಬರ್ 32.

ಸಹಿ/– ಎಂ.ಎನ್.ಪ್ರಕಾಶ್ ಕಾಳಪ್ಪ, ವಕೀಲರು

Reg. No. KAR 1996-2000, #2-3, First Floor, PRI Complex, 67/7A,
New Sayyajirao Road, Fort Mohalla, Mysore–570004
Cell: 93431 12535 E-mail: mnprakashkalappa@gmail.com

ಸ್ಥಳ: ಮೈಸೂರು, ದಿನಾಂಕ: 22/09/2025

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಅದರ ಮಾಲೀಕರಾದ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮದ ವಾಸಿಯಾದ **ಶ್ರೀ. ಅಬ್ದುಲ್ ಲತೀಫ್** ಬಿನ್. ಲೇಟ್, ಅಬ್ದುಲ್ ವಹಾಬ್ ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ,

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂದಿತರಾಗುವುದಿಲ್ಲ.

ಷೆಡ್ಯೂಲ್

ಐಟಂ–1: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮದ ಸರ್ವೆ ನಂಬರ್ 36/4, ರಲ್ಲಿನ ಇಪ್ಪತ್ತೊಂದು ಗುಂಟೆ (0.21.00.00) ಖುಷ್ಕಿ ಜಮೀನು ಸದರಿ ಜಮೀನಿಗೆ ಚಕ್ಕು ಬಂದಿ: ಪೂರ್ವಕ್ಕೆ : ಹಕ್ ಪಾಷ ರವರ ಉಳಿಕೆ ಜಮೀನು, ಪಶ್ಚಿಮಕ್ಕೆ : ಅಬ್ದುಲ್ ಲತೀಫ್ ರವರ ಜಮೀನು, ಉತ್ತರಕ್ಕೆ : ಅಬ್ದುಲ್ ಲತೀಫ್ ರವರ ಜಮೀನು, ದಕ್ಷಿಣಕ್ಕೆ : ಅಬ್ದುಲ್ ಶುಕೂರ್ ರವರ ಜಮೀನು

ಐಟಂ–2: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮದ ಸರ್ವೆ ನಂಬರ್ 37/4, ರಲ್ಲಿನ ಇಪ್ಪತ್ತ–ಮೂರು ಗುಂಟೆ (0.23.00.00) ಖುಷ್ಕಿ ಜಮೀನು ಸದರಿ ಜಮೀನಿಗೆ ಚಕ್ಕು ಬಂದಿ: ಪೂರ್ವಕ್ಕೆ : ನಿಂಗಶೆಟ್ಟಿರವರ ಜಮೀನು, ಪಶ್ಚಿಮಕ್ಕೆ : ಹಕ್ ಪಾಷ ರವರ ಜಮೀನು, ಉತ್ತರಕ್ಕೆ : ಅಬ್ದುಲ್ ಶುಕೂರ್ ರವರ ಜಮೀನು, ದಕ್ಷಿಣಕ್ಕೆ : ಹಕ್ ಪಾಷ ರವರ ಉಳಿಕೆ ಜಮೀನು.

ಸಹಿ/– ಎಂ.ಎನ್.ಪ್ರಕಾಶ್ ಕಾಳಪ್ಪ, ವಕೀಲರು

Reg. No. KAR 1996-2000, #2-3, First Floor, PRI Complex, 67/7A,
New Sayyajirao Road, Fort Mohalla, Mysore-570004
Cell: 93431 12535 E-mail: mnprakashkalappa@gmail.com

ಸ್ಥಳ: ಮೈಸೂರು, ದಿನಾಂಕ: 18/09/2025

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಅದರ ಮಾಲೀಕರಾದ, **ಶಫಿ ಉಲ್ಲಾ** ಬಿನ್. ಲೇಟ್. ಆರ್. ಅಬ್ದುಲ್ ಅಜೀಜ್, ಅನ್ದುಲ್ ಖಲೀಲ್ ಬಿನ್ ಲೇಟ್. ಅಬ್ದುಲ್ ಅಜೀಜ್ ಐಟಂ–1 ಸ್ವತ್ತಿನ ಮಾಲೀಕರು ಮತ್ತು ಫಯಾಜ್ ರೆಹಮಾನ್ ಬಿನ್. ಲೇಟ್, ಆರ್. ಅಬ್ದುಲ್ ಅಜೀಜ್ ರವರು ಐಟಂ–2 ಸ್ವತ್ತಿನ ಮಾಲೀಕರು ಹಾಗೂ ಇವರುಗಳು ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ,

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂದಿತರಾಗುವುದಿಲ್ಲ.

ಷೆಡ್ಯೂಲ್

ಐಟಂ–1: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮದ ಸರ್ವೆ ನಂಬರ್ 36/3, ರಲ್ಲಿನ ಇಪ್ಪತ್ತೊಂದು ಗುಂಟೆ (0.21.00.00) ಖುಷ್ಕಿ ಜಮೀನು ಸದರಿ ಜಮೀನಿಗೆ ಚಕ್ಕು ಬಂದಿ: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಅಬ್ದುಲ್ ಲತೀಫ್ ರವರ ಜಮೀನು, ಉತ್ತರಕ್ಕೆ : ಶಫಿ ಉಲ್ಲಾ ರವರ ಜಮೀನು, ದಕ್ಷಿಣಕ್ಕೆ : ಹಕ್ ಪಾಷಾ ರವರ ಜಮೀನು.

ಐಟಂ–2: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮದ ಸರ್ವೆ ನಂಬರ್ 37/3, ರಲ್ಲಿನ ಮೂವತ್ತು ಗುಂಟೆ (0.30.00.00) ಖುಷ್ಕಿ ಜಮೀನು ಸದರಿ ಜಮೀನಿಗೆ ಚಕ್ಕು ಬಂದಿ: ಪೂರ್ವಕ್ಕೆ : ಜವನಪ್ಪ ರವರ ಜಮೀನು, ಪಶ್ಚಿಮಕ್ಕೆ : ಅಬ್ದುಲ್ ಲತೀಫ್ ರವರ ಉಳಿಕೆ ಜಮೀನು, ಉತ್ತರಕ್ಕೆ : ಶಫಿ ಉಲ್ಲಾ ರವರ ಜಮೀನು, ದಕ್ಷಿಣಕ್ಕೆ : ಹಕ್ ಪಾಷಾ ರವರ ಜಮೀನು.

ಸಹಿ/– ಎಂ.ಎನ್.ಪ್ರಕಾಶ್ ಕಾಳಪ್ಪ, ವಕೀಲರು

Reg. No. KAR 1996-2000, #2-3, First Floor, PRI Complex, 67/7A,
New Sayyajirao Road, Fort Mohalla, Mysore-570004
Cell: 93431 12535 E-mail: mnprakashkalappa@gmail.com

ಸ್ಥಳ: ಮೈಸೂರು, ದಿನಾಂಕ:: 18/09/2025

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಅದರ ಮಾಲೀಕರಾದ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡ ಕಾನ್ಯ ಗ್ರಾಮ, ಚೌಡಿ ಬೀದಿ, ರ ವಾಸಿಯಾದ **ಶ್ರೀಮತಿ. ಮೆಹಬೂಬ್ ಜಾನ್** ಕೋಂ. ಲೇಟ್, ಅಜೀಮ್ ಸಾಬ್ ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ,

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) **ದಿನಗಳ** ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂದಿತರಾಗುವುದಿಲ್ಲ.

ಷೆಡ್ಯೂಲ್

ಐಟಂ–1: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮದ ಸರ್ವೆ ನಂಬರ್ 36/1, ರಲ್ಲಿನ ಇಪ್ಪತ್ತೊಂದು ಗುಂಟೆ (0.21.00.00) ಖುಷ್ಕಿ ಜಮೀನು ಸದರಿ ಜಮೀನಿಗೆ ಚಕ್ಕು ಬಂದಿ: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ನಿಂಗಶೆಟ್ಟಿರವರ ಜಮೀನು, ಉತ್ತರಕ್ಕೆ : ಶಫಿ ಉಲ್ಲ ರವರ ಜಮೀನು, ದಕ್ಷಿಣಕ್ಕೆ : ಜವರೇಗೌಡ ರವರ ಜಮೀನು

ಐಟಂ–2: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮದ ಸರ್ವೆ ನಂಬರ್ 37/1, ರಲ್ಲಿನ ಮೂವತ್ತು ಗುಂಟೆ (0.30.00.00) ಖುಷ್ಕಿ ಜಮೀನು ಸದರಿ ಜಮೀನಿಗೆ ಚಕ್ಕು ಬಂದಿ: ಪೂರ್ವಕ್ಕೆ : ಮೆಹಬೂಬ್ ಜಾನ್ ರವರ ಉಳಿಕೆ ಜಮೀನು, ಪಶ್ಚಿಮಕ್ಕೆ : ಹುಚ್ಚಪ್ಪ ರವರ ಜಮೀನು, ಉತ್ತರಕ್ಕೆ : ಶಫಿ ಉಲ್ಲ ರವರ ಜಮೀನು, ದಕ್ಷಿಣಕ್ಕೆ : ನಿಂಗಶೆಟ್ಟಿ ರವರ ಜಮೀನು.

ಸಹಿ/– ಎಂ.ಎನ್.ಪ್ರಕಾಶ್ ಕಾಳಪ್ಪ, ವಕೀಲರು

Reg. No. KAR 1996-2000, #2-3, First Floor, PRI Complex,
67/7A, New Sayyajirao Road, Fort Mohalla, Mysore 570004
Cell: 93431 12535 E-mail: mnprakashkalappa@gmail.com

ಸ್ಥಳ: ಮೈಸೂರು, ದಿನಾಂಕ:: 18/09/2025

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷೀದಾರರು ಅದರ ಮಾಲೀಕರಾದ, **ಅಬ್ದುಲ್ ಶುಕೂರ್ ಬಿನ್. ರಹೀಮ್ ಸಾಬ್** ರವರು ಐಟಂ–2 ಸ್ವತ್ತಿನ ಮಾಲೀಕರು, ಅಬ್ದುಲ್ ಶುಕೂರ್ ಬಿನ್' ರಹೀಮ್ ಸಾಬ್, ಮೆಹಬೂಬ್ ಜಾನ್ ಕೋಂ. ಲೇಟ್. ಅಜೀಮ್ ಸಾಬ್, ಅಬ್ದುಲ್ ಲತೀಫ್ ಬಿನ್. ಅಬ್ದುಲ್ ವಹಾಬ್, ಆಸೀನಾ ಬಾನು ಬಿನ್. ಲೇಟ್, ರಜಾಕ್, ಜಮ್ರುದ್ ಪಾಷ ಬಿನ್, ಲೇಟ್, ರಜಾಕ್, ಜಬೀನ್ ತಾಜ್ ಬಿನ್. ಲೇಟ್. ರಜಾಕ್, ಮಹಮ್ಮದ್ ಜಫ್ರುಲ್ಲಾ ಬಿನ್. ಲೇಟ್. ರಜಾಕ್, ಫರ್ಜಾನ ಬಾನು ಕೋಂ. ಲೇಟ್. ಮಹಮ್ಮದ್ ರಫೀಕ್ ಉಲ್ಲಾ, ಮಹಮ್ಮದ್ ಸಾಹಿಲ್ ಮತ್ತು ಸಾದಿಯಾ ಅಂಜುಂ ಬಿನ್ ಲೇಟ್. ಮಹಮ್ಮದ್ ರಫೀಕ್ ಉಲ್ಲಾ ಇವರ ಪರವಾಗಿ ಜನಕ ತಾಯಿ ಫರ್ಜಾನ ಬಾನು ಮತ್ತು ಕುಲ್ ಸುಂಬಿ ಬಿನ್. ಲೇಟ್. ಆರ್. ಅಬ್ದುಲ್ ಅಜೀಜ್, ಫೈಜುನ್ನಿಸ ಬಿನ್. ಲೇಟ್, ಆರ್. ಅಬ್ದುಲ್ ಅಜೀಜ್, ಶಫಿ ಉಲ್ಲಾ ಬಿನ್. ಲೇಟ್. ಆರ್. ಅಬ್ದುಲ್ ಅಜೀಜ್, ಮೆಹರುನ್ನಿಸಾ ಬಿನ್. ಲೇಟ್. ಆರ್. ಅಬ್ದುಲ್ ಅಜೀಜ್, ಸಾಹೇರ ಬಾನು ಬಿನ್. ಲೇಟ್. ಆರ್. ಅಬ್ದುಲ್ ಅಜೀಜ್, ಅಬ್ದುಲ್ ಖಲೀಲ್ ಬಿನ್. ಲೇಟ್. ಆರ್. ಅಬ್ದುಲ್ ಅಜೀಜ್, ಫಯಾಜ್ ರೆಹಮಾನ್ ಬಿನ್. ಲೇಟ್. ಆರ್. ಅಬ್ದುಲ್ ಅಜೀಜ್, ದಿಲ್ ಷಾದ್ ಬೇಗಂ ಬಿನ್. ಲೇಟ್. ಆರ್. ಅಬ್ದುಲ್ ಅಜೀಜ್, ಹಕ್ ಪಾಷ ಬಿನ್. ರಜಾಕ್, ಇವರು ಜಂಟಿಯಾಗಿ ಐಟಂ–1 ಸ್ವತ್ತಿನ ಮಾಲೀಕರು, ಇವರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ,

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) **ದಿನಗಳ** ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷೀದಾರರು ನಿರ್ಬಂದಿತರಾಗುವುದಿಲ್ಲ.

ಷೆಡ್ಯೂಲ್

ಐಟಂ–1: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮದ ಸರ್ವೆ ನಂಬರ್ 32/1, ರಲ್ಲಿನ ಒಂದು ಎಕರೆ ಹನ್ನೊಂದು ಗುಂಟೆ (1.11.00.00) ಖುಷ್ಕಿ ಜಮೀನು ಸದರಿ ಜಮೀನಿಗೆ ಚಕ್ಕು ಬಂದಿ: ಪೂರ್ವಕ್ಕೆ : ಸರ್ವೆ ನಂಬರ್ 32/2, ಪಶ್ಚಿಮಕ್ಕೆ : ಚಿಕ್ಕಕಾನ್ಯ ಗ್ರಾಮ ಗಡಿ, ಉತ್ತರಕ್ಕೆ : ಸರ್ವೆ ನಂಬರ್ 37, ದಕ್ಷಿಣಕ್ಕೆ : ಸರ್ವೆ ನಂಬರ್ 31

ಐಟಂ–2: :ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ದೊಡ್ಡಕಾನ್ಯ ಗ್ರಾಮದ ಸರ್ವೆ ನಂಬರ್ 33/2 ರಲ್ಲಿನ ಇಪ್ಪತ್ತೊಂಬತ್ತು ಗುಂಟೆ (0.29.00.00) ಖುಷ್ಕಿ ಜಮೀನು ಸದರಿ ಜಮೀನಿಗೆ ಚಕ್ಕು ಬಂದಿ: ಪೂರ್ವಕ್ಕೆ : ಹಕ್ ಪಾಷ ರವರ ಜಮೀನು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಶಫಿ ಉಲ್ಲಾ ರವರ ಜಮೀನು, ದಕ್ಷಿಣಕ್ಕೆ : ಶಿವಮೂರ್ತಿ ರವರ ಜಮೀನು.

ಸಹಿ/– ಎಂ.ಎನ್.ಪ್ರಕಾಶ್ ಕಾಳಪ್ಪ, ವಕೀಲರು

Reg. No. KAR 1996-2000, #2-3, First Floor, PRI Complex,
67/7A, New Sayyajirao Road, Fort Mohalla, Mysore-570004
Cell: 93431 12535 E-mail: mnprakashkalappa@gmail.com

ಸ್ಥಳ: ಮೈಸೂರು, ದಿನಾಂಕ: 22/09/2025

ಮಡಿಕೇರಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ



ಮಡಿಕೇರಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಗಾಂಧಿ ಮೈದಾನದ ಕಲಾ ಸಂಭ್ರಮ ವೇದಿಕೆಯಲ್ಲಿ ಮಡಿಕೇರಿ ಕ್ಷೇತ್ರ ಶಾಸಕ ಡಾ.ಮಂತರ್ ಗೌಡ ದೀಪ ಬೆಳಗುವ ಮೂಲಕ ಚಾಲನೆ ನೀಡಿದರು. ಜಿಲ್ಲಾಧಿಕಾರಿ ವೆಂಕಟ್ ರಾಜಾ, ದಸರಾ ಸಮಿತಿ ಅಧ್ಯಕ್ಷೆ ಪಿ.ಕಲಾವತಿ, ದಸರಾ ಸಮಿತಿ ಕಾರ್ಯಾಧ್ಯಕ್ಷ ಬಿ.ಕೆ.ಅರುಣ್ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕ ಕುಮಾರ್, ಮಾಜಿ ಶಾಸಕ ಅಪ್ಪಚ್ಚು ರಂಜನ್, ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಕುಡೇಕಲ್ ಸಂತೋಷ್ ಹಾಗೂ ದಸರಾ ಸಮಿತಿಯ ಪ್ರಮುಖರು ಹಾಜರಿದ್ದರು.

ಮಡಿಕೇರಿಯಲ್ಲಿ ಹಿಂದೂ ಹಿತರಕ್ಷಣಾ ಸಮಿತಿ ಪ್ರತಿಭಟನೆ

ಮಡಿಕೇರಿ, ಸೆ.23– ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಲು ಹೊರಟಿರುವ ರಾಜ್ಯ ಸರಕಾರ ಕ್ರೈಸ್ತರನ್ನು ಹಿಂದೂ ಜಾತಿಗಳ ನಡುವೆ ಎಳೆದು ತರುತ್ತಿದೆ. ಈ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಕೈಬಿಡಬೇಕೆಂದು ಆಗ್ರಹಿಸಿ ಹಿಂದೂ ಹಿತ ರಕ್ಷಣಾ ಸಮಿತಿ ನಗರದಲ್ಲಿ ಪ್ರತಿಭಟನೆ ನಡೆಸಿತು.

ಜಿಲ್ಲಾಡಳಿತ ಭವನದ ಮುಂಭಾಗ ಪ್ರತಿಭಟನೆ ನಡೆಸಿದ ಹಿಂದೂ ಹಿತ ರಕ್ಷಣಾ ಸಮಿತಿ ಪ್ರಮುಖರು ಮತ್ತು ವಿವಿಧ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ರಾಜ್ಯ ಕಾಂಗ್ರೆಸ್ ಸರಕಾರದ ನಡೆಯನ್ನು ತೀವ್ರವಾಗಿ ಖಂಡಿಸಿದರು. ಸರಕಾರ ಜಾತಿ ಸಮೀಕ್ಷೆ ಹೆಸರಲ್ಲಿ ಹೊಸ ಕ್ರೈಸ್ತ ಜಾತಿಗಳನ್ನು ಸೃಷ್ಟಿಸಿ ಗೊಂದಲ ನಿರ್ಮಿಸುತ್ತಿದೆ. ರಾಜ್ಯದಲ್ಲಿ ಜಾರಿಯಲ್ಲಿರುವ ಮತಾಂತರ ನಿಷೇಧ ಕಾಯಿದೆಯನ್ನು ಸರಕಾರವೇ ದುರ್ಬಲಗೊಳಿಸುತ್ತಿದೆ. ದಲಿತರು, ಹಿಂದುಳಿದ ವರ್ಗಗಳ ಜಾತಿಗಳನ್ನು ಒಡೆಯುವುದೇ ಅಹಿಂದ ರಾಜಕಾರಣ ನೀತಿಯಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಸಮೀಕ್ಷೆ ಹೆಸರಲ್ಲಿ 48 ಹೊಸ ಜಾತಿಗಳನ್ನು ಸೃಷ್ಟಿಸಿರುವ ಸರಕಾರ ಕ್ಯಾಥೋಲಿಕ್, ಪ್ರೊಟೆಸ್ಟೆಂಟ್, ಸ್ನಲೈಟ್, ಬ್ಯಾಪ್ಟಿಸ್ಟ್ ಇತ್ಯಾದಿ ಕ್ರೈಸ್ತ ಮೂಲ ಜಾತಿಗಳನ್ನು ಕೈಬಿಟ್ಟಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ವಿವಿಧ ಹಿಂದೂ ಸಮುದಾಯಗಳ ಜೊತೆಯಲ್ಲಿ ಕ್ರೈಸ್ತರ ಹೆಸರು ಸೇರಿಸಿರುವುದಕ್ಕೆ ಕ್ರೈಸ್ತ ಮತದ ಪೋಪ್ ಹಾಗೂ ಇತರ ಧರ್ಮಗುರುಗಳು ತಮ್ಮ ಅಭಿಪ್ರಾಯ ತಿಳಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಬಳಿಕ ಪ್ರತಿಭಟನೆಯ ಮನವಿಯನ್ನು ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರಕಾರಕ್ಕೆ ಸಲ್ಲಿಸಲಾಯಿತು.



ಜಿಲ್ಲಾಡಳಿತ ಭವನದ ಮುಂದೆ ಪ್ರತಿಭಟನೆ ನಡೆಸುತ್ತಿರುವುದು.

ಕೌಟುಂಬಿಕ ಕಲಹ: ಪತ್ನಿಗೆ ಗುಂಡು ಹಾರಿಸಿದ ಯೋಧ

ಕೆನ್ನೆಗೆ ಗಾಯವಾಗಿ ಮೈಸೂರು ಆಸ್ಪತ್ರೆಗೆ ದಾಖಲು

ಮಡಿಕೇರಿ, ಸೆ.23– ಕೌಟುಂಬಿಕ ಕಲಹದಿಂದ ಯೋಧ ತನ್ನ ಪತ್ನಿಯ ಮೇಲೆ ಗುಂಡು ಹಾರಿಸಿ ಕೊಲೆಗೆ ಯತ್ನಿಸಿದ ಘಟನೆ ಪೊನ್ನಂಪೇಟೆ ತಾಲೂಕಿನ ಹುದಿಕೇರಿ ಸಮೀಪದ ಕೋಣಗೇರಿಯಲ್ಲಿ ಸಂಭವಿಸಿದೆ.



ಗ್ರಾಮದ ವಾಸಿ ಬಿ.ದೇಚಮ್ಮ(32) ಎಂಬುವವರೇ ಗುಂಡೇಟಿನಿಂದ ಗಾಯಗೊಂಡವರಾಗಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಸೇನೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿನು ಕಾರ್ಯಪ್ಪ ಎಂಬುವರು ತಮ್ಮ ಮನೆಯ ಸಮೀಪದಲ್ಲಿ ತಮ್ಮ ಪತ್ನಿ ಬಿ. ದೇಚಮ್ಮ ಎಂಬುವರಿಗೆ ಗುಂಡು ಹೊಡೆದಿದ್ದಾರೆ. ದೇಚಮ್ಮ ಅವರ ಕೆನ್ನೆಯ ಭಾಗಕ್ಕೆ ಗುಂಡು ತಗುಲಿದ್ದು, ಗೋಣಿಕೊಪ್ಪ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಗುಂಡು ಹಾರಿಸಿದ ಯೋಧ ಪರಾರಿಯಾಗಿದ್ದಾನೆ. ಘಟನೆ ಕುರಿತು ಶ್ರೀ ಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಸೋಮಣ್ಣ ನಿಧನ



ನಾಪೋಕ್ಲು: ಇಲ್ಲಿಗೆ ಸಮೀಪದ ಬೇತು ಗ್ರಾಮದ ನಿವಾಸಿ, ನಾಪೋಕ್ಲು ಗ್ರಾಪಂ ಮಾಜಿ ಸದಸ್ಯ, ಇಲ್ಲಿಯ ಶ್ರೀರಾಮ ಟ್ರಸ್ಟ್ ಆಂಗ್ಲ ಮಾಧ್ಯಮ ಶಾಲೆಯ ನಿರ್ದೇಶಕರಾದ ಮಂಡೀರ ಸೋಮಣ್ಣ (ತಮ್ಮಿ) ಮಂಗಳವಾರ ನಿಧನರಾದರು. ಅವರಿಗೆ 87 ವರ್ಷ ವಯಸ್ಸಾಗಿತ್ತು.

ಮೃತರ ಅಂತ್ಯಕ್ರಿಯೆ ಮಂಗಳವಾರ ಮೃತರ ಸ್ವಗ್ರಾಮದಲ್ಲಿ ನೆರವೇರಿಸಲಾಯಿತು. ಶ್ರೀಯುತರು ಪತ್ನಿ, ಓರ್ವ ಪುತ್ರ ಮತ್ತು ಪುತ್ರಿ ಸೇರಿದಂತೆ ಅಪಾರ ಬಂಧು ಭಾಂದವರನ್ನು ಅಗಲಿದ್ದಾರೆ. ಶ್ರೀಯುತರ ಗೌರವಾರ್ಥ ಇಲ್ಲಿಯ ಪಟ್ಟಣದ ವರ್ತಕರು ಒಂದು ಗಂಟೆ ಕಾಲ ತಮ್ಮ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಶ್ರದ್ಧಾಂಜಲಿ ಅರ್ಪಿಸಿದರು.

ಹುದಿಕೇರಿಯಲ್ಲಿ ಆರೋಗ್ಯ ಕೇಂದ್ರ: ಸಚಿವ ದಿನೇಶ್ ಗುಂಡೂರಾವ್ ಸ್ಥಳ ಪರಿಶೀಲನೆ

ಮಡಿಕೇರಿ, ಸೆ.23– ಪೊನ್ನಂಪೇಟೆ ತಾಲೂಕಿನ ಹುದಿಕೇರಿ ಗ್ರಾಮದಲ್ಲಿ ನೂತನವಾಗಿ ಸಮುದಾಯ ಆರೋಗ್ಯ ಕೇಂದ್ರ ನಿರ್ಮಿಸಲು ಗುರುತಿಸಿರುವ ಸ್ಥಳಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಅವರುಗಳು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.

ಇದೇ ವೇಳೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆರಳಿದ ಸಚಿವರು ಅಲ್ಲಿ ದಾಖಲಾಗಿರುವರ ಆರೋಗ್ಯ ವಿಚಾರಿಸಿದರು. ಆಸ್ಪತ್ರೆಯಲ್ಲಿರುವ ವೈದ್ಯರು, ಸೌಲಭ್ಯಗಳು ಮತ್ತು ಕುಂದು ಕೊರತೆಗಳ ಬಗ್ಗೆಯೂ ಶಾಸಕ ಎ.ಎಸ್.ಪೊನ್ನಣ್ಣ ಮತ್ತು ಕೇಂದ್ರದ ವೈದ್ಯರು ಹಾಗೂ ಸಿಬ್ಬಂದಿಗಳಿಂದ ಸಚಿವರು ಮಾಹಿತಿ ಪಡೆದರು. ಆರೋಗ್ಯ ಇಲಾಖೆಯ ಅಧಿಕಾರಿಗಳು ಹಾಗೂ ಗ್ರಾಮಸ್ಥರ ಜೊತೆ ಚರ್ಚಿಸಿ ಸಚಿವರಿಗೆ ಅಗತ್ಯ ಮಾಹಿತಿಗಳನ್ನು ಒದಗಿಸಿ, ಆಸ್ಪತ್ರೆಯ ಶೀಘ್ರ ಕಾಮಗಾರಿಗೆ ಅನುವು ಮಾಡಿಕೊಡುವಂತೆ ಶಾಸಕ ಎ.ಎಸ್.ಪೊನ್ನಣ್ಣ ಇದೇ ಸಂದರ್ಭ ಮನವಿ ಮಾಡಿದರು.



ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸ್ಥಳ ಪರಿಶೀಲನೆ ನಡೆಸುತ್ತಿರುವುದು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ದಿನೇಶ್ ಗುಂಡೂರಾವ್, ವೀರಾಜಪೇಟೆ ಕ್ಷೇತ್ರಕ್ಕೆ ದೊಡ್ಡ ಮಟ್ಟದಲ್ಲಿ ಆರೋಗ್ಯ ಕೇಂದ್ರ ಸ್ಥಾಪಿಸಬೇಕೆಂಬ ಶಾಸಕರ ಒತ್ತಾಯದ ಮೇರೆಗೆ ಅನುಮೋದನೆ ನೀಡುವ ಮೊದಲು ಸ್ಥಳ ವೀಕ್ಷಣೆ ಮಾಡಲಾಗಿದೆ. ಬಜೆಟ್ ಮಂಡನೆಯ ಸಂದರ್ಭ ವೀರಾಜಪೇಟೆ ಕ್ಷೇತ್ರಕ್ಕೆ 400 ಹಾಸಿಗೆಯ ಆಸ್ಪತ್ರೆ ನಿರ್ಮಾಣಕ್ಕೆ ತೀರ್ಮಾನ ಮಾಡಲಾಗಿತ್ತು. ಪೊನ್ನಂಪೇಟೆ ತಾಲೂಕಿಗೆ ತಾಲೂಕು ಆಸ್ಪತ್ರೆಗೆ ಹಲವಾರು ಸೌಲಭ್ಯಗಳನ್ನು ಒದಗಿಸಲು ತೀರ್ಮಾನಿಸಲಾಗಿದ್ದು 250 ಹಾಸಿಗೆ ಹಾಗೂ ಸಿಬ್ಬಂದಿಗಳಿಗೆ ಕೊಠಡಿಗಳನ್ನೊಳಗೊಂಡಂತೆ ಸುಮಾರು 105 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಆರೋಗ್ಯ ಕೇಂದ್ರವನ್ನು ನಿರ್ಮಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

ವೀರಾಜಪೇಟೆ ಆಸ್ಪತ್ರೆಯನ್ನು ಎಲ್ಲಾ ಸೌಲಭ್ಯಗಳಿರುವ ಜಿಲ್ಲಾ ಆಸ್ಪತ್ರೆಯಾಗಿ ಪರಿವರ್ತನೆ ಮಾಡಲಾಗುತ್ತದೆ. ಮಡಿಕೇರಿಯಲ್ಲಿರುವ ಜಿಲ್ಲಾ ಆಸ್ಪತ್ರೆ ವೈದ್ಯಕೀಯ ಶಿಕ್ಷಣ ಇಲಾಖೆಯೊಂದಿಗೆ ಜೋಡಣೆಯಾಗಿದೆ. ಹಾಗಾಗಿ ಪರ್ಯಾಯವಾಗಿ ನಮ್ಮ ಸರ್ಕಾರ ಆಡಳಿತಕ್ಕೆ ಬಂದ ನಂತರ 3 ಜಿಲ್ಲೆಗಳಲ್ಲಿ ಜಿಲ್ಲಾ ಆಸ್ಪತ್ರೆಯನ್ನು ನಿರ್ಮಿಸಿದ್ದೇವೆ. ಜಿಲ್ಲಾ ಆಸ್ಪತ್ರೆಯಲ್ಲಿ ಎಲ್ಲಾ ಉತ್ತಮ ಸೌಲಭ್ಯಗಳು ಜನರಿಗೆ ದೊರಕುವಂತಾಗಬೇಕು. ಶಾಸಕರ ಕಾಳಜಿಯಿಂದ ಹಾಗೂ ಈ ಜಿಲ್ಲೆಯೊಂದಿಗೆ ವಿಶೇಷವಾದ ಬಾಂಧವ್ಯ ಹೊಂದಿರುವುದರಿಂದ ವೈಜ್ಞಾನಿಕವಾಗಿ ಉತ್ತಮ ರೀತಿಯಲ್ಲಿ ಸೌಲಭ್ಯ ಒದಗಿಸುವ ಉದ್ದೇಶ ಹೊಂದಿದ್ದೇವೆ. ಪೊನ್ನಂಪೇಟೆಯಲ್ಲಿ ಸ್ಥಳಾವಕಾಶ ಇಲ್ಲದಿರುವುದರಿಂದ ಹುದಿಕೇರಿಯಲ್ಲಿ 30 ಹಾಸಿಗೆಯನ್ನು ಒಳಗೊಂಡ ಸಮುದಾಯ ಆರೋಗ್ಯ ಕೇಂದ್ರ ಸ್ಥಾಪಿಸಿ ಉತ್ತಮ ಸೌಲಭ್ಯ ನೀಡಲಾಗುತ್ತದೆ. ಈ ಕಾರ್ಯಕ್ಕೆ ಅನುಮೋದನೆ ದೊರಕಿದೆ ಎಂದು ಅವರು ತಿಳಿಸಿದರು.

ಮದ್ದೂರು ನಗರಸಭೆಯಾಗಿ ಪರಿವರ್ತಿಸಿದ್ದಕ್ಕೆ ತೀವ್ರ ಚರ್ಚೆ

ಮದ್ದೂರು, ಸೆ.23–ಮದ್ದೂರು ಪುರಸಭೆಯನ್ನು ನಗರಸಭೆಯಾಗಿ ಮೇಲ್ದರ್ಜೆಗೇರಿಸಿರುವ ಸಂಬಂಧ ಸಾಮಾನ್ಯ ಸಭೆಯಲ್ಲಿ ತೀವ್ರ ಚರ್ಚೆಗೆ ಆಸ್ಪದಕ್ಕೆಡೆ ಮಾಡಿಕೊಟ್ಟಿತು.

ಇಲ್ಲಿನ ನಗರಸಭೆಯ ಎಸ್.ಎಂ.ಕೃಷ್ಣ ಸಭಾಂಗಣದಲ್ಲಿ ಮಂಗಳವಾರ ಕೋಕಿಲಾ ಅರುಣ್ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಆರಂಭದಲ್ಲೇ ಸದಸ್ಯ ಎಂ.ಐ. ಪ್ರವೀಣ್ ಮಾತನಾಡಿ ಪುರಸಭೆಯನ್ನು ನಗರಸಭೆಯಾಗಿ ಮಾಡಿದ್ದೀರಿ, ನಾಮಫಲಕ ಹಾಕುವುದಕ್ಕೂ ಮೊದಲು ಪೂರ್ವಭಾವಿ ಸಭೆಯನ್ನು ಕರೆದು ಸದಸ್ಯರ ಅನುಮತಿ ಏಕೆ ಪಡೆಯಲಿಲ್ಲ. ನಗರಸಭೆಗೆ ಸೇರ್ಪಡೆಯಾಗೋ ಗ್ರಾಪಂ ನವರು ನ್ಯಾಯಾಲಯಕ್ಕೆ ಹೋಗಲು ತೀರ್ಮಾನಿಸಿದ್ದಾರೆ. ಇದೆಲ್ಲಾ ಇರುವಾಗ ಏಕಾಏಕಿ ನಾಮಫಲಕ ಅನಾವರಣ ಮಾಡಿದ್ದೀರಿ ಎಂದು ಪ್ರಶ್ನಿಸಿದರು.

ಪಟ್ಟಣದಲ್ಲಿ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನೇ ಮುಚ್ಚಿಸುವುದಕ್ಕೆ ಆಗಿಲ್ಲ, ಕಚೇರಿಯಲ್ಲಿ ಹೊರಗುತ್ತಿಗೆಯಲ್ಲಿ ಕೆಲಸ ಮಾಡುತ್ತಿರುವವರಿಗೆ ತುಂಬಾ ತಿಂಗಳಿನಿಂದ ಸಂಬಳವನ್ನೇ ನೀಡಿಲ್ಲ. ಪರಿಸ್ಥಿತಿ ಹೀಗಿರುವಾಗ ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸುವ ಔಚಿತ್ಯವಾದರೂ ಏನಿತ್ತು? ಎಂದು ಪ್ರಶ್ನಿಸಿದರು.



ಮದ್ದೂರು ನಗರಸಭೆಯ ಮಾಸಿಕ ಸಭೆ ಮಂಗಳವಾರ ನಡೆಯಿತು

ಅಷ್ಟರಲ್ಲಿ ಸಭೆಗೆ ಆಗಮಿಸಿದ ಶಾಸಕ ಕೆ.ಎಂ. ಉದಯ್ ಪಟ್ಟಣವಾಗಿರುವ ಮದ್ದೂರನ್ನು ನಗರವನ್ನಾಗಿಸುವ ಉದ್ದೇಶದಿಂದ ಪುರಸಭೆಯನ್ನು ನಗರಸಭೆಯನ್ನಾಗಿಸಿದ್ದೇವೆ ಮುಂದಿನ ದಿನಗಳಲ್ಲಿ ನಗರವನ್ನು ನೂರಾರು ಕೋಟಿ ರೂ ವೆಚ್ಚದಲ್ಲಿ ಸಮಗ್ರವಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದು ಶಾಸಕ ಕೆ.ಎಂ. ಉದಯ್ ಭರವಸೆ ವ್ಯಕ್ತಪಡಿಸಿದರು.

ಕೊಪ್ಪ ವೃತ್ತ, ಕೊಲ್ಲಿ ಸರ್ಕಲ್, ಐ.ಬಿ. ಸರ್ಕಲ್‌ಗಳಲ್ಲಿ ಹೈಮಾಸ್ಟ್ ವಿದ್ಯುತ್ ದೀಪವು ಕೆಟ್ಟುಹೋಗಿ ವರ್ಷವೇ ಕಳೆದಿದ್ದರೂ ದುರಸ್ತಿಯಾಗಿಲ್ಲ. ಕೂಡಲೇ ಕ್ರಮ ವಹಿಸಬೇಕು ಎಂದು ಸದಸ್ಯೆ ಸರ್ವಮಂಗಳ ಆಗ್ರಹಿಸಿದರೆ, ನಗರಸಭೆಯ ಶವ ಸಾಗಿಸುವ ವಾಹನಕ್ಕೆ ಡೀಸೆಲ್‌ಗೆ 500 ರೂ ಪಡೆಯುತಿದ್ದಾರೆ. ಯಾವುದೇ ಡೀಸೆಲ್ ಶುಲ್ಕವನ್ನೂ ಪಡೆಯದೇ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕು ಎಂದು ಸದಸ್ಯ ಎಂ.ಬಿ. ಸಚಿನ್ ಆಗ್ರಹಿಸಲಾಗಿ ಅದಕ್ಕೆ ಎಲ್ಲಾ ಸದಸ್ಯರೂ ಸಮ್ಮತಿ ಸೂಚಿಸಿದರು. ಪ್ರಭಾರ ತಹಸೀಲ್ದಾರ್ ಪರಶುರಾಮ ಸತ್ತಿಗೇರಿ, ಉಪಾಧ್ಯಕ್ಷೆ ಟಿ.ಆರ್.ಪ್ರಸನ್ನ ಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷೆ ವನಿತಾ, ವ್ಯವಸ್ಥಾಪಕ ಶ್ರೀಧರ್ ಸೇರಿದಂತೆ ಸದಸ್ಯರು, ಅಧಿಕಾರಿಗಳು ಹಾಜರಿದ್ದರು.

ನಾಳೆ ಶ್ರೀರಂಗಪಟ್ಟಣ ಜಂಬೂಸವಾರಿ

ಶ್ರೀರಂಗಪಟ್ಟಣ, ಸೆ.23– ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಶ್ರೀರಂಗನಾಥಸ್ವಾಮಿ ದೇವಾಲಯದ ಆವರಣದಲ್ಲಿನ ಶ್ರೀರಂಗ ವೇದಿಕೆಯಲ್ಲಿ ಆಯೋಜಿಸಲಾಗಿದೆ ಎಂದು ಶ್ರೀ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಅಧ್ಯಕ್ಷರಾದ ಶಾಸಕ ರಮೇಶ ಬಂಡಿಸಿದ್ದೇಗೌಡ ತಿಳಿಸಿದರು.

ಸೆ.25 ರಂದು ಮಧ್ಯಾಹ್ನ 2.30 ಗಂಟೆಗೆ ಕಿರಂಗೂರು ಬನ್ನಿಮಂಟಪದಲ್ಲಿ ಜಂಬೂ ಸವಾರಿ ಮೆರವಣಿಗೆಗೆ ನಟ, ನಿರ್ದೇಶಕ ಡಾ.ಟಿ.ಎಸ್.ನಾಗಭರಣ ಚಾಲನೆ ನೀಡಲಿದ್ದಾರೆ. ಸಂಜೆ 6 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯ ಸ್ವಾಮಿ ಉದ್ಘಾಟಿಸಲಿದ್ದಾರೆ ಸುಮಾರು 7 ರಿಂದ 8 ಸಾವಿರ ಪ್ರೇಕ್ಷಕರು ಬರುವ ನಿರೀಕ್ಷೆಯಿದ್ದು, 10 ಸಾವಿರ ಪ್ರೇಕ್ಷಕರಿಗಾಗಿ ವೇದಿಕೆ ಸಿದ್ಧಮಾಡಲಾಗುತ್ತಿದೆ ರೈತ ದಸರಾ, ಸಾಹಿತ್ಯ ಮತ್ತು ಸಾಂಸ್ಕೃತಿಕ ದಸರಾ, ಯೋಗ ದಸರಾ, ದಸರಾ ವಸ್ತು ಪ್ರದರ್ಶನ, ಮಕ್ಕಳ ದಸರಾ, ಮಹಿಳಾ ದಸರಾ, ಯುವ ದಸರಾ, ಕ್ರೀಡಾ ದಸರಾ, ದಸರಾ ಸಿನಿಮೋತ್ಸವ, ಮ್ಯಾರಥಾನ್, ಚಾರಣ ವಿಶೇಷ ಆಕರ್ಷಣೆಯ ಕಾರ್ಯಕ್ರಮಗಳನ್ನೂ ಈ ಬಾರಿಯ ದಸರಾದಲ್ಲಿ ಆಯೋಜಿಸಲಾಗಿದೆ ಎಂದರು.

ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಪಾಲ್ಗೊಳ್ಳಲು ಅನುಕೂಲವಾಗುವಂತೆ ಬಸ್ಸಿನ ವ್ಯವಸ್ಥೆಯನ್ನು ಮಾಡಿದ್ದು, ಸುತ್ತಮುತ್ತಲಿನ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀರಂಗಪಟ್ಟಣ ದಸರಾ ಮತ್ತು ಕಾವೇರಿ ಆರತಿ ಸಮಾರಂಭವನ್ನು ಯಶಸ್ವಿಗೊಳಿಸಿ ಎಂದು ಅವರು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ಎಡಿಸಿ ಬಿ.ಸಿ ಶಿವಾನಂದ ಮೂರ್ತಿ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



ಶಾಸಕ ರಮೇಶಬಾಬು ದಸರಾ ಸಿದ್ಧತೆಗಳನ್ನು ಪರಿಶೀಲಿಸಿದರು.

ಸ್ವಚ್ಛತೆಗೆ ಆದ್ಯತೆ ನೀಡಿ: ಸಚಿವ ಎನ್.ಚಲುವರಾಯಸ್ವಾಮಿ

ಮಂಡ್ಯ, ಸೆ.23–ಗ್ರಾಮ, ಜಿಲ್ಲೆ ಮತ್ತು ರಾಜ್ಯವನ್ನು ಸ್ವಚ್ಛವಾಗಿರಿಸುವುದು ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಿದ್ದು, ಪ್ರತಿಯೊಬ್ಬರೂ ಸ್ವಚ್ಛತೆಗೆ ಆದ್ಯತೆ ನೀಡಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ.

ನಗರದ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಸ್ವಚ್ಛೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈಗಾಗಲೇ ಜಿಲ್ಲೆಯಲ್ಲಿ ಕೈಗೊಂಡಿರುವ ಸ್ವಚ್ಛತೆಯ ಸೇವೆಯಲ್ಲಿ ಪಾಲ್ಗೊಂಡು ಜಿಲ್ಲೆಯ ಸ್ವಚ್ಛತೆಗೆ ಪಾತ್ರವಾಗಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ರಾಮ, ರಾಜ್ಯ, ದೇಶ ಸ್ವಚ್ಛವಾಗಿರಬೇಕೆಂದರೆ ಸಾರ್ವಜನಿಕರ ಪಾತ್ರ ಬಹಳ ಮುಖ್ಯ. ಕೇವಲ ಸರ್ಕಾರದಿಂದ ರಾಜ್ಯವನ್ನು ಸ್ವಚ್ಛವಾಗಿರಿಸಲು ಸಾಧ್ಯವಿಲ್ಲ, ಸಾರ್ವಜನಿಕರು ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿರಿಸುವುದರಿಂದ ಸ್ವಚ್ಛತೆ ಸಾಧ್ಯವಾಗುತ್ತದೆ. ಹಾಗಾಗಿ ಪ್ರತಿಯೊಬ್ಬರೂ ಸುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿರಿಸಿಕೊಳ್ಳಿ ಎಂದು ತಿಳಿಸಿದರು.



ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಸ್ವಚ್ಛೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು

ಜಾತಿ ಗಣತಿಗಾಗಿ ಸಮೀಕ್ಷೆ ನಡೆಯುತ್ತಿಲ್ಲ ಜನರ ಸಮಸ್ಯೆ ಪರಿಹರಿಸಲು ಸಮೀಕ್ಷೆಯನ್ನು ನಡೆಸಲಾಗುತ್ತಿದೆ. ಸಮೀಕ್ಷೆ ನಡೆಸಲು ಶಾಲಾ ಶಿಕ್ಷಕರ ಅವಶ್ಯಕತೆಯಿರುವುದರಿಂದ ರಜಾ ಸಮಯದಲ್ಲಿ ಸಮೀಕ್ಷೆಯ ಕಾರ್ಯವನ್ನು ಕೈಗೊಳ್ಳಲಾಗಿದೆ. ಯಾವುದೇ ದುರುದ್ದೇಶವಿಲ್ಲ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಜಿ.ಪಂ ನಿಂದ ಸೆ. 17 ರಿಂದ ಅ. 2 ರವರೆಗೆ ಹಮ್ಮಿಕೊಳ್ಳಲಾಗಿರುವ ಸ್ವಚ್ಛತಾ ಹೀ ಸೇವಾ ಹಾಗೂ ಅ.1 ರಿಂದ 30 ರವರೆಗೆ ಹಮ್ಮಿಕೊಳ್ಳಲಾಗಿರುವ ಮಾದಕ ಮುಕ್ತ ಕರ್ನಾಟಕ ಅಭಿಯಾನ ಪರಿವರ್ತನೆ ಕುರಿತು ಪೋಸ್ಟರ್‌ಗಳನ್ನು ಬಿಡುಗಡೆ ಮಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಲಕ್ಷ್ಮಿ ಸ್ವಚ್ಛತೆ ಕುರಿತು ಪ್ರಮಾಣ ವಚನ ಬೋಧಿಸಿದರು. ಇದೇ ಸಂದರ್ಭದಲ್ಲಿ ಶಾಸಕ ಪಿ.ರವಿ ಕುಮಾರ್, ಜಿಲ್ಲಾಧಿಕಾರಿ ಡಾ. ಕುಮಾರ, ಜಿಲ್ಲಾ ಪಂಚಾಯತ್ ಸಿಇಓ ಕೆ.ಆರ್.ನಂದಿನಿ, ಎಸ್ಪಿ ಮಲ್ಲಿ ಕಾರ್ಜುನ ಬಾಲದಂಡಿ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಅಣ್ಣೂರಿನಲ್ಲಿ ಹಸು ಕಳವು

ಭಾರತೀನಗರ, ಸೆ.23–ಮನೆ ಮುಂದೆ ಕಟ್ಟಿ ಹಾಕಲಾಗಿದ್ದ ಹಸುವನ್ನು ಕಳ್ಳರು ಕದ್ದೊಯ್ದಿರುವ ಘಟನೆ ಇಲ್ಲಿಗೆ ಸಮೀಪದ ಅಣ್ಣೂರು ಗ್ರಾಮದಲ್ಲಿ ಸೋಮವಾರ ತಡರಾತ್ರಿ ಜರುಗಿದೆ.

ಗ್ರಾಮದ ಸವಿತಾರವಿ ಎಂಬುವರಿಗೆ ಸೇರಿದ ಹಸುವನ್ನು ಎಂದಿನಂತೆ ಮನೆಯ ಮುಂಭಾಗ ಕಟ್ಟಿ ಹಾಕಲಾಗಿತ್ತು. ರಾತ್ರಿ ಸುಮಾರು 2 ಗಂಟೆ ಸಮಯದಲ್ಲಿ ಹಸುವನ್ನು ಕದ್ದು ಪರಾರಿಯಾಗಿದ್ದಾರೆ.

ಸವಿತಾ ಅವರು ಕುರಿ, ಮೇಕೆ, ಹಸುಗಳನ್ನು ಸಾಕಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದು, ಸುಮಾರು 35 ಸಾವಿರ ರೂ. ಮೌಲ್ಯದ ಹಸು ಕಳುವಾಗಿರುವುದಕ್ಕೆ ಕಂಗಾಲಾಗಿದ್ದಾರೆ. ಸವಿತಾ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಗೆ ದೂರು ನೀಡಿದ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ

ಕರಡಹಳ್ಳಿ ಗಾಪಂ ವ್ಯಾಪ್ತಿಯಲ್ಲಿ ಇಂದು ವಿದ್ಯುತ್ ಸ್ಥಗಿತ

ನಾಗಮಂಗಲ: ಕರಡಹಳ್ಳಿ ಗ್ರಾಪಂ ವ್ಯಾಪ್ತಿಯ ಕರಡಹಳ್ಳಿ, ಹುಳ್ಳೇನಹಳ್ಳಿ, ಬಿಂಡೇನಹಳ್ಳಿ, ಮಾಟನಕೊಪ್ಪಲು, ಗಂಡನಿಂಗನಕೊಪ್ಪಲು, ಕಲ್ಲಿನಾಥಪುರ, ಗುರುಗಳಮಾದಹಳ್ಳಿ, ಮುದ್ದಲಿಂಗನಕೊಪ್ಪಲು, ದೊಡ್ಡಯಗಟಿ, ಚಿಕ್ಕಯಗಟಿ, ಯಗಟಿ ಕೊಪ್ಪಲು, ಹಾಗೂ ಲಿಂಗಮ್ಮನಹಳ್ಳಿ ಗ್ರಾಮಗಳಿಗೆ ನಾಳೆ (ಬುಧವಾರ) ಬೆಳಿಗ್ಗೆ 10 ಗಂಟೆಯಿಂದ ಸಂಜೆ 6ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಸಹಾಯಕ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಜಿಎಸ್‌ಟಿ ಇಳಿಕೆ: ಬಿಜೆಪಿ ವಿಜಯೋತ್ಸವ

ಚಾಮರಾಜನಗರ: ಕೇಂದ್ರ ಸರ್ಕಾರವು ಜಿಎಸ್‌ಟಿ ಕಡಿತಗೊಳಿಸಿರುವ ಹಿನ್ನೆಲೆಯಲ್ಲಿ ಚಾ.ನಗರ ಜಿಲ್ಲಾ ಬಿಜೆಪಿ ವತಿಯಿಂದ ವಿಜಯೋತ್ಸವ ಆಚರಿಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪಕ್ಷದ ಮುಖಂಡರು, ಕಾರ್ಯಕರ್ತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಪಟಾಕಿ ಸಿಡಿಸಿ, ಸಿಹಿ ಹಂಚಿ, ನರೇಂದ್ರ ಮೋದಿ ಪರ ಜೈಕಾರ ಕೂಗಿ ಸಂಭ್ರಮಿಸಿದರು.

ವಿಜಯೋತ್ಸವ ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ.ಎಸ್. ನಿರಂಜನ್ ಕುಮಾರ್ ಮಾತನಾಡಿ, ಕೇಂದ್ರ ಸರ್ಕಾರವು ಜಿಎಸ್‌ಟಿ ಕಡಿಮೆಗೊಳಿಸುವ ಮೂಲಕ ರೈತರಿಗೆ, ವಿದ್ಯಾರ್ಥಿಗಳಿಗೆ, ಬಡವರಿಗೆ ಹಾಗೂ ಮಧ್ಯಮ ವರ್ಗದವರಿಗೆ ನೆರವಾಗಿದೆ ಎಂದರು.

ದೇಶಾದ್ಯಂತ ಸೆ.22 ಜಿಎಸ್‌ಟಿ 2.0 ಹೊಸ ತೆರಿಗೆ ನೀತಿ ಜಾರಿಗೆ ಬಂದಿರಲಿದ್ದು ಪ್ರಸ್ತುತ ಇರುವ 4 ಸ್ಲ್ಯಾಬ್ ತೆರಿಗೆಗಳನ್ನು ಬದಲಾವಣೆ ಮಾಡಲಾಗಿದ್ದು, ಕೇವಲ ಶೇ.5ರಷ್ಟು ಮತ್ತು ಶೇ. 18ರಷ್ಟು ಎರಡು ಸ್ಲಾಬ್ ತೆರಿಗೆ ಇರಲಿದೆ. ಈ ಹಿನ್ನೆಲೆ ಎರಡು ಸ್ಲ್ಯಾಬ್ ಪ್ರಕಾರ ಸಾಮಾನ್ಯ ಜನರಿಗೆ ಅಗತ್ಯವಾದ ವಸ್ತುಗಳ ದರವು ಇಳಿಕೆಯಾಗಲಿದೆ. ನಿತ್ಯ ಬಳಸುವ ವಸ್ತುಗಳು, ಆಹಾರ ಉತ್ಪನ್ನಗಳು, ಆಟೋಮೊಬೈಲ್, ವಾಹನಗಳು ಸೇರಿ ಒಟ್ಟು 375 ವಸ್ತುಗಳ ಬೆಲೆ ಸೆ.22ರಿಂದ ಕಡಿಮೆಯಾಗಿದೆ, ದೇಶದ ಜನರಿಗೆ ಅನುಕೂಲ ಮಾಡಿಕೊಟ್ಟಿರುವ ನರೇಂದ್ರ ಮೋದಿ ಅವರಿಗೆ ಜಿಲ್ಲೆಯ ಜನತೆಯ ಪರವಾಗಿ ಈ ಮೂಲಕ ಅಭಿನಂದನೆ ಸಲ್ಲಿಸಲಾಗುವುದು ಎಂದರು. ಜಾತಿ ಗಣತಿ ಸಮೀಕ್ಷೆಯಲ್ಲಿ ಎಲ್ಲಾ ಸಮುದಾಯದವರು ಧರ್ಮದ ಕಾಲಂನಲ್ಲಿ ಹಿಂದೂ ಎಂದು ಬರೆಸುವಂತೆ ಮನವಿ ಮಾಡಿದರು.

ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಓಬಿಸಿ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದುಶೆಟ್ಟಿ ಮಾತನಾಡಿದರು.

ವಿಜಯೋತ್ಸವದಲ್ಲಿ ಮಾಜಿ ಅಧ್ಯಕ್ಷ ಆರ್. ಸುಂದರ್, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಬೇಂದ್ರಪ್ಪ, ಮೂಡ್ನಾಕೂಡುಪ್ರಕಾಶ್, ಹೊನ್ನೂರು ಮಹಾದೇವಸ್ವಾಮಿ, ಜಿಲ್ಲಾ ವಕ್ತಾರ ಕಾಡಹಳ್ಳಿ ಕುಮಾರ್, ಜಿಲ್ಲಾ ಉಪಾಧ್ಯಕ್ಷ ಶಿವು ವಿರಾಟ್, ಜಿ.ಪಂ. ಮಾಜಿ ಸದಸ್ಯ ಬಾಲರಾಜು, ಚೂಡಾ ಮಾಜಿ ಅಧ್ಯಕ್ಷ ಶಾಂತಮೂರ್ತಿ ಕುಲಗಾಣ, ಚಾಮುಲ್ ಮಾಜಿ ಅಧ್ಯಕ್ಷ ನಾಗೇಂದ್ರ ಅರಕಲವಾಡಿ ನಾಗೇಂದ್ರ, ನಗರ ಮಂಡಲ ಅಧ್ಯಕ್ಷ ಶಿವರಾಜ್, ಪ್ರಧಾನ ಕಾರ್ಯದರ್ಶಿ ಮಹೇಶ್, ಬೇಡರಪುರ ಬಸವಣ್ಣ, ನಟರಾಜು, ವೃಷಭೇಂದ್ರ ಸ್ವಾಮಿ, ಅಗರ ರಾಜು ಇತರರು ಭಾಗವಹಿಸಿದ್ದರು.



ಜಿಎಸ್‌ಟಿ ದರವನ್ನು ಇಳಿಕೆ ಮಾಡಿರುವುದನ್ನು ಸ್ವಾಗತಿಸಿ ಬಿಜೆಪಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಲಾಯಿತು.

ಇಂದು ಚಾ.ನಗರಕ್ಕೆ ಬಸವ ಸಂಸ್ಕೃತಿ ಅಭಿಯಾನ

ಬಹಿರಂಗ ಸಮಾವೇಶ, ವೈವಿಧ್ಯಮಯ ಕಾರ್ಯಕ್ರಮ



ಸುದ್ದಿಗೋಷ್ಠಿಯಲ್ಲಿ ಪಡುಗೂರು ಅಡವಿ ಮಠದ ಶಿವಲಿಂಗೇಂದ್ರಸ್ವಾಮೀಜಿ ಮಾತನಾಡಿದರು.

ಚಾಮರಾಜನಗರ, ಸೆ.23– ರಾಜ್ಯ ಸರ್ಕಾರ ವಿಶ್ವಗುರು ಬಸವಣ್ಣನವರನ್ನು 'ಸಾಂಸ್ಕೃತಿಕ ನಾಯಕ' ಎಂದು ಸಂವಿಧಾನಾತ್ಮಕವಾಗಿ ಘೋಷಿಸಿ ಒಂದು ವರ್ಷವಾದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ನಾಡಿನ ಲಿಂಗಾಯತ ಮಠಾಧಿಪತಿಗಳ ಒಕ್ಕೂಟ ಸಹಯೋಗದಲ್ಲಿ 'ಬಸವ ಸಂಸ್ಕೃತಿ ಅಭಿಯಾನ ನಡೆಯುತ್ತಿದೆ.

ಸೆ.24ರಂದು ಚಾಮರಾಜನಗರಕ್ಕೆ ಬಸವ ಸಂಸ್ಕೃತಿ ಅಭಿಯಾನ ಆಗಮಿಸುತ್ತಿದ್ದು, ಅಂದು ನಗರದಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಬಸವ ಸಂಸ್ಕೃತಿ ಅಭಿಯಾನದ ನೇತೃತ್ವ ವಹಿಸಿರುವ ಪಡುಗೂರು ಅಡವಿ ಮಠದ ಶಿವಲಿಂಗೇಂದ್ರಸ್ವಾಮೀಜಿ ಹೇಳಿದರು.

ನಗರದ ಜಿಲ್ಲಾಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸೆ.24ರಂದು ಬೆಳಗ್ಗೆ 10:30ಕ್ಕೆ ನಗರದ ಜೆಎಸ್‌ಎಸ್ ಕಾಲೇಜಿನ ಸೆಮಿನಾರ್ ಹಾಲ್‌ನಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ, ಮಧ್ಯಾಹ್ನ 12ಕ್ಕೆ ಚಾಮರಾಜೇಶ್ವರ ದೇವಸ್ಥಾನದಿಂದ ಬಹಿರಂಗ ಸಮಾವೇಶ ಆಯೋಜಿಸಿರುವ ಜೆಎಸ್‌ಎಸ್ ಕಾಲೇಜಿನ ಮೈದಾನದವರಗೆ ಜಾಗೃತಿ ಜಾಥಾ (ಪಾದಯಾತ್ರೆ) ನಡೆಯಲಿದೆ.

ರಾತ್ರಿ 7ಕ್ಕೆ "ಜಂಗಮದೆಡೆಗೆ" ನಾಟಕ ಪ್ರದರ್ಶನವು ಜೆಎಸ್‌ಎಸ್ ಕಾಲೇಜು ಆವರಣದಲ್ಲಿ ನಡೆಯಲಿದೆ. ಮಧ್ಯಾಹ್ನ 3ಕ್ಕೆ ಜೆಎಸ್‌ಎಸ್ ಮಹಿಳಾ ಕಾಲೇಜು ಆವರಣದಲ್ಲಿ ನಡೆಯುವ ಬಹಿರಂಗ ಸಮಾವೇಶದ ಸಾನಿಧ್ಯವನ್ನು ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ವಹಿಸುವರು.

ಪಡುಗೂರು ಅಡವಿ ಮಠದ ಶಿವಲಿಂಗೇಂದ್ರಸ್ವಾಮೀಜಿ ಅಧ್ಯಕ್ಷತೆ ವಹಿಸುವರು. ತರಳಬಾಳು ಸಾಣೇಹಳ್ಳಿ ಶಾಖಾಮಠದ ಪಂಡಿತಾರಾಧ್ಯ ಶಿವಾಚಾರ್ಯಸ್ವಾಮೀಜಿ ಸಮಾವೇಶ ಉದ್ಘಾಟಿಸುವರು. ತೋಂಟದಾರ್ಯ ಮಠದ ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಅಧ್ಯಕ್ಷರಾದ ಭಾಲ್ಕಿ ಹಿರೇಮಠ, ಮಹಾಸಂಸ್ಥಾನ ನಾಡೋಜ ಶ್ರೀ ಡಾ. ಬಸವ ಲಿಂಗಪಟ್ಟದ್ದೇವರು ಗೌರವ ಸಲಹೆಗಾರ ವಕೀಲ ವಿರೂಪಾಕ್ಷ, ಗುಂಡ್ಲುಪೇಟೆ ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್, ಮಾಜಿ ಸಚಿವೆ ಗೀತಾ ಮಹದೇವಪ್ರಸಾದ್ ಹನೂರು ಕ್ಷೇತ್ರ ಮಾಜಿ ಶಾಸಕಿ ಪರಿಮಳನಾಗಪ್ಪ, ಮಾಜಿ ಶಾಸಕ ಸಿ.ಎಸ್.ನಿರಂಜನ್ ಕುಮಾರ್, ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ. ಕೆ.ಆರ್.ಮಲ್ಲಿಕಾರ್ಜುನಪ್ಪ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಚಾಮುಲ್ ಅಧ್ಯಕ್ಷ ಕುಂತೂರು ನಂಜುಂಡಸ್ವಾಮಿ ಭಾಗವಹಿಸಲಿದ್ದಾರೆ ಎಂದರು.

ಅಂದಿನ ಸಮಾವೇಶದಲ್ಲಿ 20 ಸಾವಿರಕ್ಕೂ ಹೆಚ್ಚು ಭಕ್ತಾದಿಗಳನ್ನು ನಿರೀಕ್ಷಿಸಲಾಗಿದೆ. ಜಿಲ್ಲೆಯ ಬಸವಾನುಯಾಯಿಗಳು ಹೆಚ್ಚಿನಸಂಖ್ಯೆಯಲ್ಲಿ ಭಾಗವಹಿಸಿ ಸಮಾವೇಶ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಬಸವ ಸಂಸ್ಕೃತಿ ಅಭಿಯಾನದ ಅಧ್ಯಕ್ಷ ಕೋಡಿಮೋಳೆ ರಾಜಶೇಖರ್, ಗೌರವಾಧ್ಯಕ್ಷ ವೇದಮೂರ್ತಿ, ಸಿದ್ದಮಲ್ಲೇಶ್ವರ ವಿರಕ್ತಮಠದ ಚನ್ನಬಸವ ಸ್ವಾಮೀಜಿ, ಮೂಡುಗೂರು ಮಠದ ಉದ್ಧಾನಸ್ವಾಮೀಜಿ, ಪಡುಗೂರುಅಡವಿ ಮಠದ ಶಿವಲಿಂಗೇಂದ್ರಸ್ವಾಮೀಜಿ, ಬಸವ ಕೇಂದ್ರದ ಜಿಲ್ಲಾಧ್ಯಕ್ಷ ಜಿಲ್ಲಾಧ್ಯಕ್ಷ ಎನ್‌ರಿಚ್ ಮಹಾದೇವಸ್ವಾಮಿ, ಗೌರವ ಸಲಹೆಗಾರ ವಕೀಲ ವಿರೂಪಾಕ್ಷ ಹಾಜರಿದ್ದರು.

ಶ್ರೀಗಂಧ ಮರ ಸಾಗಣೆ; ಇಬ್ಬರ ಬಂಧನ

ಚಾಮರಾಜನಗರ, ಸೆ.23–ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಮಲೆ ಮಹದೇಶ್ವರ ವನ್ಯಧಾಮದಲ್ಲಿ ಶ್ರೀಗಂಧದ ಮರ ಕಡಿದು ಸಾಗಿಸುತ್ತಿದ್ದ ತಮಿಳುನಾಡಿನ ಇಬ್ಬರು ಆರೋಪಿಗಳನ್ನು ಅರಣ್ಯಾಧಿಕಾರಿಗಳು ಬಂಧಿಸಿದ್ದಾರೆ.

ಮಲೆ ಮಹದೇಶ್ವರ ವನ್ಯಧಾಮದ ಕೊಕ್ಕರೆ ಗಸ್ತಿನ ದೊಡ್ಡುರೆಹಳ್ಳದ ಸಮೀಪದ ಮೀಸಲು ಅರಣ್ಯ ಪ್ರದೇಶದಲ್ಲಿ ಒಬ್ಬ ಬಾಲಕ ಹಾಗೂ ಇಬ್ಬರು ವ್ಯಕ್ತಿಗಳು ಸೇರಿ ಶ್ರೀಗಂಧದ ಮರ ಕಡಿದು ಅದನ್ನು ಎರಡು ತುಂಡುಗಳನ್ನಾಗಿ ಮಾಡುತ್ತಿದ್ದಾಗ ಅರಣ್ಯ ಇಲಾಖೆ ಸಿಬ್ಬಂದಿ ದಾಳಿ ನಡೆಸಿದ್ದಾರೆ.

ಈ ಸಂದರ್ಭದಲ್ಲಿ ಬಾಲಕ ಸಿಕ್ಕಿ ಬಿದ್ದಿದ್ದಾನೆ. ಆತನಿಂದ 62 ಕೆ.ಜಿ ಶ್ರೀಗಂಧದ 2 ತುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಾಲಕನ ಜೊತೆಗಿದ್ದ ತಮಿಳುನಾಡಿನ ವಿಲ್ಲುಪುರಂ ಜಿಲ್ಲೆಯ ಚಿನ್ನಸೇಲಂ, ತಾಲೂಕಿನ ಪೆರುಮಾಳ್ ಮತ್ತು ಮುರುಗನ್ ಪರಾರಿಯಾಗಿದ್ದು, ಬಾಲಕನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಮತ್ತೊಂದು ಪ್ರಕರಣಗಳಲ್ಲಿ ಮಹದೇಶ್ವರ ವನ್ಯಧಾಮದ ಮಹದೇಶ್ವರ ಬೆಟ್ಟ ವನ್ಯಜೀವಿ ವಲಯದ ಕೊಕ್ಕರೆ ಗಸ್ತಿನ ಆನೆತಲೆದಿಂಬದ ಬಳಿ ಶ್ರೀಗಂಧದ ತುಂಡುಗಳನ್ನು ಸಾಗಿಸುತ್ತಿದ್ದ ತಮಿಳುನಾಡಿನ ಸೇಲಂ ಜಿಲ್ಲೆಯ ಆತೂರು ತಾಲೂಕಿನ ನೈಯ್ಯಮಲೈ ಗ್ರಾಮದ ಸೆಡೆಯಾನ್ ಎಂಬ ವ್ಯಕ್ತಿಯನ್ನು ಅರಣ್ಯಾಧಿಕಾರಿಗಳು ಬಂಧಿಸಿದ್ದಾರೆ.

ನಡೆದುಕೊಂಡು ಅನುಮಾನಸ್ಪದವಾಗಿ ಬರುತ್ತಿದ್ದ ವ್ಯಕ್ತಿಯನ್ನು ತಡೆದು ತಪಾಸಣೆ ಮಾಡಿದಾಗ ಆತನ ಬ್ಯಾಗಿನಲ್ಲಿ 11.70 ಕೆಜಿ ತೂಕವುಳ್ಳ ಶ್ರೀಗಂಧದ 33 ತುಂಡುಗಳು ಪತ್ತೆಯಾಗಿವೆ. ಆತನನ್ನು ವಶಕ್ಕೆ ಪಡೆದು ಅರಣ್ಯಾಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.



ಅರಣ್ಯದಲ್ಲಿ ಗಂಧದ ಮರಗಳನ್ನು ಕಡಿಯುತ್ತಿದ್ದ ಶ್ರೀಗಂಧ ಚೋರನನ್ನು ಬಂಧಿಸಿರುವ ಅರಣ್ಯಾಧಿಕಾರಿಗಳು

ಜಾತಿ ಕಾಲಂನಲ್ಲಿ ನಾಯಕ ಎಂದು ಬರೆಸಲು ಮನವಿ

ಚಾಮರಾಜನಗರ, ಸೆ.23– ಹಿಂದುಳಿದ ವರ್ಗಗಳ ಆಯೋಗದಿಂದ ಸೆ.22 ರಿಂದ ರಾಜ್ಯ ಸರ್ಕಾರ ಆರಂಭಿಸಿರುವ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಜಿಲ್ಲೆಯಲ್ಲಿ ವಾಸ ಮಾಡುವ ನಾಯಕ ಸಮುದಾಯದವರು ಜಾತಿ ಕಾಲಂನಲ್ಲಿ ನಾಯಕ, ಧರ್ಮದ ಕಾಲಂನಲ್ಲಿ ಹಿಂದೂ ಹಾಗೂ ಪರ್ಯಾಯವಾಗಿ ಪರಿವಾರ(ನಾಯಕ) ಎಂದು ಬರೆಸಬೇಕು ಎಂದು ಚಾಮರಾಜನಗರ ತಾಲೂಕು ವಿದ್ಯಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪು.ಶ್ರೀನಿವಾಸ ನಾಯಕ ಮನವಿ ಮಾಡಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸರ್ಕಾರದ ವಿವಿಧ ಸೌಲಭ್ಯ ಪಡೆಯಲು ಸಮೀಕ್ಷೆ ಸಹಕಾರಿಯಾಗಿದ್ದು, ಮನೆಗಳಿಗೆ ಜಾತಿ ಸಮೀಕ್ಷೆ ಗಣತಿದಾರರು ಬಂದ ವೇಳೆ ಜಾತಿ ಕಾಲಂ ನಲ್ಲಿ ನಾಯಕ ಎಂದು ಬರೆಸುವುದು ಕಡ್ಡಾಯ. ಗಣತಿದಾರರು ಮನೆ ಬಳಿ ಬಂದ ವೇಳೆ ಅವರು ಕೇಳುವ ದಾಖಲಾತಿ ಒದಗಿಸಿ ಸಮುದಾಯದ ಹೆಸರು ನಮೂದಿಸಬೇಕು ಎಂದು ಮನವಿ ಮಾಡಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಶ್ರೀನಿವಾಸ ನಾಯಕ.

ಮೈಸೂರು–ಚಾಮರಾಜನಗರ ನಾಯಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ರಾಮಚಂದ್ರ ಮಾತನಾಡಿದರು. ಗೋಷ್ಠಿಯಲ್ಲಿ ಚಾಮರಾಜನಗರ ತಾಲ್ಲೂಕು ವಿದ್ಯಾಭಿವೃದ್ಧಿ ಸಂಘದ ಅಧ್ಯಕ್ಷ ಮಹದೇವನಾಯಕ, ಮಲ್ಲೇಶ್ ನಾಯಕ, ಶಿವುವಿರಾಟ್ ಹಾಜರಿದ್ದರು.

ಸಹಸ್ರಾರು ಸ್ವರಗಳಲ್ಲಿ ಮೊಳಗಿತು ಕುವೆಂಪು ಶತಮಾನದ ನಾಡಗೀತೆ ನಾದ

ನಾಡಗೀತೆ ನೂರರ ಸಂಭ್ರಮಕ್ಕೆ ಸಾಕ್ಷಿಯಾದ ರಾಷ್ಟ್ರಕವಿಯ ನೆಚ್ಚಿನ ಮಾನಸ ಗಂಗೋತ್ರಿ ಬಯಲು ರಂಗಮಂದಿರ



ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ರಾಷ್ಟ್ರಕವಿ ಕುವೆಂಪು ರಚಿತ 'ನಾಡಗೀತೆ' ನೂರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ 'ನಾಡಗೀತೆಗೆ ಸಾವಿರ ಸ್ವರಗಳ ಸಂಗಮ' ಕಾರ್ಯಕ್ರಮ ನಡೆಯಿತು

ಮೈಸೂರು, ಸೆ.23(ಎಂಕೆ)– ಜಗದ ಕವಿ... ಯುಗದ ಕವಿ... ರಾಷ್ಟ್ರಕವಿ ಕುವೆಂಪು ವಿರಚಿತ ನಾಡಗೀತೆಗೆ ಸಾವಿರ ಸ್ವರಗಳ ಸಂಗಮ... ಹಚ್ಚ ಹಸಿರಿನ ಮಾನಸಗಂಗೋತ್ರಿಯಲ್ಲಿ ಕೆಂಪು–ಹಳದಿಯ ಚಿತ್ತಾರದೊಂದಿಗೆ ಮೊಳಗಿತು ಕನ್ನಡ ಕಹಳೆ...!

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ರಾಷ್ಟ್ರಕವಿ ಕುವೆಂಪು ರಚಿತ 'ನಾಡಗೀತೆ'ಗೆ ನೂರು ವರ್ಷ ಸಂದಿದ ಹಿನ್ನೆಲೆಯಲ್ಲಿ ದಸರಾ ಕವಿಗೋಷ್ಠಿ ಉಪಸಮಿತಿ ಹಾಗೂ ಮೈಸೂರು ವಿವಿ ಸಹಯೋಗದೊಂದಿಗೆ ಆಯೋಜಿಸಿದ್ದ 'ನಾಡಗೀತೆಗೆ ಸಾವಿರ ಸ್ವರಗಳ ಸಂಗಮ' ಕಾರ್ಯಕ್ರಮ ನಾಡದೇವಿಗೆ ಕನ್ನಡದ ತಿಲಕವನ್ನಿಟ್ಟಿತು.

ಮೈಸೂರು ವಿವಿಯ ವಿವಿಧ ಕಾಲೇಜುಗಳಿಂದ ಆಗಮಿಸಿದ್ದ ಸಾವಿರಾರು ವಿದ್ಯಾರ್ಥಿಗಳು, ಗಾಯಕರು, ಜನಪ್ರತಿನಿಧಿಗಳು, ಅಧಿಕಾರಿಗಳು ಕೆಂಪು–ಹಳದಿ ವಸ್ತ್ರತೊಟ್ಟು ಏಕಕಾಲದಲ್ಲಿ ನಾಡಗೀತೆಯನ್ನು ಸುಶ್ರಾವ್ಯವಾಗಿ ಹಾಡುವ ಮೂಲಕ ನಾಡಗೀತೆಗೆ, ಅದರ ರಚನಾಕಾರರಾದ ರಾಷ್ಟ್ರಕವಿ ಕುವೆಂಪು ಅವರಿಗೆ ಗೌರವ ನಮನ ಸಲ್ಲಿಸುವ ಮೂಲಕ ಕನ್ನಡವೇ ಸತ್ಯ... ಕನ್ನಡವೇ ನಿತ್ಯ ಎಂಬುದನ್ನು ಸಾಕ್ಷೀಕರಿಸಿದರು.

ಗಂಗೋತ್ರಿಯ ಹಸಿರು ವನದ ನಡುವೆ ಬಾನಂಗಳಕ್ಕೆ ಚಿಮ್ಮಿದ ನಾಡಗೀತೆಯ ಕನ್ನಡ ಸ್ವರಗಳು ನೆರೆದಿದ್ದ ಸಾವಿರಾರು ಮನಸ್ಸುಗಳಲ್ಲಿ ಕನ್ನಡ ಕಂಪನ್ನು ಪಸರಿಸಿತು.

ನಾಡಿಗೆ ಕಿರೀಟ: ಬಳಿಕ ಇದೇ ವೇದಿಕೆಯಲ್ಲಿ ದಸರಾ ಕವಿಗೋಷ್ಠಿ(ಪಂಚ ಕಾವ್ಯ ದೌತಣ–ಪ್ರಭಾತ, ಪ್ರಚುರ, ಪ್ರಜ್ವಲ, ಪ್ರತಿಭಾ ಮತ್ತು ಪ್ರಬುದ್ಧ) ಉದ್ಘಾಟಿಸಿದ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಮಾತನಾಡಿ, ಕನ್ನಡ ಧರೆಗೆ ದಕ್ಕಿದ ವರ ಕುವೆಂಪು. ಅವರು ರಚಿಸಿದ ನಾಡಗೀತೆ ಕನ್ನಡ ನಾಡಿಗೆ ಕಿರೀಟವಾಗಿದೆ ಎಂದು ಅಭಿವ್ಯಕ್ತಪಡಿಸಿದರು.

1924ರಲ್ಲಿ ರಚನೆಯಾದ ನಾಡಗೀತೆಗೆ ತನ್ನದೆ ಆದ ಪರಂಪರೆ ಇದೆ. ಅದೇ ವರ್ಷ ಹುಯಿಲಗೋಳ ನಾರಾಯಣ ರಾಯರ ರಚಿತ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಹಾಡನ್ನು ನಾಡಗೀತೆಯನ್ನಾಗಿ ಪರಿಗಣಿಸಿ ಹಾಡಲಾಗುತ್ತಿತ್ತು. ಸ್ವಾತಂತ್ರ್ಯ ನಂತರ 1956ರಲ್ಲೇ ಕನ್ನಡ ನಾಡು ಏಕೀಕರಣವಾಗಿದೆ. ಕನ್ನಡ ನಾಡು ಉದಯವಾಗಿ ಎಷ್ಟೋ ಕಾಲವಾಗಿದೆ. ಈಗಲಾದರೂ 'ಕನ್ನಡನಾಡು ಉದಯವಾಗಿದೆ' ಎಂದು ಹಾಡಿ ಎಂಬ ಕೂಗು ಕೇಳಿ ಬಂದಾಗ ಮುನ್ನೆಲೆಗೆ ಬಂದಿದ್ದೆ ಕುವೆಂಪು ರಚಿತ ನಾಡಗೀತೆ ಎಂದರು.

ವಿಶ್ವ ಕವಿಗೋಷ್ಠಿ ಆಯೋಜನೆ: ಕುವೆಂಪು ಅವರ ಜನ್ಮಶತಮಾನೋತ್ಸವದ ಅಂಗವಾಗಿ ಅವರು ರಚಿಸಿದ ಗೀತೆಯನ್ನು ನಾಡಗೀತೆಯನ್ನಾಗಿ ಘೋಷಣೆ ಮಾಡಲಾಯಿತು. ಅದೇ ನಾಡಗೀತೆಗೆ ನೂರು ವರ್ಷಗಳು ತುಂಬಿರುವ ಹಿನ್ನೆಲೆಯಲ್ಲಿ ದಸರಾ ಕವಿಗೋಷ್ಠಿಯನ್ನು ವಿಶ್ವ ಕವಿಗೋಷ್ಠಿಯನ್ನಾಗಿ ಮಾಡಬೇಕು. ವಿಶ್ವದಲ್ಲಿ ನಾಲ್ಕೈದು ಸುಪ್ರಸಿದ್ಧ ಕವಿಗಳನ್ನು ಆಹ್ವಾನಿಸಿ, ದಸರಾ ಕವಿಗೋಷ್ಠಿಯನ್ನು ವಿಶ್ವಮಟ್ಟಕ್ಕೆ ಬೆಳೆಸಬೇಕಿದೆ. ಈ ನಿಟ್ಟಿನಲ್ಲಿ ಸರ್ಕಾರ ಕಾರ್ಯೋನ್ಮುಖವಾಗಬೇಕು ಎಂದು ಮನವಿ ಮಾಡಿದರು.

ನಿಮ್ಮದೇ ಸ್ವರಗಳಿಗೆ ಹೆಜ್ಜೆಹಾಕಿ: ಯುವ ಸಮೂಹ ಸಾಹಿತ್ಯದ ಮೇಲೆ ಆಸಕ್ತಿ ಕಳೆದುಕೊಳ್ಳುತ್ತಿದೆ ಎಂದು ಹೇಳುತ್ತಾರೆ. ಆದರೆ, ಯುವ ಸಂಭ್ರಮ, ಯುವ ದಸರಾದಂತಹ ಕಾರ್ಯಕ್ರಮಗಳಿಗೆ ಕುಣಿದು ಕುಪ್ಪಳಿಸುವ ಯುವ ಸಮೂಹ ರೀಲ್ಸ್‌ಗಳ ಸಾಹಿತ್ಯಾಭಿರುಚಿ ಬೆಳೆಸಿಕೊಳ್ಳುತ್ತಿದ್ದು, ಬೇರೆಯವರ ಸಾಹಿತ್ಯಕ್ಕೆ ರೀಲ್ಸ್ ಮಾಡುವ ಬದಲು ನಿಮ್ಮದೇ ಸಾಹಿತ್ಯ ರಚನೆ ರೀಲ್ಸ್ ಮಾಡಿ, ನಿಮ್ಮದೇ ಸ್ವರಗಳಿಗೆ ಹೆಜ್ಜೆಹಾಕಿ ಎಂದು ತಿಳಿಹೇಳಿದರು.

ಮಾಜಿ ಸಚಿವೆ ಬಿ.ಟಿ.ಲಲಿತಾನಾಯಕ್ ಮಾತನಾಡಿ, ನಾಡಹಬ್ಬ ಮೈಸೂರು ದಸರಾ ದೇಶಕ್ಕೆ ಹೆಮ್ಮೆ ತರುವ ಕಾರ್ಯಕ್ರಮವಾಗಿದ್ದು, ಈ ವರ್ಷ ಸಾಹಿತಿ ಬಾನುಮುಷ್ತಾಕ್ ಅವರಿಂದ ಉದ್ಘಾಟನೆ ಮಾಡಿರುವ ಮೂಲಕ ಸಮಾನತೆ ಸಂದೇಶ ಸಾರುವ ಅಪರೂಪದ ಕಾರ್ಯಕ್ರಮವಾಗಿದ್ದು, ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್ ಗೌಡ, ರವಿಶಂಕರ್, ಟಿ.ಎಸ್.ಶ್ರೀವತ್ಸ ವಿಶ್ರಾಂತ ಕುಲಪತಿ ಪ್ರೊ.ಕೆ.ಚಿದಾನಂದಗೌಡ, ಹಿರಿಯ ವೈದ್ಯ ಲಕ್ಷ್ಮೀನಾರಾಯಣ, ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಮಾನಸ, ಮೈಸೂರು ವಿವಿ ಕುಲಪತಿ ಎನ್.ಕೆ.ಲೋಕನಾಥ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯತ್ರಿ, ಅಪರ ಜಿಲ್ಲಾಧಿಕಾರಿ ಡಾ.ಶಿವರಾಜು, ಮೈಸೂರು ವಿವಿ ಕುಲಸಚಿವೆ ಎಂ.ಕೆ. ಸವಿತಾ, ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಮತ್ತಿತರರಿದ್ದರು.

'ಬೌದ್ಧ' ಪದ ಬಳಕೆಯಿಂದ ಸ್ವರ ತಪ್ಪಾಗದು...!

ನಾಡಗೀತೆಗೆ ಸಂಬಂಧಿಸಿದಂತೆ ಇಂದಿಗೂ ವಾಗ್ವಾದ, ಭಿನ್ನಾಭಿಪ್ರಾಯಗಳಿವೆ. ಇಂತಹ ವಾಗ್ವಾದ, ಭಿನ್ನಾಭಿಪ್ರಾಯಗಳು ಎಲ್ಲಿವರೆಗೂ ಇರುತ್ತವೆಯೋ ಅಲ್ಲಿಯವರೆಗೂ ನಾವು ಜೀವಂತವಾಗಿರುತ್ತೇವೆ. ಹಾಗಾಗಿ ನಾಡಗೀತೆಯನ್ನು ತಿದ್ದುಪಡಿಗೆ ಒಳಪಡಿಸಿದ್ದಾರೆ. ಕೆಲವರು ಈ ಹಾಡಿನಲ್ಲಿ ಮಹಿಳೆಯರ ಹೆಸರು ಬರಬೇಕು. ಅದು–ಇದು ಸೇರಿಸಿ ಎನ್ನುತ್ತಾರೆ. ಹೇಳಿದನ್ನೆಲ್ಲಾ ಸೇರಿಸುತ್ತಾ ಹೋದರೆ ನಾಡಗೀತೆ ಸ್ತುತಿಗೀತೆ ಆಗಲಿದೆ. ಕುವೆಂಪು ಅವರು ಜೈನರುದ್ಯಾನ ಎಂಬ ಮಾತನ್ನು ಬಳಸುವ ಮುನ್ನ ಬೌದ್ಧರುದ್ಯಾನ ಎಂಬ ಮಾತನ್ನು ಬಳಸಿದ್ದರು. ಆದರೆ ಆ ಶಬ್ದವನ್ನು ಯಾವ ಕಾರಣಕ್ಕೆ 70ರ ದಶಕದಲ್ಲಿ ಕೈಬಿಟ್ಟರೋ ಗೊತ್ತಿಲ್ಲ. ಈಗಲಾದರೂ ಬೌದ್ಧ ಹೆಸರನ್ನು ನಾಡಗೀತೆಗೆ ಸೇರ್ಪಡೆ ಮಾಡಬೇಕು.

– **ಪ್ರೊ.ಅರವಿಂದ ಮಾಲಗತ್ತಿ**, ಸಾಹಿತಿ

> ಯುವಕ–ಯುವತಿಯರು ಮೊಬೈಲ್ ಬಿಟ್ಟು ಕತೆ, ಕಾದಂಬರಿಗಳನ್ನು ಓದಬೇಕು. ಪ್ರಾಚೀನ ಕನ್ನಡ ಭಾಷೆಯ ಅಭಿವೃದ್ಧಿಗೆ ರಾಜ್ಯ ಸರ್ಕಾರ ವಿಶೇಷ ಆದ್ಯತೆ ನೀಡಿದ್ದು, ಕೋಟಿ ರೂ. ಅನುದಾನವನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ನೀಡಿದೆ.
>
> – **ಶಿವರಾಜ್ ಎಸ್. ತಂಗಡಗಿ**, ಸಚಿವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕಲಾಮಂದಿರದ ದಸರಾ ಕಾರ್ಯಕ್ರಮದಲ್ಲಿ ಚೆನ್ನೈ ಹೊರನಾಡು ಕನ್ನಡಿಗರಿಂದ ನೃತ್ಯ ರೂಪಕ

ಮೈಸೂರು,ಸೆ.23(ಜಿಎ)–ಮೈಸೂರು ದಸರಾ ಮಹೋತ್ಸವದ ಸಾಂಸ್ಕೃತಿಕ ಉಪಸಮಿತಿ ವತಿಯಿಂದ ಕಲಾಮಂದಿರದಲ್ಲಿ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಚೆನ್ನೈ ಹೊರನಾಡ ಕನ್ನಡಿಗರು ಸಂಸ್ಥೆ ವತಿಯಿಂದ ನೃತ್ಯ ರೂಪಕ ಪ್ರಸ್ತುತಪಡಿಸಲಿದ್ದಾರೆ ಎಂದು ಸಂಚಾಲಕಿ ದಾಕ್ಷಾಯಿಣಿ ಎಸ್. ದಳವಾಯಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಲವಾರು ವರ್ಷಗಳಿಂದ ಚೆನ್ನೈನಲ್ಲಿ ನೆಲೆಸಿರುವ ಕನ್ನಡಿಗರು ಕಟ್ಟಿರುವ ಸಂಘವೇ ಚೆನ್ನೈ ಹೊರನಾಡ ಕನ್ನಡಿಗರು ಸಂಸ್ಥೆಯಾಗಿದ್ದು, ನಾವುಗಳು ಈಗಾಗಲೇ ಚೆನ್ನೈನಲ್ಲಿ ಸಾಕಷ್ಟು ಕಾರ್ಯಕ್ರಮ ನಡೆಸಲಾಗಿದೆ, ದಸರಾದಲ್ಲಿ ಪ್ರದರ್ಶನ ನೀಡಲು ಅರ್ಜಿ ಸಲ್ಲಿಸಿದ ನಂತರ ಅಧಿಕಾರಿಗಳು ಅವಕಾಶ ನೀಡಿದ್ದಾರೆ.

ಚೆನ್ನೈ ಹೊರನಾಡ ಕನ್ನಡಿಗರು ಸಂಸ್ಥೆ ವತಿಯಿಂದ ಸೆ.24 ರಂದು ರಾತ್ರಿ 7.30 ರಿಂದ 8.30ರವರೆಗೆ ನಾಲ್ವಡಿ ಅಮರ ಕೊಡುಗೆ, ಆಧುನಿಕ ಮಹಿಳೆ ತನ್ನ ಜೀವನದಲ್ಲಿ ಹೇಗೆ ನವದುರ್ಗೆಯ ರೀತಿ ಜವಾಬ್ದಾರಿ ನಿಭಾಯಿಸುತ್ತಾಳೆ ಮೊದಲಾದ ವಿಷಯದ ನೃತ್ಯ ರೂಪಕ ಕಾರ್ಯಕ್ರಮ ಇದಾಗಿದೆ. ಇದಕ್ಕಾಗಿ ಸುಮಾರು 6 ತಿಂಗಳು ಕಠಿಣಾಭ್ಯಾಸ ಮಾಡಲಾಗಿದೆ. ಜನತೆ ಹೆಚ್ಚಿನ ಸಂಖ್ಯೆಯಲ್ಲಿ ವೀಕ್ಷಿಸಿ ಉತ್ತೇಜನ ನೀಡಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ವಿನಯ, ರಾಮ್‌ಪ್ರಸಾದ್ ಉಪಸ್ಥಿತರಿದ್ದರು.

ಅರ್ಜುನ್ ಜನ್ಯಗೆ ಸ್ವಾಗತ



ಮೈಸೂರಿನ ಯುವ ದಸರಾದಲ್ಲಿ ಕಾರ್ಯಕ್ರಮ ನೀಡಲು ಮೈಸೂರಿಗೆ ಆಗಮಿಸಿದ ಕನ್ನಡದ ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರನ್ನು ಎಂ.ಜಿ.ರಸ್ತೆಯಲ್ಲಿರುವ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಕಾಂಗ್ರೆಸ್ ಮುಖಂಡರಾದ ಜಿ.ಶ್ರೀನಾಥ್ ಬಾಬು, ಮಾಜಿ ಕಾರ್ಪೋರೇಟರ್ ಕೆ.ವಿ.ಮಲ್ಲೇಶ್, ಜಿ.ರಾಘವೇಂದ್ರ ,ವಿಕ್ರಂ ಅಯ್ಯಂಗಾರ್ ,ಮಹಾನ್ ಶ್ರೇಯಸ್,ಹರೀಶ್ ನಾಯ್ಡು ಅವರುಗಳು ಹೂಗುಚ್ಛ ನೀಡಿ ಸ್ವಾಗತಿಸಿದರು.

ಚೊಂಡೆಯಿಂದ ತಯಾರಿಸಿರುವ ವಸ್ತುಗಳು; ಮಣ್ಣಿನಲ್ಲಿ ಮಾಡಿದ ಅಲಂಕಾರಿಕ ಪದಾರ್ಥಗಳು, ಬಾಯಲ್ಲಿ ನೀರೂರಿಸುವ ತಿಂಡಿ–ತಿನಿಸುಗಳು!

ಮಹಿಳಾ ದಸರಾದಲ್ಲಿ ವಿಶಿಷ್ಟ ವಸ್ತುಗಳಿಗೆ ಭಾರಿ ಬೇಡಿಕೆ

ಮೈಸೂರು, ಸೆ.23(ಬಿಎಲ್‌ಯು)– ಮಣ್ಣಿನಿಂದ ಮಾಡಿರುವ ಅಲಂಕಾರಿಕ ವಸ್ತುಗಳು, ಚೊಂಡಿನಿಂದ ತಯಾರಿಸಿರುವ ಗೃಹ ಬಳಕೆ ಪದಾರ್ಥಗಳು, ಬಾಯಲ್ಲಿ ನೀರೂರಿಸುವ ಉಪ್ಪಿನಕಾಯಿ, ಹಪ್ಪಳ, ಸಂಡಿಗೆ, ಕೈ ಮಗ್ಗದ ರೇಷ್ಮೆ ಸೀರೆಗಳು. ಹೀಗೆ ಒಂದಕ್ಕಿಂತ ಒಂದು ಭಿನ್ನ ಎಂಬಂತೆ ಮೈಸೂರಿನ ಮಹಿಳಾ ದಸರಾದಲ್ಲಿ ಆಕರ್ಷಕ ವಸ್ತುಗಳಿವು.

ನಗರದ ಜೆ.ಕೆ.ಮೈದಾನದಲ್ಲಿ ಆರಂಭವಾಗಿರುವ ಮಹಿಳಾ ದಸರಾದಲ್ಲಿ ವಿಶಿಷ್ಟರೀತಿಯ ವಸ್ತುಗಳು ಮಾರಾಟವಾಗುತ್ತಿವೆ. ಮಹಿಳಾ ಉದ್ಯಮಿಗಳು ಹಾಗೂ ಮಹಿಳಾ ಸ್ವಸಹಾಯ ಸಂಘಗಳು ತಮ್ಮ ವಸ್ತುಗಳನ್ನು ಮಾರಾಟ ಮಾಡಲು ಇಲ್ಲಿ ಅವಕಾಶ ಕಲ್ಪಿಸಲಾಗಿದೆ.

ಯಾವುದೇ ರೀತಿಯ ಬಾಡಿಗೆ ಪಡೆಯದೆ ಉಚಿತವಾಗಿ ಮಳಿಗೆಗಳನ್ನು ನೀಡಲಾಗಿದೆ. ಮೊದಲ ದಿನವೇ ಶೇಕಡ 80 ರಷ್ಟು ಮಳಿಗೆಗಳು ಭರ್ತಿಯಾಗಿವೆ. ಎಲ್ಲಾ ಮಳಿಗೆಗಳಲ್ಲಿ ನಾನಾ ಪದಾರ್ಥಗಳ ಮಾರಾಟ ಜೋರಾಗಿದೆ. ಯಾವುದನ್ನು ಖರೀದಿ ಮಾಡಬೇಕು, ಯಾವುದನ್ನು ಬಿಡಬೇಕು ಎಂಬ ಆಯ್ಕೆ ಗೊಂದಲವಾಗುವಷ್ಟು ವಿಶಿಷ್ಟ ವಸ್ತುಗಳಿವೆ.

ಮೈಸೂರು ಮಾತ್ರವಲ್ಲದೆ ಕರ್ನಾಟಕದ ಹಲವು ಜಿಲ್ಲೆಗಳ ಮಹಿಳಾ ಉದ್ಯಮಿಗಳು ಹಾಗೂ ಮಹಿಳಾ ಸ್ವಸಹಾಯ ಸಂಘಗಳು ತಮ್ಮ ವಸ್ತುಗಳನ್ನು ಮಾರಾಟ ಮಾಡಲು ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಸಾಂಪ್ರದಾಯಿಕ ಹಾಗೂ ಆಧುನಿಕ ಶೈಲಿಯ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ. ಅದರೆ ಸಾಂಪ್ರದಾಯಿಕ ವಸ್ತುಗಳಿಗೆ ಬೇಡಿಕೆ ಹೆಚ್ಚಿದೆ.



ಮೈಸೂರಿನ ಜೆ.ಕೆ.ಮೈದಾನದಲ್ಲಿ ಮಹಿಳಾ ದಸರಾದಲ್ಲಿ ತೆರೆದಿರುವ ನಾನಾ ವಿಶಿಷ್ಟ ವಸ್ತುಗಳ ಮಳಿಗೆಗಳು.

ಗದಗ ಜಿಲ್ಲೆಯಲ್ಲಿ ನೀರಿನಲ್ಲಿ ಬೆಳೆವ ಚೊಂಡೆಯಿಂದ ಮಹಿಳಾ ಉದ್ಯಮಿಯೊಬ್ಬರು ತಯಾರಿಸಿರುವ ಹಲವು ವಸ್ತುಗಳನ್ನು ಮಹಿಳಾ ದಸರಾದಲ್ಲಿ ಮಾರಾಟ ಮಾಡಲಾಗುತ್ತಿದೆ. ಬ್ಯಾಗ್, ಬಾಸ್ಕೆಟ್, ತೋರಣ, ಎತ್ತಿನ ಮುಖ ಸೇರಿದಂತೆ ಮನೆಯ ಅಲಂಕಾರಿ ವಸ್ತುಗಳು ಮಾರಾಟಕ್ಕಿವೆ.

ಬೆಳ್ಳುಳ್ಳಿ ಹಪ್ಪಳ, ಈರುಳ್ಳಿ ಹಪ್ಪಳ, ರೆಡ್ ಚಿಲ್ಲಿ ಹಪ್ಪಳ, ಜೀರಾ ಹಪ್ಪಳ ಸೇರಿದಂತೆ ವಿವಿಧ ರೀತಿಯ ತಿಂಡಿ ತಿನಿಸುಗಳನ್ನು ಮಾರಾಟ ಮಾಡಲಾಗುತ್ತಿದೆ. ಅಲ್ಲದೆ ಬಾಯಲ್ಲಿ ನೀರೂರಿಸುವ ಹಲವು ರೀತಿಯ ಉಪ್ಪಿನಕಾಯಿ ಲಭ್ಯವಿದೆ.

ಒನ್ ಗ್ರಾಂ ಗೋಲ್ಡ್ ಕವರಿಂಗ್ ಸರ, ಓಲೆ, ನೆಕ್ಲೇಸ್ ಸೇರಿದಂತೆ ಇತರೆ ಆಭರಣಗಳ ಮಾರಾಟವೂ ಇದ್ದು, ಇಂತಹ ಏಳೆಂಟು ಮಳಿಗೆಗಳು, ಒಂದಕ್ಕಿಂತ ಒಂದು ಭಿನ್ನವಾಗಿವೆ.

ಕೈಗಾರಿಕೆಗಳಲ್ಲಿ ತಯಾರಾಗುವ ರೇಷ್ಮೆ ಹಾಗೂ ಕಾಟನ್ ಸೀರೆಗಳು ಎಲ್ಲಾ ಕಡೆ ಸರ್ವೇಸಾಮಾನ್ಯವಾಗಿ ದೊರೆಯುತ್ತದೆ. ಆದರೆ ಮಹಿಳಾ ಉದ್ಯಮಿಯೊಬ್ಬರು ಕೈಮಗ್ಗದಿಂದ ತಯಾರಿಸಿರುವ ರೇಷ್ಮೆ ಹಾಗೂ ಕಾಟನ್ ಸೀರೆಗಳನ್ನು ಮಾರಾಟ ಮಾಡಲಾಗುತ್ತಿದೆ. ಗುಡಿ ಕೈಗಾರಿಕೆಗಳಲ್ಲಿ ತಯಾರಿಸಿರುವ ಮಕ್ಕಳ ಆಟಿಕೆಗಳು, ಮನೆಗೆ ಅಗತ್ಯವಾಗಿ ಬೇಕಾಗಿರುವ ವಸ್ತುಗಳು, ಕೈಬರಹದಿಂದ ರೂಪ ಕೊಟ್ಟಿರುವ ಪೈಂಟಿಂಗ್‌ಗಳನ್ನು ಮಾರಾಟಕ್ಕಿಟ್ಟಿದ್ದಾರೆ.

ಗುಡಿ ಕೈಗಾರಿಕೆಗಳಲ್ಲಿ ತಯಾರಿಸಿರುವ ಕರಕುಶಲ ವಸ್ತುಗಳು, ನೈಸರ್ಗಿಕ ಕೃಷಿಯಿಂದ ಬೆಳೆದಿರುವ ಆಹಾರ ಪದಾರ್ಥಗಳು, ವಿವಿಧ ಮಾದರಿಯ ಗುಲ್ಕಂದ್‌ಗಳನ್ನು ಮಾರಾಟ ಮಾಡಲಾಗುತ್ತಿದೆ.

ಮಹಿಳಾ ದಸರಾದಲ್ಲಿ ಇನ್ನು ಕೆಲವು ಮಳಿಗೆಗಳು ಖಾಲಿ ಇದ್ದು, ಮಳೆ ಇಲ್ಲದಿದ್ದರೆ ಜನರು ಹೆಚ್ಚಾಗಿ ಆಗಮಿಸಿ ನಮ್ಮ ವಸ್ತುಗಳನ್ನು ಖರೀದಿಸುತ್ತಾರೆ ಎಂದು ಮಹಿಳಾ ಉದ್ಯಮಿಯೊಬ್ಬರು ವಿಶ್ವಾಸ ವ್ಯಕ್ತಪಡಿಸಿದರು.

ಜಾನಪದ ಕಲೆ ಶ್ರೀಮಂತಗೊಳಿಸಿದ ಮಕ್ಕಳ ಕಲಾಥಾನ್

ವಿವಿಧ ವೇಷಭೂಷಣ ತೊಟ್ಟು ಅತ್ಯಾಕರ್ಷಿಸಿದ ಚಿಣ್ಣರು

ಮೈಸೂರು, ಸೆ.23(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಮಕ್ಕಳನ್ನು ಭಾಗಿ ಮಾಡಿಕೊಂಡು ಕಲೆಯನ್ನು ಮತ್ತಷ್ಟು ಶ್ರೀಮಂತಗೊಳಿಸಲು ಇಂದು ಮಕ್ಕಳ ಕಲಾಥಾನ್ ನಡೆಸಲಾಯಿತು.

ಮೈಸೂರು ಅರಮನೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಆರಂಭವಾದ ಮಕ್ಕಳ ಕಲಾಥಾನ್‌ನಲ್ಲಿ ಮೈಸೂರು ನಗರ ಹಾಗೂ ಜಿಲ್ಲೆಯ ಸಾವಿರಾರು ಮಕ್ಕಳು ಭಾಗಿಯಾಗಿದ್ದರು.

ವರ್ಣರಂಜಿತ ಮಕ್ಕಳ ಕಲಾಥಾನ್‌ಗೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸೇರಿದಂತೆ ಹಲವು ಗಣ್ಯರು ಭಾಗಿಯಾಗಿದ್ದರು.

ಜಾನಪದ ಕಲಾವಂತಿಕೆ ಬಿಂಬಿಸುವ ವೇಷಭೂಷಣವನ್ನು ಧರಿಸಿದ್ದ ಮಕ್ಕಳು ನೋಡುಗರನ್ನು ಅತ್ಯಾಕರ್ಷಿಸಿದರು. ಮೈಸೂರು ಜಿಲ್ಲೆಯ ಹಲವು ತಾಲೂಕು ಮಕ್ಕಳು ವಿಭಿನ್ನ ಜಾನಪದ ಕಲೆಯನ್ನು ಬಿಂಬಿಸಿದರು. ಹೆಚ್.ಡಿ.ಕೋಟೆಯ ಸೋಲಿಗರ ಹಾಡಿ ಮಕ್ಕಳ ಕುಣಿತ, ಹುಣಸೂರಿನ ಮಕ್ಕಳ ಪೂಜಾ ಕುಣಿತ, ಕೆ.ಆರ್.ನಗರದ ಮಕ್ಕಳ ಹುಲಿವೇಷ, ಮೈಸೂರು ಉತ್ತರ ತಾಲೂಕಿನ ಮಕ್ಕಳ ಸೂಫಿ ನೃತ್ಯ, ಮೈಸೂರು ತಾಲೂಕಿನಿಂದ ವೀರಗಾಸೆ, ಮೈಸೂರು ದಕ್ಷಿಣದಿಂದ ಯಕ್ಷಗಾನ, ನಂಜನಗೂಡಿನಿಂದ ಗಾರುಡಿ ಗೊಂಬೆ, ಪಿರಿಯಾಪಟ್ಟಣದಿಂದ ಡೊಳ್ಳು ಕುಣಿತ, ತಿ.ನರಸೀಪುರದಿಂದ ಚರ್ಮವಾದ್ಯ ಪ್ರದರ್ಶಿಸಿದರು.



ಮೈಸೂರು ಅರಮನೆಯ ಆಂಜನೇಯ ಸ್ವಾಮಿ ದೇವಸ್ಥಾನದ ಮುಂದೆ ಆರಂಭವಾದ ಮಕ್ಕಳ ಕಲಾಥಾನ್‌ನಲ್ಲಿ ಕುಣಿದು ಕುಪ್ಪಳಿಸಿದ ಚಿಣ್ಣರು.

ಒನಕೆ ಓಬವ್ವ, ಝಾನ್ಸಿ ಲಕ್ಷ್ಮಿ ಬಾಯಿ ವೇಷ ತೊಟ್ಟ ಮಕ್ಕಳು ಗಮನ ಸೆಳೆದರು. ಈ ವೇಳೆ ಸ್ಕೌಟ್ಸ್ ಅಂಡ್ ಗೈಡ್ಸ್ ಮಕ್ಕಳು ಶಿಸ್ತುಬದ್ಧರಾಗಿ ಸಾಗಿದರು.

ನಾಡದೇವತೆ ತಾಯಿ ಚಾಮುಂಡೇಶ್ವರಿ ಭಾವಚಿತ್ರವಿರುವ ರಥ ಮೆರವಣಿಗೆ ಹಿಂದೆ ಸಾಗಿತು. ಬಾಲ ವಿಜ್ಞಾನಿ ಆರ್.ರಕ್ಷಿತ ಸೇರಿದಂತೆ ಶೈಕ್ಷಣಿಕವಾಗಿ ಸಾಧನೆ ಮಾಡಿರುವ ಕೆಲವು ವಿದ್ಯಾರ್ಥಿಗಳು ರಥದಲ್ಲಿ ಸಾಗಿದರು.

ಅರಮನೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಹೊರಟ ಮೆರವಣಿಗೆ ಚಾಮರಾಜ ಒಡೆಯರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಕೆ.ಆರ್.ವೃತ್ತ, ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತ, ವಿನೋಬಾ ರಸ್ತೆ ಮೂಲಕ ಕಲಾಮಂದಿರ ತಲುಪಿತು.

ಅ.2ರಂದು ಬೆಳಗ್ಗೆ 6ರಿಂದ ರಾತ್ರಿ 12ರವರೆಗೆ ಮಾರ್ಗ ಬದಲಾವಣೆ, ಏಕಮುಖ ವಾಹನ ಸಂಚಾರ ವ್ಯವಸ್ಥೆ

ನಾಡಪ್ರಭು ಕೆಂಪೇಗೌಡ ವೃತ್ತದಿಂದ ಹಳೆ ಮೈಸೂರು–ಬೆಂಗಳೂರು ರಸ್ತೆ ಮೂಲಕ ನಗರಕ್ಕೆ ಆಗಮಿಸುವ ವಾಹನಗಳಿಗೆ ಮಾರ್ಗ: ನಾಡಪ್ರಭು ಕೆಂಪೇಗೌಡ ವೃತ್ತ– ಓಲ್ಡ್ ಟೋಲ್ ಗೇಟ್– ಹಳೆ ಬೆಂಗಳೂರು–ಮೈಸೂರು ರಸ್ತೆ ಲಿಂಕ್ ರಸ್ತೆ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಮೌಲಾನಾ ಅಬ್ದುಲ್ ಕಲಾಂ ಆಜಾದ್ ವೃತ್ತ–ರಾಜೇಂದ್ರನಗರ ಮುಖ್ಯ ರಸ್ತೆ ಡಾ.ರಾಜಕುಮಾರ್ ವೃತ್ತದವರೆಗೆ (ಫೌಂಟೆನ್ ವೃತ್ತ) ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಹಾಗೂ ಸದರಿ ಮಾರ್ಗದಲ್ಲಿ ವಿರುದ್ಧ ದಿಕ್ಕಿನಲ್ಲಿ ಬರುವ ಎಲ್ಲಾ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ನಗರದಿಂದ ಹಳೆ ಮೈಸೂರು–ಬೆಂಗಳೂರು ರಸ್ತೆ– ನಾಡಪ್ರಭು ಕೆಂಪೇಗೌಡ ವೃತ್ತದ ಮೂಲಕ ನಗರದಿಂದ ನಿರ್ಗಮಿಸುವ ವಾಹನಗಳಿಗೆ ಮಾರ್ಗ: ಡಾ.ರಾಜಕುಮಾರ್ ವೃತ್ತದಿಂದ (ಫೌಂಟೆನ್ ವೃತ್ತ) ಬೆಂಗಳೂರು ರಸ್ತೆ ಕಡೆಗೆ ಸಾಗುವ ವಾಹನಗಳು ಟಿಪ್ಪು ವೃತ್ತದಲ್ಲಿ ಬಲಕ್ಕೆ ತಿರುಗಿ (ಎಲ್.ಐ.ಸಿ ವೃತ್ತದ ಕಡೆಗೆ ಸಂಚರಿಸುವಂತಿಲ್ಲ) ಹಳೆ ಮೈಸೂರು–ಬೆಂಗಳೂರು ರಸ್ತೆಯ ಲಿಂಕ್ ರಸ್ತೆ ಜಂಕ್ಷನ್ ಮುಖಾಂತರ ನಾಡಪ್ರಭು ಕೆಂಪೇಗೌಡ ವೃತ್ತದ ಕಡೆಗೆ ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಈ ಮಾರ್ಗದಲ್ಲಿ ವಿರುದ್ಧ ದಿಕ್ಕಿನಲ್ಲಿ ಬರುವ ಎಲ್ಲಾ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಲಿಂಕ್ ರಸ್ತೆ ಜಂಕ್ಷನ್‌ನಿಂದ ಟಿ.ಎನ್.ನರಸಿಂಹಮೂರ್ತಿ ವೃತ್ತ (ಎಲ್.ಐ.ಸಿ ವೃತ್ತ) ಕಡೆಗೆ ಸಂಚಾರ ನಿರ್ಬಂಧ: ಟಿ.ಎನ್.ನರಸಿಂಹಮೂರ್ತಿ ವೃತ್ತದಿಂದ (ಎಲ್.ಐ.ಸಿ ವೃತ್ತ) ಹಳೆ ಮೈಸೂರು–ಬೆಂಗಳೂರು ರಸ್ತೆಯ ಲಿಂಕ್ ರಸ್ತೆ ಜಂಕ್ಷನ್ ಕಡೆಗೆ (ಪೂರ್ವದಿಂದ ಪಶ್ಚಿಮಕ್ಕೆ) ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ. ಟಿ.ಎನ್.ನರಸಿಂಹಮೂರ್ತಿ ವೃತ್ತ (ಎಲ್.ಐ.ಸಿ ವೃತ್ತ) ದಿಂದ ಲಿಂಕ್ ರಸ್ತೆಯಲ್ಲಿ (ಪಶ್ಚಿಮದಿಂದ ಪೂರ್ವಕ್ಕೆ) ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಲಾಗಿದೆ.



ವಾಹನಗಳ ಸಂಚಾರ ನಿರ್ಬಂಧಿಸಿರುವ ರಸ್ತೆಗಳು

ಜಂಬೂಸವಾರಿ ಮೆರವಣಿಗೆಯು ಸಾಗುವ ಮಾರ್ಗವಾದ ಅರಮನೆಯ ಬಲರಾಮ ದ್ವಾರ, ಆಲ್ಬರ್ಟ್ ವಿಕ್ಟರ್ ರಸ್ತೆ, ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ ಆಯುರ್ವೇದಿಕ್ ವೃತ್ತ, ಹೈವೇ ವೃತ್ತ, ನೆಲ್ಸನ್ ಮಂಡೇಲಾ ರಸ್ತೆ, ಬನ್ನಿಮಂಟಪದ ಮುಖ್ಯದ್ವಾರದವರೆಗೆ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಬನ್ನಿಮಂಟಪ ಕವಾಯಿತು ಮೈದಾನದ ಉತ್ತರ ಭಾಗದ ರಸ್ತೆಯಲ್ಲಿ ಹನುಮಂತನಗರ 3ನೇ ಮುಖ್ಯ ರಸ್ತೆ ಜಂಕ್ಷನ್‌ನಿಂದ ನ್ಯೂ ಬೆಂಗಳೂರು–ಮೈಸೂರು ರಸ್ತೆಯಲ್ಲಿ ಓಲ್ಡ್ ಟೋಲ್‌ಗೇಟ್ ಜಂಕ್ಷನ್‌ವರೆಗೆ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ನಂಜನಗೂಡು ರಸ್ತೆ, ಟಿ.ನರಸೀಪುರ ರಸ್ತೆ, ಬನ್ನೂರು ರಸ್ತೆ, ಬೆಂಗಳೂರು ರಸ್ತೆ, ಕೆಆರ್‌ಎಸ್ ರಸ್ತೆ, ಹುಣಸೂರು ರಸ್ತೆ, ಬೋಗಾದಿ ರಸ್ತೆ ಮತ್ತು ಹೆಚ್.ಡಿ.ಕೋಟೆ ರಸ್ತೆ ಮೂಲಕ ಮೈಸೂರು ನಗರಕ್ಕೆ ಆಗಮಿಸುವ ಭಾರಿ ಮತ್ತು ಲಘು ಸರಕು ಸಾಗಾಣಿಕೆ ವಾಹನಗಳು ನಗರಕ್ಕೆ ಪ್ರವೇಶಿಸದಂತೆ ನಿರ್ಬಂಧಿಸಲಾಗಿದೆ. ಹಾರ್ಡಿಂಜ್ ವೃತ್ತದಿಂದ ಕೆ.ಆರ್ ವೃತ್ತದವರೆಗಿನ ಆಲ್ಬರ್ಟ್ ವಿಕ್ಟರ್ ರಸ್ತೆಯಲ್ಲಿ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಮೈಸೂರು ಮಿತ್ರ

ಅತ್ತಹಳ್ಳಿಯಲ್ಲಿ ಡೇರಿ ಕಟ್ಟಡ, ಬಿಎಂಸಿ ಕೇಂದ್ರ ನಿರ್ಮಾಣ

ಕಾಮಗಾರಿಗೆ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಭೂಮಿ ಪೂಜೆ

ತಿ.ನರಸೀಪುರ, ಸೆ.23– ಅತ್ತಹಳ್ಳಿ ಗ್ರಾಮದ ಡೇರಿ ಕಟ್ಟಡ ಶಿಥಿಲಗೊಂಡಿದ್ದು, ನೂತನ ಕಟ್ಟಡ ನಿರ್ಮಿಸುವ ಜೊತೆಗೆ ಬಿಎಂಸಿ ಕೇಂದ್ರ ತೆರೆಯುವ ಉದ್ದೇಶ ಹೊಂದಲಾಗಿದೆ ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜ್ ತಿಳಿಸಿದರು.

ತಾಲೂಕಿನ ಅತ್ತಹಳ್ಳಿ ಡೇರಿ ಆವರಣದಲ್ಲಿ ನಿರ್ಮಿಸುತ್ತಿರುವ ನೂತನ ಕಟ್ಟಡ ಕಾಮಗಾರಿಗೆ ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪ ಅವರೊಂದಿಗೆ ಭೂಮಿ ಪೂಜೆ ನೆರವೇರಿಸಿ, ಬಳಿಕ ನಡೆದ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅವರು ಮಾತನಾಡಿದರು.

ಗ್ರಾಮದ ಡೇರಿ ಕಟ್ಟಡ ಶಿಥಿಲಗೊಂಡಿದ್ದ ಹಿನ್ನೆಲೆಯಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡುವಂತೆ ಒತ್ತಾಯ ಕೇಳಿ ಬಂದಿತ್ತು. ಹೀಗಾಗಿ ನೂತನ ಕಟ್ಟಡಕ್ಕೆ ಮೈಮುಲ್‌ನಿಂದ 10.50 ಲಕ್ಷ, ಕೆಎಂಎಫ್‌ನಿಂದ 4.5 ಲಕ್ಷ ಅನುದಾನ ನೀಡಲಾಗಿದ್ದು, ಸುಂದರ ಕಟ್ಟಡ ನಿರ್ಮಾಣವಾಗಲಿದೆ. ಸಚಿವರು, ಸಂಸದರಿಗೆ ಅನುದಾನ ನೀಡಲು ಮನವಿ ಮಾಡಲಾಗಿದೆ. ಒಂದು ವೇಳೆ ಅನುದಾನ ಸಾಲದಿದ್ದರೇ ಕಟ್ಟಡ ಪೂರ್ಣಗೊಳ್ಳಲು ಬೇಕಿರುವ



ನೂತನ ಡೇರಿ ಕಟ್ಟಡಕ್ಕೆ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಭೂಮಿ ಪೂಜೆ ನೆರವೇರಿಸಿದರು.

ಅನುದಾನವನ್ನು ಒಕ್ಕೂಟದಿಂದ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತದೆ. ಡೇರಿ ಕಟ್ಟಡದ ಜೊತೆಗೆ ಬಿಎಂಸಿ ಕೇಂದ್ರವನ್ನು ಮಾಡುವ ಉದ್ದೇಶ ಹೊಂದಲಾಗಿದ್ದು, ಇದರಿಂದ ಡೇರಿಗೆ ಬರುವ ಹಾಲಿನ ಗುಣಮಟ್ಟ ಉತ್ತಮವಾಗಿರುತ್ತದೆ ಎಂದರು.

ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ ಮಾತನಾಡಿ, ಗ್ರಾಮದಲ್ಲಿ ನೂತನ ಡೇರಿ ಕಟ್ಟಡಕ್ಕೆ ಭೂಮಿ ಪೂಜೆಯಾಗಿದೆ. ಈಗ ಕಾರ್ಯ ನಿರ್ವಹಿಸುತ್ತಿರುವ ಕಟ್ಟಡ ಶಿಥಿಲವಾಗಿದೆ. ಅದೂ ಕೂಡ ವಿಎಸ್‌ಎಸ್‌ಎನ್‌ಗೆ ಸೇರಿದ ಜಾಗವಾಗಿದೆ. ನೂತನ ಕಟ್ಟಡಕ್ಕೆ ಚೆಲುವರಾಜು 10 ಲಕ್ಷ ರೂ. ಅನುದಾನ ಕೊಟ್ಟಿದ್ದಾರೆ. ಹಾಗೆಯೇ ಚಾಮನಹಳ್ಳಿ ಡೇರಿ ಕಟ್ಟಡಕ್ಕೂ 10 ಲಕ್ಷ ಅನುದಾನ ಕೇಳಿದ್ದೇನೆ. ಮುಂದಿನ ಕೋಟಾದಲ್ಲಿ ಕೊಡುವ ಭರವಸೆ ನೀಡಿದ್ದಾರೆ ಎಂದರು.

ಮೈಮುಲ್ ಮಾಜಿ ಅಧ್ಯಕ್ಷ ಓಂಪ್ರಕಾಶ್ ಮಾತನಾಡಿ, ಮೈಸೂರು ಜಿಲ್ಲೆಯಲ್ಲಿ 1200ಕ್ಕೂ ಹೆಚ್ಚು ಮಿಲ್ಕ್ ಸೊಸೈಟಿಗಳಿದ್ದು, ಬೆರಳೆಣಿಕೆಯಷ್ಟು ಸಂಘ ಮಾತ್ರ ನಷ್ಟದಲ್ಲಿವೆ. ಸಂಘದಲ್ಲಿ ಪ್ರಾಮಾಣಿಕ ಕಾರ್ಯದರ್ಶಿಗಳಿದ್ದರೆ ಸಂಘ ಉತ್ತಮವಾಗಿ ನಡೆಯುತ್ತದೆ. ಹಾಗಾಗಿ ಇಲ್ಲಿ ಬಿಎಂಸಿ ಕೇಂದ್ರ ಮೊದಲೇ ಆಗಬೇಕಿತ್ತು. ಸುನೀತಾ ಮೇಡಂ ಅವರು ಸಂಸದ ಸುನೀಲ್ ಬೋಸ್ ಅವರಿಂದ ಅನುದಾನ ಕೊಡಿಸುತ್ತಾರೆ. ಸುಂದರ ಕಟ್ಟಡ ನಿರ್ಮಿಸೋಣ. ಎಲ್ಲಾ ರೈತರು ಡೇರಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡಿ, ಕ್ವಾಲಿಟಿ ಬರಲೆಂದು ಕಲಬೆರಕೆ ಮಾಡಬೇಡಿ ಎಂದರು.

ಇದೇ ವೇಳೆ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ಹಾಲು ಉತ್ಪಾದಕರನ್ನು ಸನ್ಮಾನಿಸಲಾಯಿತು. ಸಭೆ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಎ.ಎನ್. ಗೋಪಿಕೃಷ್ಣ ವಹಿಸಿದ್ದರು. ಮೈಮುಲ್ ತಾಲೂಕು ಮೇಲ್ವಿಚಾರಕ ಆರ್.ಪ್ರಮೋದ್, ಸಂಘದ ಉಪಾಧ್ಯಕ್ಷ ಕೆ.ಮಹೇಶ್, ನಿರ್ದೇಶಕರಾದ ಎ.ಎಸ್. ಕೃಷ್ಣೇಗೌಡ, ಜವನಯ್ಯ, ಪ್ರದೀಪ್, ಪಿ.ಮಹೇಶ್, ಮಾದೇಗೌಡ, ಶ್ರೀಧರ್, ಶಂಭಯ್ಯ, ಭಾಗ್ಯಮ್ಮ, ಶಿವಲಿಂಗಯ್ಯ, ಸಂಘದ ಕಾರ್ಯದರ್ಶಿ ಕೆ.ಲೋಕೇಶ್, ಗ್ರಾಪಂ ಅಧ್ಯಕ್ಷ ಮಹೇಶ್, ಹಾಲು ಪರೀಕ್ಷಕ ಮಹದೇವ, ಸಹಾಯಕ ಭುವನ್ ಸೇರಿದಂತೆ ಗ್ರಾಮಸ್ಥರು, ಸಂಘದ ಸದಸ್ಯರು ಹಾಜರಿದ್ದರು.

ಜಾತಿ ಸಮೀಕ್ಷೆಯಲ್ಲಿ 'ನಾಯಕ' ಎಂದು ನಮೂದಿಸಿ

ತಾಲೂಕು ನಾಯಕ ಸಂಘದ ಅಧ್ಯಕ್ಷ ಎಂ.ಸಿ.ದೊಡ್ಡನಾಯಕ



ತಾಲೂಕು ನಾಯಕ ಸಂಘದ ಅಧ್ಯಕ್ಷ ಎಂ.ಸಿ.ದೊಡ್ಡನಾಯಕ ಮಾತನಾಡಿದರು.

ಹೆಚ್.ಡಿ.ಕೋಟೆ, ಸೆ.23– ರಾಜ್ಯಾದ್ಯಂತ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಜಾತಿ ಸಮೀಕ್ಷೆಯ ಜಾತಿ ಕಾಲಂನಲ್ಲಿ 'ನಾಯಕ' ಎಂದು ನಮೂದಿಸುವಂತೆ ನಾಯಕ ಸಮುದಾಯದವರಿಗೆ ತಾಲೂಕು ನಾಯಕ ಸಂಘದ ಅಧ್ಯಕ್ಷ ಎಂ.ಸಿ.ದೊಡ್ಡನಾಯಕ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಯಕ ಸಮುದಾಯದವರು ಸಮೀಕ್ಷೆಯಲ್ಲಿ ಜಾತಿ ಕಾಲಂ ನಂಬರ್ 9 ಹಾಗೂ ಕೋಡ್ ನಂ.ಸಿ–38–2ನಲ್ಲಿ ಜಾತಿ ಹೆಸರನ್ನು ನಾಯಕ ಎಂದು ನಮೂದಿಸಿ ಎಂದರು.

ಚಿಕ್ಕಮಾದು ಅಭಿಮಾನಿ ಬಳಗದ ಅಧ್ಯಕ್ಷ ಜಿನ್ನಹಳ್ಳಿ ರಾಜನಾಯಕ ಮಾತನಾಡಿ, ಕೋಟೆ, ಸರಗೂರು ತಾಲೂಕಿನಲ್ಲಿ ಸಮುದಾಯದ 20 ಸಾವಿರ ಕುಟುಂಬಗಳಿದ್ದು, 60 ಸಾವಿರಕ್ಕೂ ಹೆಚ್ಚು ನಾಯಕ ಸಮುದಾಯದವರಿದ್ದಾರೆ. ಕುರುಬ ಸಮಾಜವನ್ನು ಎಸ್‌ಟಿಗೆ ಸೇರಿಸುವ ಹುನ್ನಾರ ನಡೆಯುತ್ತಿದ್ದು, ಅದು ಯಾವುದೇ ಕಾರಣಕ್ಕೂ ಆಗಬಾರದು. ಕುರುಬ ಸಮುದಾಯವನ್ನು ನಮ್ಮಲ್ಲಿಗೆ ಸೇರಿಸಿದರೆ ಮೀಸಲು ಹಂಚಿಕೆಯಲ್ಲಿ ಅನ್ಯಾಯವಾಗಲಿದೆ ಎಂದರು.

ಗೋಷ್ಠಿಯಲ್ಲಿ ಉಪಾಧ್ಯಕ್ಷರಾದ ಜಯಪ್ರಕಾಶ್, ಮಿಲ್ ನಾಗರಾಜು, ಪ್ರಧಾನ ಕಾರ್ಯದರ್ಶಿ ಚಾಕಳ್ಳಿ ಕೃಷ್ಣ, ಕಾರ್ಯದರ್ಶಿ ನಾಗನಾಯಕ, ಗೌರವಾಧ್ಯಕ್ಷ ಮರಿತಿಮ್ಮ ನಾಯಕ, ಖಜಾಂಚಿ ಅಂಕನಾಯಕ, ಸಿದ್ದನಾಯಕ, ಖಜಾಂಚಿ ಅಂಕಪ್ಪ, ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು, ಪುರಸಭಾ ಸದಸ್ಯ ಲೋಕೇಶ್, ಮುಖಂಡರಾದ ನಾಗರಾಜು, ಸೂರಿ, ಸಿದ್ದನಾಯಕ, ಕಾಂತನಾಯಕ, ಶೇಖರ್, ಮಹೇಶ್, ಚಿಕ್ಕನಾಯಕ, ರಾಜೇಂದ್ರ, ನಿಂಗನಾಯಕ ಇತರರಿದ್ದರು.

ಕ್ಲಬ್ ಮೇಲೆ ದಾಳಿ: 25 ಜೂಜುಕೋರರ ಬಂಧನ

ತಿ.ನರಸೀಪುರ, ಸೆ.23– ಪಟ್ಟಣದ ಕ್ಲಬ್‌ನಲ್ಲಿ ಜೂಜಾಡುತ್ತಿದ್ದ 25 ಮಂದಿ ಜೂಜುಕೋರರನ್ನು ಬಂಧಿಸುವಲ್ಲಿ ತಿ.ನರಸೀಪುರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಪಟ್ಟಣದ ಜೋಡಿ ರಸ್ತೆಯಲ್ಲಿರುವ ಎನ್‌ಆರ್‌ಎಫ್ ರಾಯಲ್ ವರ್ಲ್ಡ್ ಹಿಂಭಾಗದಲ್ಲಿರುವ ತ್ರಿವೇಣಿ ಸ್ಪೋರ್ಟ್ಸ್ ರಿಕ್ರಿಯೇಷನ್ ಕ್ಲಬ್‌ನಲ್ಲಿ ನಿಯಮ ಉಲ್ಲಂಘಿಸಿ ಜೂಜಾಟ ನಡೆಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿಗೆ ಬಂದ ಹಿನ್ನೆಲೆಯಲ್ಲಿ ಸೋಮವಾರ ರಾತ್ರಿ ಜಿಲ್ಲಾ ಪೊಲೀಸ್ ನಿರೀಕ್ಷಕ ಸುನೀಲ್ ಕುಮಾರ್ ನೇತೃತ್ವದಲ್ಲಿ ದಾಳಿ ನಡೆಸಿದ ಪೊಲೀಸರು ಪಾಯಿಂಟ್ ರಮ್ಮಿ ಆಟದಲ್ಲಿ ನಿರತರಾ ಗಿದ್ದ 25 ಜೂಜುಕೋರರನ್ನು ಬಂಧಿಸಿ, ಪಣಕ್ಕಿಟ್ಟಿದ್ದ 71,470 ರೂ., ವಿವಿಧ ಬಣ್ಣದ 82 ಟೋಕನ್‌ಗಳು, 2 ರಶೀದಿ ಪುಸ್ತಕ ಹಾಗೂ 5 ರಿಜಿ ಸ್ಟರ್‌ಗಳನ್ನು ವಶಪಡಿಸಿಕೊಂಡು ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಎಸ್‌ಐ ಜಗದೀಶ್ ಧೂಳ್‌ಶೆಟ್ಟಿ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಬ್ಯಾಂಕ್ ಆಫ್ ಬರೋಡಾದಿಂದ ಸಾರ್ವಜನಿಕರು, ಗ್ರಾಹಕರಿಗೆ

ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ಅರಿವು

ಹುಣಸೂರು, ಸೆ.23– ನಗರದ ಬ್ಯಾಂಕ್ ಆಫ್ ಬರೋಡಾ ವತಿಯಿಂದ ಗ್ರಾಹಕರಿಗೆ ಹಾಗೂ ಸಾರ್ವಜನಿಕರಿಗೆ ಕೇಂದ್ರ ಸರ್ಕಾರದ ಹಲವು ಯೋಜನೆಗಳ ಬಗ್ಗೆ ಅರಿವು ಮೂಡಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಬ್ಯಾಂಕ್ ಹಿರಿಯ ವ್ಯವಸ್ಥಾಪಕ ಮೋಹನ್ ಕುಮಾರ್, ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಭೀಮಾ ಯೋಜನೆಯಲ್ಲಿ 18 ರಿಂದ 50 ವರ್ಷದವರೆಗೆ ವಾರ್ಷಿಕ 436 ರೂ. ಕಟ್ಟಿದರೆ ಈ ಮಧ್ಯ ಏನಾದರೂ ಅಪಘಾತ, ಯಾವುದೇ ಕಾರಣಗಳಿಂದ ಅಂಗವಿಕಲರಾದರೇ, ಮೃತಪಟ್ಟರೇ 2 ಲಕ್ಷ ಸಿಗಲಿದೆ. ಅದೇ ರೀತಿ ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆಯಡಿ 18 ರಿಂದ 70 ವರ್ಷದವರೆಗೆ ವಾರ್ಷಿಕ 20 ರೂ. ಕಟ್ಟಿ ಅಂಗವಿಕಲರಾದರೆ ಲಕ್ಷ, ಸಾವನ್ನಪ್ಪಿದರೇ 2 ಲಕ್ಷ ಸಿಗಲಿದೆ. ಅಲ್ಲದೇ ಅಟಲ್ ಜೀ ಪೆನ್ಷನ್ (ಪಿಂಚಣಿ) ಯೋಜನೆಯಡಿ 18 ರಿಂದ 40 ವರ್ಷದವರೆಗೆ 250 ರೂ. ನಿಂದ ನಿಮ್ಮ ಅನುಕೂಲಕ್ಕೆ ತಕ್ಕಂತೆ ಗರಿಷ್ಠ ಹಣ ಪಾವತಿಸಿದರೆ 60 ವರ್ಷಗಳ ನಂತರ ಪ್ರತಿ ತಿಂಗಳು ಸಾವಿರದಿಂದ 5 ಸಾವಿರ ರೂ.ವರೆಗೆ ಬದುಕಿರುವವರೆಗೆ ಪಿಂಚಣಿ



ಬ್ಯಾಂಕ್ ವ್ಯವಸ್ಥಾಪಕ ಮೋಹನ್ ಕುಮಾರ್ ಮಾತನಾಡಿದರು.

ಬರಲಿದೆ. ವ್ಯಕ್ತಿ ಮೃತಪಟ್ಟ ನಂತರ ಆತನ ಪತ್ನಿಗೆ, ಪತ್ನಿಯೂ ಮೃತಪಟ್ಟ ನಂತರ ವಾರಸು ದಾರರಿಗೆ ಪಾಲಿಸಿದಾರರು ತುಂಬಿರುವ ಪೂರ್ಣ ಹಣ ಸಿಗಲಿದೆ ಎಂದರು.

ಸುಕನ್ಯಾ ಸಂಮೃದ್ಧಿ ಯೋಜನೆಯಡಿ 1 ರಿಂದ 10 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ 250 ರಿಂದ ಗರಿಷ್ಠ 1.5 ಲಕ್ಷದವರೆಗೆ ಪಾವತಿಸಿದರೆ 21 ವರ್ಷದ ನಂತರ ವಾರ್ಷಿಕ ಶೇ.8.2 ರಷ್ಟು ಬಡ್ಡಿ ಸೇರಿಸಿ ನೀಡಲಾಗುವುದು. ಅದನ್ನು 18 ವರ್ಷಗಳ ನಂತರ ಮದುವೆ, ಉನ್ನತ ಶಿಕ್ಷಣಕ್ಕೆ ಬಳಸಿಕೊಳ್ಳಬಹುದು ಎಂದರು.

ಕಿಸಾನ್ ವಿಕಾಸ್ ಪತ್ರ ಯೋಜನೆ ಯಡಿ ಮಾಸಿಕ ಕನಿಷ್ಠ ಸಾವಿರ ಹಾಗೂ ಅದಕ್ಕೂ ಹೆಚ್ಚು ಹೂಡಿಕೆ ಮಾಡಿದರೆ 10 ವರ್ಷಗಳ ನಂತರ ಹೂಡಿಕೆ ಹಣ ದ್ವಿಗುಣಗೊಳ್ಳಲಿದೆ. ಪಬ್ಲಿಕ್ ಪ್ರಾವಿಡೇಂಟ್ ಫಂಡ್ ಸ್ಕೀಂನಲ್ಲಿ ತಿಂಗಳಿಗೆ 500, ಅದಕ್ಕಿಂತ ಹೆಚ್ಚು ಹಣ ಹೂಡಿಕೆ ಮಾಡಿದರೆ 15 ವರ್ಷಗಳ ನಂತರ ಶೇ.7.10 ರಷ್ಟು ಬಡ್ಡಿ ಸೇರಿಸಿ ಹಿಂತಿರುಗಿಸಲಾಗುವುದು.

ಅಲ್ಲದೇ 60 ವರ್ಷ ಮೇಲ್ಪಟ್ಟವರಿಗೆ ಸೀನಿಯರ್ ಸಿಟಿಜನ್ ಸ್ಕೀಂನಲ್ಲಿ ಕನಿಷ್ಟ 1 ಸಾವಿರದಿಂದ 30 ಲಕ್ಷದವರೆಗೆ ಒಂದೇ ಬಾರಿಗೆ ಹಣ ತೊಡಗಿಸಿದರೆ 5 ವರ್ಷಗಳ ನಂತರ ಶೇ.8.2ರಷ್ಟು ಬಡ್ಡಿ ಸೇರಿಸಿ ನೀಡಲಾಗುವುದು ಎಂದರು.

ವಿಶೇಷ ಕೊಡುಗೆ: ಸರ್ಕಾರಿ ನೌಕರರು ನಮ್ಮ ಶಾಖೆಯಿಂದ ಮಾಸಿಕ ಸಂಬಳ ಪಡೆಯುವ ವ್ಯವಸ್ಥೆ ಮಾಡಿಕೊಂಡು ರಸ್ತೆ ಅಪಘಾತದಲ್ಲಿ ಮೃತಪಟ್ಟರೆ 1 ಕೋಟಿ, ವಿಮಾನ ಅಪಘಾತದಲ್ಲಿ ಸಾವನ್ನಪ್ಪಿದರೆ 2 ಕೋಟಿವರೆಗೆ ಅಪಘಾತ ವಿಮೆ ನೀಡಲಾಗುವುದು. ಅಲ್ಲದೇ ಚೆಕ್‌ಬುಕ್, ಎಟಿಎಂ ಕಾರ್ಡ್, ಕ್ರೆಡಿಟ್ ಕಾರ್ಡ್, ಡಿಡಿ ಸೇರಿದಂತೆ ಯಾವುದೇ ಸೇವೆಗಳಿಗೆ ಚಾರ್ಜ್ ವಿಧಿಸದೆ ಉಚಿತವಾಗಿ ಸೇವೆ ಒದಗಿಸಲಾಗುವುದು. ವೈದ್ಯಕೀಯ ವಿದ್ಯಾರ್ಥಿಗಳಿಗೆ 40 ಲಕ್ಷ ಶೂನ್ಯ ಬಡ್ಡಿ ದರದಲ್ಲಿ ಸಾಲ, ರೈತರಿಗೆ ಟ್ರಾಕ್ಟರ್, ಕಾರು ಮತ್ತಿತರೆ ವಾಹನಗಳ ಸಾಲ ನೀಡಲಾಗುವುದು. ಶೇ.7.45 ಬಡ್ಡಿ ದರದಲ್ಲಿ ಗೃಹ ಸಾಲ ನೀಡಲಾಗುವುದು. ಇಷ್ಟೇ ಅಲ್ಲದೆ ನಮ್ಮ ಬ್ಯಾಂಕ್‌ನಲ್ಲಿ ಹಲವು ಯೋಜನೆಗಳಿದ್ದು, ಅವುಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಈ ವೇಳೆ ಮೈಸೂರಿನ ವಲಯ ವ್ಯವಸ್ಥಾಪಕ ಕಚೇರಿ ಯೋಗೇಶ್ ದಾಂಡೆ, ಶಾಖೆ ಸಹಾಯಕ ವ್ಯವಸ್ಥಾಪಕ ರವಿತೇಜ ಸಿಂಹಾದ್ರಿ, ಶಾಖೆಯ ಕೃಷಿ ಅಧಿಕಾರಿ ರೇವಂತ್ ಚಿಂತಾಲ್, ಮೋನಿಕಾ, ಶಿವ ಕುಮಾರ್.ಪಿ, ಸೂರ್ಯ ವೆಂಕಟರಮಣ, ಸೂಪರ್ ವೈಸರ್ ನಿಶಾಂತ್, ನಾರಾಯಣ್, ನಾಗೇಶ್, ಶಾಖೆಯ ಬಿ.ಸಿ.ಭರತ್, ಸಂಪತ್, ರಕ್ಷಿತ್, ಮಂಜುನಾಥ್ ಇನ್ನಿತರರಿದ್ದರು.

ಲಲಿತಮ್ಮ ನಿಧನ



ಹುಣಸೂರು, ಸೆ.23– ನಗರದ ಕೊಲ್ಲಾಪುರದಮ್ಮನ ಬೀದಿ ನಿವಾಸಿ, ಸಾಗರ್ ಶಾಮಿಯಾನ ಮಾಲೀಕ ಸತೀಶ್ ಅವರ ತಾಯಿ ಹಾಗೂ ಲೇ.ಪರಶುರಾಮ್ ಅವರ ಪತ್ನಿ ಲಲಿತಮ್ಮ (ರುಕ್ಮಿಣಿ 65) ಮಂಗಳವಾರ ಬೆಳಗ್ಗೆ ನಿಧನರಾದರು.

ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಬೆಳಗ್ಗೆ 11 ಗಂಟೆಗೆ ತಾಲೂಕು ಕಚೇರಿ ಪಕ್ಕದಲ್ಲಿರುವ ಚಿತಾಗಾರದಲ್ಲಿ ನಡೆಯಲಿದೆ.

ಜವರಯ್ಯ



ನಂಜನಗೂಡು, ಸೆ.23– ತಾಲೂಕಿನ ದೇವರಸನಹಳ್ಳಿ ಗ್ರಾಮದ ಹಿರಿಯ ಜಾನಪದ ಕಲಾವಿದ ಜವರಯ್ಯ(79) ಮಂಗಳವಾರ ನಿಧನರಾದರು. ಮೃತರು ಪತ್ನಿ, ಜಾನಪದ ಕಲಾವಿದರಾದ ಶೇಷಣ್ಣ, ಮಾದೇಶ್ ಸೇರಿದಂತೆ ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಸ್ವಗ್ರಾಮದ ರುದ್ರಭೂಮಿಯಲ್ಲಿ ನಡೆಯಲಿದೆ.

ಪುಟ್ಟಮ್ಮ



ಹೆಚ್.ಡಿ.ಕೋಟೆ, ಸೆ.23– ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಅವರ ಸಹೋದರಿ ಪುಟ್ಟಮ್ಮ(82) ಮಂಗಳವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಸ್ವಗ್ರಾಮ ಹೆಗ್ಗಡಪುರದಲ್ಲಿ ಬುಧವಾರ ನಡೆಯಲಿದೆ.

ದೇಶ ಉದ್ಧಾರವಾಗಬೇಕಿದ್ದರೆ ಶಾಲೆಗಳಲ್ಲಿ ಸರಿಯಾಗಿ ಬೆಳಗ್ಗೆ 9.30ಕ್ಕೆ ಗಂಟೆ ಹೊಡೆಯಬೇಕು!

● ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಅಭಿಮತ ● ಎರಡು ದಿನಗಳ ಮಕ್ಕಳ ದಸರಾಕ್ಕೆ ಚಾಲನೆ ● ಶಾಲಾ ಮಕ್ಕಳಿಗೆ ಬಿಸಿಯೂಟ ನೀಡುವುದು ನೈವೇದ್ಯ ಕೊಟ್ಟಂತೆ



ಕಲಾಮಂದಿರದಲ್ಲಿ 'ಮಕ್ಕಳ ದಸರಾ'ವನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಉದ್ಘಾಟಿಸಿದರು. ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಮತ್ತಿತರರಿದ್ದರು.

ಮೈಸೂರು, ಸೆ.23(ಎಂಕೆ)– ದೇವಸ್ಥಾನದಲ್ಲಿ ಬಾರಿಸುವ ಗಂಟೆ ಎಷ್ಟು ಹೊತ್ತು ಬಡಿಯುತ್ತದೋ... ಎಷ್ಟು ಜನರಿಗೆ ಕೇಳುತ್ತದೋ ಗೊತ್ತಿಲ್ಲ. ಆದರೆ, ಈ ದೇಶ ಉದ್ಧಾರವಾಗಬೇಕು. ಒಳ್ಳೆಯ ದಿಕ್ಕಿನಲ್ಲಿ ಸಾಗಬೇಕಾದರೆ ಶಾಲೆಗಳಲ್ಲಿ ಸರಿಯಾಗಿ 9.30ಕ್ಕೆ ಗಂಟೆ ಹೊಡೆಯಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಹೇಳಿದರು.

ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ವತಿಯಿಂದ ಆಯೋಜಿಸಿದ್ದ 2 ದಿನಗಳ 'ಮಕ್ಕಳ ದಸರಾ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಾತಿ, ಧರ್ಮ, ದೇಶಕ್ಕೆ ಬೌಂಡರಿ ಎಂಬುದಿದೆ. ಆದರೆ ವಿದ್ಯಾಭ್ಯಾಸಕ್ಕೆ ಯಾವುದೇ ಬೌಂಡರಿ ಇಲ್ಲ. ಹಾಗಾಗಿ ಪ್ರತಿಯೊಬ್ಬರು ಶಿಕ್ಷಣವನ್ನು ಕಡ್ಡಾಯವಾಗಿ ಪಡೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಎಂದರು.

ಮಕ್ಕಳಲ್ಲಿರುವ ಸುಪ್ತ ಪ್ರತಿಭೆಯನ್ನು ಗುರುತಿಸಿ, ಬೆಳಕಿಗೆ ತಂದು ಪ್ರೋತ್ಸಾಹಿಸಲು ಮಕ್ಕಳ ದಸರಾ ಸೂಕ್ತ ವೇದಿಕೆಯಾಗಿದೆ. ನಮ್ಮ ಜೀವನಕ್ಕೆ ಒಳ್ಳೆಯ ದಿಕ್ಕು ತೋರಿಸಲು ಗುರುಗಳಿಂದ ಮಾತ್ರ ಸಾಧ್ಯ. ಅಂತಹ ಕೆಲಸವನ್ನು ಸರ್ಕಾರಿ ಶಾಲಾ ಶಿಕ್ಷಕರು ಮಾಡುತ್ತಿದ್ದಾರೆ. ಶಾಲೆಯಲ್ಲಿ ಮಕ್ಕಳಿಗೆ ಊಟ ನೀಡುವುದು ದೇವರಿಗೆ ನೈವೇದ್ಯ ಇಟ್ಟಂತೆ ಎಂದು ಭಾವಿಸಿದ್ದೇನೆ. ಅಲ್ಲದೆ ಉತ್ತಮ ಶಿಕ್ಷಕರು ಇರುವುದು ಸರ್ಕಾರಿ ಶಾಲೆಯಲ್ಲಿ ಮಾತ್ರ ಎಂದು ತಿಳಿಸಿದರು.

1.9 ಕೋಟಿ ಮಕ್ಕಳ ಸೇವಾ ಭಾಗ್ಯ: ರಾಜ್ಯದಲ್ಲಿರುವ ಸರ್ಕಾರಿ, ಅನುದಾನಿತ, ಅನುದಾನ ರಹಿತ ಶಾಲೆಗಳು ಸೇರಿ ಸುಮಾರು 57 ಸಾವಿರ ಶಾಲೆಗಳಿದ್ದು, ಸುಮಾರು 1.9 ಕೋಟಿ ಮಕ್ಕಳ ಸೇವೆ ಮಾಡುವ ಭಾಗ್ಯ ನನ್ನದಾಗಿದೆ. ಅದೇ ರೀತಿ ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡುವ ಕರ್ತವ್ಯವನ್ನು ಸರ್ಕಾರದ ವತಿಯಿಂದ ಹಂತ ಹಂತವಾಗಿ ಮಾಡಲಾಗುತ್ತಿದೆ. ಬಡತನದಲ್ಲೇ ಹುಟ್ಟಬೇಕು ಎಂದು ಯಾರು ಅರ್ಜಿ ಹಾಕಿಕೊಂಡು ಹುಟ್ಟುವುದಿಲ್ಲ. ಆದರೆ, ಬಡತನ ತೆಗೆಯಬೇಕಾದರೆ ಅದು ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ತಿಳಿಹೇಳಿದರು.

ಗ್ರಂಥಾಲಯದ ಬಳಿ ಇರಬೇಕು: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಡಾ.ಬಿ. ಆರ್.ಅಂಬೇಡ್ಕರ್ ಅವರು ಹೇಳಿದಂತೆ ನೀವು ಗ್ರಂಥಾಲಯದ ಬಳಿ ಇರಬೇಕು. ಪೋಷಕರು ಮಕ್ಕಳನ್ನು ಯಾವ ರೀತಿ ಓದಿಸಬೇಕು ಹಾಗೂ ಅವರಿಗೆ ಯಾವ ರೀತಿ ಸಂಸ್ಕೃತಿಯನ್ನು ತಿಳಿಸಿ ಕೊಡಬೇಕಾಗುತ್ತದೆ ಎಂಬುದು ಬಹಳ ಮುಖ್ಯವಾಗುತ್ತದೆ ಎಂದರು.

ಸನ್ಮಾನ: ಇದೇ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ 9ನೇ ತರಗತಿಯ ಆರ್.ರಕ್ಷಿತಾ(ಯುವ ವಿಜ್ಞಾನಿ), 2ನೇ ತರಗತಿಯ ಚಿರಸ್ವಿ ಬಾಲಸುಬ್ರಹ್ಮಣ್ಯನ್(ವಿಶೇಷ ಪ್ರತಿಭೆ), 9ನೇ ತರಗತಿಯ ಅರ್ಪಿತ ಕಲಾಗುಡಿ(ಕ್ರೀಡಾ ಕ್ಷೇತ್ರ) ಹಾಗೂ 10ನೇ ತರಗತಿಯ ಪ್ರಥಮ್ ಗೌಡ(ಕಲಾ ಕ್ಷೇತ್ರ) ಅವರನ್ನು ಸನ್ಮಾನಿಸಿ ಪ್ರೋತ್ಸಾಹಿಸಲಾಯಿತು. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ಉಪ ವಿಶೇಷಾಧಿಕಾರಿ ಬಿ.ಎಂ.ಸವಿತಾ, ಶಾಲಾ ಶಿಕ್ಷಣ ಇಲಾಖೆ ಕಾರ್ಯದರ್ಶಿ ಪ್ರಕಾಶ್, ಸಹ ನಿರ್ದೇಶಕರಾದ ಕೆ.ರಾಜಲಕ್ಷ್ಮಿ, ಡೆಪ್ಯುಟ್ ಪ್ರಾಂಶುಪಾಲ ಸಿ.ಆರ್.ನಾಗರಾಜಯ್ಯ ಹಾಗೂ ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳು, ಶಿಕ್ಷಕರು ಉಪಸ್ಥಿತರಿದ್ದರು.

ಕನ್ನಡದಲ್ಲಿ ಮುದ್ರಣ...!

ನಮ್ಮ ನಾಡಿನಲ್ಲಿ ಕನ್ನಡ ಕಡ್ಡಾಯವಾಗಿರಬೇಕು. ವಿದ್ಯಾರ್ಥಿಗಳ ಭಾಷೆಯ ಆಯ್ಕೆ ನಮ್ಮ ಕಂಟ್ರೋಲ್‌ನಲ್ಲಿ ಇಲ್ಲ. ಕನ್ನಡ, ಇಂಗ್ಲೀಷ್ ಅಥವಾ ಹಿಂದಿ ಭಾಷೆಯ ಆಯ್ಕೆ ಅವರಿಗೆ ಬಿಟ್ಟದ್ದು. ಆದರೆ, ಈ ವರ್ಷ ಇಲ್ಲವೇ ಮುಂದಿನ ವರ್ಷದಿಂದ ಎಲ್ಲಾ ಪಠ್ಯಪುಸ್ತಕಗಳಲ್ಲಿಯೂ ಅಂದರೆ ಇಂಗಿಷ್ ಜೊತೆಗೆ ಕನ್ನಡವನ್ನು ಕಡ್ಡಾಯವಾಗಿ ಮುದ್ರಿಸುವ ಪ್ರಯತ್ನ ಮಾಡುತ್ತೇವೆ. ಈ ರೀತಿಯಲ್ಲಾದರೂ ಕನ್ನಡವನ್ನು, ಕನ್ನಡ ಶಾಲೆಗಳನ್ನು ಉಳಿಸಬೇಕಿದೆ. ಹಾಗೆಯೇ 1995 ರಿಂದ ಅನುದಾನಕ್ಕೆ ಒಳಪಡದ ಶಾಲೆಗಳನ್ನೂ ಒಳಪಡಿಸುವ ಕೆಲಸ ಮಾಡಲಾಗುವುದು.

- ಮಧು ಬಂಗಾರಪ್ಪ, ಸಚಿವರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಮಕ್ಕಳ ಕಲೆ, ಸಾಹಿತ್ಯ, ಸಂಗೀತೋತ್ಸಾಹಕ್ಕೆ ಮನದುಂಬಿದ ಅಭಿಮಾನ...!

ಮಕ್ಕಳ ದಸರಾ ಸಂಭ್ರಮದಲ್ಲಿ ವಿವಿಧ ಕಲಾ ಪ್ರಕಾರಗಳು, ನೃತ್ಯ ರೂಪಕಗಳನ್ನು ಪ್ರದರ್ಶನ ನೀಡಿದ ವಿವಿಧ ಶಾಲೆಗಳ ನೂರಾರು ಮಕ್ಕಳ ಕಲೆ, ಸಾಹಿತ್ಯ ಮತ್ತು ಸಂಗೀತೋತ್ಸಾಹ ಕಂಡು ನೆರೆದಿದ್ದವರು ಮನದುಂಬಿದ ಅಭಿಮಾನ ವ್ಯಕ್ತಪಡಿಸಿದರು. ಮೈಸೂರು ನಜರ್‌ಬಾದ್ ಪೀಪಲ್ಸ್ ಪಾರ್ಕ್‌ನ ಸರ್ಕಾರಿ ಶಾಲೆ ಮಕ್ಕಳು ಪ್ರಾರ್ಥನಾ ಗೀತೆ ಜೊತೆಗೆ ಕುವೆಂಪು ರಚಿತ ನಾಡು–ನುಡಿಯ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿ ಗಮನ ಸೆಳೆದರು. ಹಾಗೆಯೇ ವಿಜಯ ವಿಠಲ ಶಾಲೆ ಮಕ್ಕಳ ಭರತ ನಾಟ್ಯ ಪ್ರದರ್ಶನ. ನಾಗಪುರ ಹಾಡಿ ಆಶ್ರಮ ಶಾಲೆ ಮಕ್ಕಳ ನೃತ್ಯ ಪ್ರದರ್ಶನ. ಅರುಣೋದಯ ಅಂಗವಿಕಲ ಶಾಲಾ ಮಕ್ಕಳ ವಿಶೇಷ ನೃತ್ಯ ರೂಪಕ, ಸೇಂಟ್ ಅರ್ನಾಲ್ಡ್ ಶಾಲೆ ಮಕ್ಕಳ ಪೂಜಾ ಕುಣಿತ, ಕೆ.ಆರ್.ನಗರ ಅಂಕನಹಳ್ಳಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳ ಪಾಳೇಗಾರ ನೃತ ಹಾಗೂ ಮೂಗೂರು ಕೆಪಿಎಸ್ ಮಕ್ಕಳ ಜಾನಪದ ನೃತ್ಯ ಅಪಾರ ಮೆಚ್ಚುಗೆ ಪಡೆಯಿತು.

ಸರ್ಕಾರಿ ನೌಕರರು, ಕುಟುಂಬ ಸದಸ್ಯರಿಗೆ ಆರೋಗ್ಯ ಸಂಜೀವಿನಿ ಯೋಜನೆ ಜಾರಿ

ಬೆಂಗಳೂರು, ಸೆ.23– ಸರ್ಕಾರಿ ನೌಕರರಿಗೆ ಶುಭ ಸುದ್ದಿ. ಸರ್ಕಾರಿ ನೌಕರರು ಹಾಗೂ ಕುಟುಂಬ ಸದಸ್ಯರಿಗೆ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ ಜಾರಿಗೊಳಿಸಲಾಗಿದೆ. ಅಕ್ಟೋಬರ್ 1 ರಿಂದ ಆರೋಗ್ಯ ಸಂಜೀವಿನಿ ಯೋಜನೆ ಜಾರಿಗೆ ಬರಲಿದೆ. ಬಹಳ ವರ್ಷಗಳಿಂದ ಈ ಯೋಜನೆ ಮರುಜಾರಿಗೆ ಒತ್ತಾಯ ಕೇಳಿಬಂದಿತ್ತು. ಈ ಯೋಜನೆಯಡಿ ನಗದು ರಹಿತ ವೈದ್ಯಕೀಯ ಚಿಕಿತ್ಸೆ ಸಿಗಲಿದೆ. ನೋಂದಾಯಿತ ಖಾಸಗಿ ಆಸ್ಪತ್ರೆಯಲ್ಲಿಯೂ ನಗದು ರಹಿತ ಉಚಿತ ಚಿಕಿತ್ಸೆ ಸಿಗಲಿದೆ.

ಜಾತಿಗಣತಿ ರಿಟ್ ಅರ್ಜಿಗಳ ವಿಚಾರಣೆ ಮತ್ತೆ ಮುಂದೂಡಿಕೆ

ಅರ್ಜಿದಾರರಿಂದ ನಿರಂತರ ವಾದ ಮಂಡನೆ; ಸರ್ಕಾರದ ಪರ ವಕೀಲರಿಂದ ಸಮರ್ಥನೆ

ಬೆಂಗಳೂರು, ಸೆ.23(ಕೆಎಂಶಿ)– ರಾಜ್ಯ ಸರ್ಕಾರದ ಜಾತಿಗಣತಿ ಪ್ರಶ್ನಿಸಿ ಸಲ್ಲಿಸಲಾಗಿರುವ ರಿಟ್ ಅರ್ಜಿಗಳ ವಿಚಾರಣೆಯನ್ನು ಎರಡನೇ ದಿನವಾದ ಇಂದೂ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಹಾಗೂ ನ್ಯಾಯಮೂರ್ತಿ ಸಿ.ಎಂ.ಜೋಶಿ ಅವರನ್ನೊಳಗೊಂಡ ಹೈಕೋರ್ಟ್ ವಿಭಾಗೀಯ ಪೀಠ ನಡೆಸಿದ್ದು, ನಾಳೆಗೆ ಮುಂದೂಡಲಾಗಿದೆ.

ಜಾತಿಗಣತಿಗೆ ಮಧ್ಯಂತರ ತಡೆ ನೀಡಬೇಕೇ, ಬೇಡವೇ ಎಂಬುದನ್ನು ನಿರ್ಧರಿಸಬೇಕಿರುವ ನ್ಯಾಯಪೀಠ, ರಾಜ್ಯ ಸರ್ಕಾರದ ಜಾತಿ ಗಣತಿ ಆಕ್ಷೇಪಿಸಿ ಕೇಂದ್ರ ಸರ್ಕಾರವೂ ವಾದ ಮಂಡಿಸಿದೆ ಎಂದಿತು. ಜಾತಿ ಸರ್ವೇಕ್ಷಣೆ ಹೆಸರಿನಲ್ಲಿ ರಾಜ್ಯ ಸರ್ಕಾರದಿಂದ ಜನಗಣತಿ ನಡೆಯುತ್ತಿದೆ ಎಂದು ಆಕ್ಷೇಪಿಸಿದ ಅರ್ಜಿದಾರರು ಹಾಗೂ ಪ್ರತಿವಾದಿಗಳಿಂದ ಲಿಖಿತ ವಾದದ ಸಾರಾಂಶ ಸಲ್ಲಿಕೆ ಮಾಡಲಾಯಿತು.

ರಾಜ್ಯ ಒಕ್ಕಲಿಗರ ಸಂಘ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ವೀರಶೈವ–ಲಿಂಗಾಯತ ಮಹಾಸಭಾ ರಿಟ್ ಅರ್ಜಿಗಳನ್ನು ಸಲ್ಲಿಸಿವೆ. ಹಿಂದುಳಿದ ವರ್ಗಗಳ ಆಯೋಗದ ಪರ ವಕೀಲರು ವಾದ ಮಂಡಿಸಿ, ಅರ್ಜಿದಾರರು, ಈಗಷ್ಟೇ ಲಿಖಿತ ವಾದಾಂಶದ ಪ್ರತಿ ನಮಗೆ ನೀಡಿದ್ದಾರೆ ಎಂದರು.

ರಾಜ್ಯ ಸರ್ಕಾರಕ್ಕೆ ಅಧಿಕಾರವೇ ಇಲ್ಲ: ಅರ್ಜಿದಾರರ ಪರ ಹಿರಿಯ ವಕೀಲ ಪ್ರಭುಲಿಂಗ ನಾವಡಗಿ ವಾದ ಮಂಡಿಸಿ, ಹಿಂದುಳಿದ ವರ್ಗಗಳ ಕಾಯ್ದೆ ಅಡಿಯಲ್ಲಿ ಜಾತಿಗಣತಿ ನಡೆಸುತ್ತಿದ್ದಾರೆ. ರಾಜ್ಯದ ಎಲ್ಲ ಜನರ ಸರ್ವೆ ನಡೆಸಲು ಸರ್ಕಾರದಿಂದ ಆದೇಶಿಸಲಾಗಿದೆ. ಡಿಜಿಟಲ್ ಆ್ಯಪ್ ಮೂಲಕವೂ ಸರ್ವೆ ನಡೆಸಲಾಗುತ್ತಿದೆ, ಜಿಪಿಎಸ್, ವಿದ್ಯುತ್ ಮೀಟರ್ ರೀಡರ್‌ಗಳ ಸಹಕಾರ ಪಡೆಯಲಾಗಿದೆ. ಎಲ್ಲರೂ ಆಧಾರ್, ಮೊಬೈಲ್ ನಂಬರ್ ಕೊಡಬೇಕೆಂದು ಸೂಚಿಸಲಾಗಿದೆ. ಅಲ್ಲದೆ, ಮನೆ ಮುಖ್ಯಸ್ಥನ ಸಂಪೂರ್ಣ ವಿವರ ಕೇಳಲಾಗಿದೆ. ರಾಜ್ಯ ಸರ್ಕಾರಕ್ಕೆ ಹಿಂದುಳಿದ ವರ್ಗಗಳ ಸರ್ವೆ ನಡೆಸುವ ಅಧಿಕಾರವಿಲ್ಲ. ರಾಷ್ಟ್ರಪತಿಗಳು ಮಾತ್ರ ಹಿಂದುಳಿದ ವರ್ಗಗಳ ಸಮೀಕ್ಷೆಗೆ ಅಧಿಸೂಚನೆ ಹೊರಡಿಸಬಹುದಾಗಿದೆ ಎಂದರು.

ಕೇಂದ್ರದ ವ್ಯಾಪ್ತಿಗೆ ಬರುತ್ತೆ: ಅರ್ಜಿದಾರರ ಪರ ಹಿರಿಯ ವಕೀಲ ಜಯಕುಮಾರ್ ಎಸ್. ಪಾಟೀಲ್ ವಾದ ಮಂಡಿಸಿ, ಹಿಂದುಳಿದ ವರ್ಗಗಳ ಕಾಯ್ದೆ ಸೆಕ್ಷನ್ 9(2) ಉಲ್ಲೇಖಿಸಿ, ಸಂವಿಧಾನದ 342ಎ (3) ಪ್ರಕಾರ ಕಾಯ್ದೆ ರೂಪಿಸಲಾಗಿಲ್ಲ. ರಾಜ್ಯದ ಎಲ್ಲ ಜನರ, ಜಾತಿಯ ಸರ್ವೆ ಮಾಡಲಾಗುತ್ತಿದೆ, ಇರುವ, ಇಲ್ಲದಿರುವ ಎಲ್ಲ ಜಾತಿಗಳ ಸರ್ವೆ ಮಾಡುತ್ತಿದ್ದಾರೆ.

ಸರ್ಕಾರ ಸರ್ವೆ ಹೆಸರಿನಲ್ಲಿ ಜನಗಣತಿ (ಸೆನ್ಸಸ್) ಮಾಡುತ್ತಿದೆ. ಕೇಂದ್ರ ಸರ್ಕಾರದ ವ್ಯಾಪ್ತಿಯ ಅಧಿಕಾರ ಚಲಾಯಿಸಲಾಗುತ್ತಿದೆ. ರಾಜ್ಯ ಸರ್ಕಾರಕ್ಕೆ ಈ ರೀತಿಯ ಜನಗಣತಿ ಮಾಡುವ ಅಧಿಕಾರವಿಲ್ಲ. ಪ್ರತಿ ಜಾತಿಯ ಜನಸಂಖ್ಯೆ ಗಣತಿ ಮಾಡುತ್ತಿದ್ದಾರೆ, ಚುನಾವಣೆಯ ಉದ್ದೇಶದಿಂದ ರಾಜ್ಯ ಸರ್ಕಾರ ಹೀಗೆ ಮಾಡುತ್ತಿದೆ. ಆದರೆ ಈ ರೀತಿ ಜನಗಣತಿ ಮಾಡುವ ಅಧಿಕಾರ ರಾಜ್ಯಕ್ಕಿಲ್ಲ ಎಂದರು.

ಗಣತಿಯಲ್ಲಿ ಅನುಮಾನಗಳಿವೆ: ಅರ್ಜಿದಾರರ ಪರ ಹಿರಿಯ ವಕೀಲ ಅಶೋಕ್ ಹಾರನಹಳ್ಳಿ ವಾದ ಮಂಡಿಸಿ, ಕೇಂದ್ರ ಸರ್ಕಾರ ಈಗಾಗಲೇ ಮಾರ್ಚ್ 1, 2027 ರಿಂದ ಜನಗಣತಿ ನಡೆಸುವುದಾಗಿ ಘೋಷಿಸಿದೆ, ಜನಗಣತಿ ಸಂದರ್ಭದಲ್ಲೇ ಜಾತಿ ಗಣತಿ ನಡೆಸಲೂ ನಿರ್ಧರಿಸಿದೆ. ರಾಜ್ಯ ಸರ್ಕಾರಗಳ ಗಣತಿ ಉದ್ದೇಶದಲ್ಲಿ ಹಲವು ಅನುಮಾನಗಳಿವೆ. ಆದ್ದರಿಂದಲೇ ಕೇಂದ್ರ ಸರ್ಕಾರ ದೇಶಾದ್ಯಂತ ಗಣತಿಗೆ ನಿರ್ಧರಿಸಿದೆ.

2015 ರಲ್ಲಿ ರಾಜ್ಯ ಸರ್ಕಾರ ಮಾಡಿದ ಸರ್ವೆ ಪ್ರಶ್ನಿಸಲಾಗಿತ್ತು. 2024 ರಲ್ಲಿ ಸಲ್ಲಿಸಿದ ಸರ್ವೆ ವರದಿ ಸ್ಥಿತಿ ಏನಾಗಿದೆ ಎಂಬುದು ತಿಳಿದು ಬಂದಿಲ್ಲ. ಹಿಂದೆ ನಡೆಸಿದ ಸಮೀಕ್ಷೆಗೆ 150 ಕೋಟಿ ರೂ. ವೆಚ್ಚ ಮಾಡಲಾಗಿತ್ತು. ಈಗ ಮತ್ತೆ 420 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಗಣತಿಯಲ್ಲಿ 1561 ಜಾತಿಗಳ ಸರ್ವೆ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ. ಹೊಸ ಹೊಸ ಜಾತಿಗಳನ್ನು ಸರ್ಕಾರ ಸೃಷ್ಟಿಸಿದೆ. ಜಾತಿಗಳ ಬಗ್ಗೆ ವಿಶ್ಲೇಷಣೆ ಇಲ್ಲದೇ ಸರ್ಕಾರ ಸರ್ವೆಗೆ ಮುಂದಾಗಿದೆ.

ರಾಜಕೀಯ ಕಾರಣಕ್ಕೆ ಗಣತಿ: ಮತ್ತೋರ್ವ ಅರ್ಜಿದಾರರ ಪರ ಹಿರಿಯ ವಕೀಲ ವಿವೇಕ್ ರೆಡ್ಡಿ ವಾದ ಮಂಡಿಸಿ, ಅಂಕಿ–ಅಂಶ ಸಂಗ್ರಹಕ್ಕೂ ಪ್ರತ್ಯೇಕ ಕಾಯ್ದೆ ಇದೆ, ಆ ಕಾಯ್ದೆಯಲ್ಲಿ ರಾಜ್ಯಕ್ಕೆ ಅಂಕಿ–ಅಂಶ ಸಂಗ್ರಹದ ಅಧಿಕಾರ ನೀಡಲಾಗಿಲ್ಲ. ಹಿಂದೆಂದೂ ಇತರೆ ಧರ್ಮದೊಂದಿಗೆ ಜಾತಿಯನ್ನು ಸೇರಿಸಿರಲಿಲ್ಲ.

ಬಣಜಿಗ ಕ್ರಿಶ್ಚಿಯನ್, ಬೆಸ್ತರು ಕ್ರಿಶ್ಚಿಯನ್, ಬ್ರಾಹ್ಮಣ ಕ್ರಿಶ್ಚಿಯನ್, ಚೆರೋಡಿ ಕ್ರಿಶ್ಚಿಯನ್, ದೇವಾಂಗ ಕ್ರಿಶ್ಚಿಯನ್, ಗೊಲ್ಲ ಕ್ರಿಶ್ಚಿಯನ್ ಎಂದೆಲ್ಲಾ 35 ರಿಂದ 40 ಧರ್ಮ ಮಿಶ್ರಿತ ಜಾತಿಗಳನ್ನು ಗುರುತಿಸಿದ್ದಾರೆ. ಒಕ್ಕಲಿಗ ಮುಖ್ಯ ಜಾತಿಯಾಗಿ ಉಪಜಾತಿ ಬೇರೆ ಇದ್ದರೆ ಹೇಗೆ ನಮೂದಿಸುವುದು, ಒಂದು ಜಾತಿಗೆ ಮಾತ್ರ ಲಾಗಿನ್ ಅವಕಾಶವಿದೆ, 2002ರ ಅಧಿಸೂಚನೆಯಲ್ಲಿ 800 ಜಾತಿಗಳಿದ್ದರೆ, ಈಗ 1561 ಜಾತಿ ಮಾಡಲಾಗಿದೆ, ನಮ್ಮದು ಪುರಾತನ ನಾಗರಿಕತೆಯಾಗಿದ್ದರೂ ಜಾತಿಗಳಲ್ಲಿ ಏರಿಕೆಯಾಗಿಲ್ಲ. ಸರ್ಕಾರ ಯಾವ ಆಧಾರದಲ್ಲಿ ಜಾತಿಗಳ ಸಂಖ್ಯೆ ಏರಿಸಿದೆ ತಿಳಿಸಿಲ್ಲ ಎಂದರು.

ಆತುರದ ಸರ್ವೆ: ಬ್ರಾಹ್ಮಿಣ್ ಕ್ರಿಶ್ಚಿಯನ್, ಬ್ರಾಹ್ಮಿಣ್ ಮುಸ್ಲಿಂ, ಬ್ರಾಹ್ಮಿಣ್ ವೈಶ್ಯ ಎಂದೆಲ್ಲಾ ನಮೂದು ಮಾಡಲು ಆಧಾರವೇನು? ಎಂಬುದಕ್ಕೂ ಸೂಕ್ತ ಉತ್ತರವಿಲ್ಲ. ದಸರಾ ರಜೆ ವೇಳೆ ಜನರೂ ಮನೆಯಲ್ಲಿರುವುದಿಲ್ಲ, ಖಾಸಗಿ ಮೀಟರ್ ರೀಡರ್‌ಗಳನ್ನು ಬಳಸಿ ಅಂಕಿ–ಅಂಶ ಸಂಗ್ರಹಿಸುತ್ತಿದ್ದಾರೆ. ಈ ರೀತಿ ಸಂಗ್ರಹಿಸಿದ ಅಂಕಿ–ಅಂಶಗಳಿಗೆ ಯಾವುದೇ ಸುರಕ್ಷತೆಯಿಲ್ಲ, ಒಮ್ಮೆ ಅಂಕಿ–ಅಂಶ ಸಂಗ್ರಹಿಸಿದರೆ ಮರಳಿಸಲಾಗದು, ಮಾಹಿತಿ ತಪ್ಪು ಕೈಗಳಿಗೆ ಹೋದರೆ ಗಂಡಾಂತರ ಎದುರಾಗುವ ಅಪಾಯವಿದೆ ಎಂದರು.

ತಡೆ ನೀಡಲು ಮನವಿ: ಅರ್ಜಿದಾರರ ಪರ ಹಿರಿಯ ವಕೀಲ ಎಸ್.ಎಂ. ಚಂದ್ರಶೇಖರ್ ವಾದ ಮಂಡಿಸಿ, ಆಧಾರ್ ಸಂಗ್ರಹದಿಂದ ಮಾಹಿತಿ ಪಡೆಯಲು ಅನುಮತಿ ಬೇಕು, ಖಾಸಗಿತನದ ಹಕ್ಕಿನ ಪ್ರಶ್ನೆ ಇರುವುದರಿಂದ ತಡೆ ನೀಡಬೇಕೆಂದು ಮನವಿ ಮಾಡಿದರು.

ಸಾಮಾಜಿಕ ಕಲ್ಯಾಣಕ್ಕೆ ಸರ್ವೆ: ನಂತರ ರಾಜ್ಯ ಸರ್ಕಾರದ ಪರ ವಾದ ಆರಂಭಿಸಿದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ಮೊದಲನೆಯದಾಗಿ ಇದು ಜಾತಿಗಣತಿಯಲ್ಲ ಎಂಬುದನ್ನು ಹೇಳಬಯಸುತ್ತೇನೆ, ಇದು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸರ್ವೆ ಎಂದರು. ಮಧ್ಯಪ್ರವೇಶಿಸಿದ ನ್ಯಾಯಪೀಠ, ಗಣತಿಗೂ ಸರ್ವೆಗೂ ವ್ಯತ್ಯಾಸ ಏನಿದೆ? 7 ಕೋಟಿ ಜನರನ್ನು ಜಾತಿಯಾಗಿ ಗಣತಿ ಮಾಡಲಾಗುತ್ತಿದೆಯೇ? ಎಂದು ಪ್ರಶ್ನಿಸಿತು.

ಇದಕ್ಕುತ್ತರಿಸಿದ ಅಭಿಷೇಕ್ ಮನು ಸಿಂಘ್ವಿ, ಸರ್ಕಾರದ ನೀತಿ–ನಿರೂಪಣೆಗೆ ಪೂರಕವಾಗಿ ಸರ್ವೆ ಮಾಡಲಾಗುತ್ತಿದೆ. ಸಾಮಾಜಿಕ ಕಲ್ಯಾಣ ಕಾರ್ಯಗಳಿಗೆ ಪೂರಕವಾಗಿ ಸರ್ವೆ ನಡೆಸಲಾಗುತ್ತಿದೆ, ರಾಜ್ಯ ಸರ್ಕಾರಕ್ಕೆ ಅಧಿಕಾರವಿದ್ದಾಗ ಸಮೀಕ್ಷೆ ಹೇಗೆ ಮಾಡಬೇಕೆಂಬುದು ಮುಖ್ಯವಲ್ಲ. 20 ಡಿಗ್ರಿ ಆ ಕಡೆ ಇದೆ, 30 ಡಿಗ್ರಿ ಈ ಕಡೆ ಇದೆ ಎನ್ನುವಂತಿಲ್ಲ, ಈ ಆಧಾರದಲ್ಲಿ ಮಧ್ಯಂತರ ತಡೆಯಾಜ್ಞೆ ನೀಡಬಾರದು ಎಂದರು. ನ್ಯಾಯಪೀಠ ಮಧ್ಯಪ್ರವೇಶಿಸಿ, ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆಯೇ? ಎಂಬ ಪ್ರಶ್ನೆ ಇದೆ ಎಂದಿತು.

ಇಂದಿನ (ಸೆಪ್ಟೆಂಬರ್ 24) ದಸರಾ ಕಾರ್ಯಕ್ರಮಗಳು

ಸಾಂಸ್ಕೃತಿಕ ಕಾರ್ಯಕ್ರಮಗಳು



ಅರಮನೆ ವೇದಿಕೆ

ಮ. 3.30 : ಶ್ರೀಮತಿ ಚಂದನ ಕಲಾತಂಡ ದಿಂದ ಸುಗಮ ಸಂಗೀತ
ಮ. 4.00 : ಕಲಾಕ್ಷೀರ ಸಾಗರ ಪ್ರದರ್ಶಕ ಕಲೆಗಳ ಕೇಂದ್ರ ವಿದ್ವಾನ್ ಸಾಗರ್ ಸಿಂಗ್ ಮತ್ತು ತಂಡದಿಂದ ಭರತನಾಟ್ಯ
ಸಂ. 5.00 : ಸಾಯಿಶಿವ್ ಲಕ್ಷ್ಮೀ ಕೇಶವ್ ಅವರಿಂದ ಕರ್ನಾಟಿಕ್ ಫ್ಯೂಷನ್ ವಾದ್ಯ ಸಂಗೀತ
ಸಂ. 6.00 : ಕರ್ನಾಟಕ ಕಲಾಶ್ರೀ ಡಾ.ಆರ್.ಎಸ್. ನಂದಕುಮಾರ್ ಮತ್ತು ಕಾಳಿದಾಸ್ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ರಘುಪತಿ ಭಟ್ ಅವರಿಂದ ಗೀತ ಚಿತ್ರ
ಸಂ. 7.00 : ಕು. ಅನನ್ಯ ಭಟ್ ಮತ್ತು ತಂಡದಿಂದ ಜಾನಪದ ಗಾನ ವೈಭವ
ರಾ. 8.30 : ಡಾ. ಮೈಸೂರು ಮಂಜುನಾಥ್, ಶ್ರೀ ಸುಮಂತ್ ಮಂಜುನಾಥ್ ಮತ್ತು ಶ್ರೀಮತಿ ಮಾಳವಿ ಅವರಿಂದ ವಯೋಲಿನ್ ಟ್ರಿಯೋ.

ಕಿರು ರಂಗ ಮಂದಿರ ವೇದಿಕೆ

ಮ. 2.00 : ವೀರೇಶ ದಳವಾಯಿ ಮತ್ತು ತಂಡ, ಬಳ್ಳಾರಿ ಅವರಿಂದ ಶಾಸ್ತ್ರೀಯ ಸಂಗೀತ
ಮ. 3.00 : ತಾರ ಅರೇನಾ–ಥಿಯೇಟರ್ ಕ್ಲಬ್, ಬೆಂಗಳೂರು ಅವರಿಂದ ಕಂಸಾಯಣ–ದೃಶ್ಯಕಾವ್ಯ ನಾಟಕ
ರಾತ್ರಿ 7.00 : ಅರಳಿ ತಂಡದಿಂದ ನಾಟಕ : ಊರ್ವಿ

ಪುರಭವನ ವೇದಿಕೆ

ಬೆಳಗ್ಗೆ 9.15 : ರೇಣುಕಾ ಕಲಾ ವೃಂದದರಿಂದ ಪೌರಾಣಿಕ ರಂಗ ಗೀತೆ
ಬೆ. 10.30 : ಶ್ರೀ ವಿಘ್ನೇಶ್ವರ ಕನ್ನಡ ಕಲಾ ಸಂಘ, ಮೈಸೂರು ಅವರಿಂದ ಪೌರಾಣಿಕ ನಾಟಕ : ಚಂದ್ರಮನ ಪರಿಭವ
ಮ. 3.00 : ಕರಿಬಸವೇಗೌಡ ಮತ್ತು ತಂಡ, ಮೈಸೂರು ಅವರಿಂದ ಪೌರಾಣಿಕ ನಾಟಕ : ದಕ್ಷಯಜ್ಞ
ಸಂ. 6.00 : ಶ್ರೀ ದಂಡಿನ ಮಾರಮ್ಮ ಕೃಪಾ ಪೋಷಿತ ನಾಟಕ ಮಂಡಳಿ, ಮೈಸೂರು ಅವರಿಂದ ನಾಟಕ : ಭೃಗಮುನಿಯ ಗರ್ವಭಂಗ.

ಚಿಕ್ಕಗಡಿಯಾರ ವೇದಿಕೆ

ಸಂ. 5.00 : ಗಂಗಾಧರಯ್ಯ ಮತ್ತು ತಂಡ, ತುಮಕೂರು ಅವರಿಂದ ಚಿಟ್ಟಿಮೇಳ;
ಸಂ.5.30 : ಜನಮನದ ಜಾನಪದ ಕಲಾತಂಡ ಆರ್. ಸಂಜಯ್, ಚಿಕ್ಕಮಗಳೂರು ಅವರಿಂದ ಜನಪದ ಗೀತಗಾಯನ
ಸಂ. 6.30 : ಚಿತ್ರಂಯ್ಯ ಮತ್ತು ತಂಡ, ಚಿತ್ರದುರ್ಗ ಅವರಿಂದ ಭಜನೆ
ರಾ. 7.30 : ಡಾ. ಎಂ. ಮಹದೇವಮೂರ್ತಿ ಮತ್ತು ತಂಡದಿಂದ ಜನಪದ ಗೀತೆ
ರಾ. 8.30 : ಭರತ್ ಯು ಕಲಾಚಂದ್ರ ಮತ್ತು ತಂಡ, ಚಿಕ್ಕೋಡಿ ಅವರಿಂದ ತತ್ವಪದ.

ನಾದಬ್ರಹ್ಮ ಸಂಗೀತಸಭಾ ವೇದಿಕೆ

ಸಂ. 5.00 : ಶಿವಪ್ರಸನ್ನ ಮತ್ತು ತಂಡ, ಹುಣಸೂರು ಅವರಿಂದ ಸ್ಯಾಕ್ಸೋಫೋನ್ ವಾದನ
ಸಂ. 5.30 : ಪಟ್ಟಾಭಿರಾಮ ಪಂಡಿತ್ ಮತ್ತು ತಂಡದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ
ಸಂ.6.30 : ನೇತ್ರಾವತಿ ಕೆ. ಮತ್ತು ತಂಡದಿಂದ ಸಮೂಹ ನೃತ್ಯ
ರಾ. 7.15 : ಶೋಭರಾಣಿ ಮತ್ತು ತಂಡ, ರಾಮನಗರ ಅವರಿಂದ ಜಾನಪದ ಗಾಯನ
ರಾ. 8.00 : ಅಮೃತಾ ವಿ. ಮತ್ತು ತಂಡ ಅವರಿಂದ ಸಿತಾರ್ ವಾದನ
ರಾ. 9.00 : ಎನ್.ಆರ್. ಪ್ರಸಾದ್ ಮತ್ತು ತಂಡ, ಹಾಸನ ಅವರಿಂದ ಸುಗಮ ಸಂಗೀತ.

ಗಾನಭಾರತಿ ವೇದಿಕೆ

ಸಂ. 4.00 : ಶ್ರೀ ಸಿಗಂಧೂರೇಶ್ವರ ಮಹಿಳಾ ಡೊಳ್ಳು ಜಾನಪದ ಕಲಾ ಟ್ರಸ್ಟ್, ಹೆಗ್ಗೋಡು ಅವರಿಂದ ಮಹಿಳಾ ಡೊಳ್ಳು
ಸಂ. 4.30 : ಶೋಭಾ ರಮೇಶ್ ಮತ್ತು ತಂಡ, ತಮಿಳುನಾಡು ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ
ಸಂ. 5.30 : ಸುಬ್ಬಲಕ್ಷ್ಮಿ ಮತ್ತು ತಂಡ, ಮೈಸೂರು ಅವರಿಂದ ಗಮಕ ವಾಚನ
ಸಂ. 6.15 : ಪ್ರತಿಭಾ ಗೋನಾಳ ಮತ್ತು ತಂಡದಿಂದ ಸುಗಮ ಸಂಗೀತ
ರಾ. 7.00 : ಕೊಪ್ಪಳ ಜಿಲ್ಲಾ ನಾಗರಿಕ ವೇದಿಕೆಯಿಂದ ಸಮೂಹ ನೃತ್ಯ
ರಾ. 8.00 : ಮಂಜುಳ ಎಂ. ಮತ್ತು ತಂಡದಿಂದ ಸುಗಮ ಸಂಗೀತ
ರಾ. 9.00 : ಉಮಾಮಹೇಶ್ವರ ಹೆಗಡೆ ಮತ್ತು ತಂಡ, ಶಿವಮೊಗ್ಗ ಅವರಿಂದ ತಾಳಮದ್ದಳೆ.

ರಮಾಗೋವಿಂದ ವೇದಿಕೆ

ಸಂ. 5.00 : ಸುಧಾಕರ್ ಮತ್ತು ತಂಡದಿಂದ ಸೋಮನ ಕುಣಿತ
ಸಂ. 5.30 : ಪ್ರಭುರಾವ್ ಮತ್ತು ತಂಡ, ಮೈಸೂರು ಅವರಿಂದ ವಚನ ಗಾಯನ
ಸಂ. 6.30 : ವಾಣಿ ನಾಗೇಂದ್ರ ಮತ್ತು ತಂಡ, ಹಾಸನ ಅವರಿಂದ ಸುಗಮ ಸಂಗೀತ
ರಾ. 7.30 : ಎಸ್ಕೋರ್ಡ್ ಟ್ರಸ್ಟ್, ಬೈಂದೂರು ಅವರಿಂದ ಯಕ್ಷಗಾನ.

ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು

ಸಂ. 4.00 : ಚಿಗುರು ಜಾನಪದ ಕಲಾ ಸಂಘ, ಹಾಸನ ಜಿಲ್ಲೆ ಸಿ.ಜೆ. ಭಾರತೀಶ್ ಅವರಿಂದ ಕೋಲಾಟ;
ಸಂ. 4.45 : ಎನ್.ಆರ್. ಬಸವಯ್ಯ (ಲಕ್ಷ್ಮೀರಾಮ್) ಮತ್ತು ತಂಡದಿಂದ ಜಾನಪದ ಗೀತೆ
ಸಂ. 5.30 : ಸವಿತಾ ಅಮರೇಶ್ ಮತ್ತು ತಂಡದಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ
ಸಂ. 6.30 : ಚಂದ್ರಶೇಖರ್ ಐ ಮತ್ತು ತಂಡ, ಹಾಸನ ಅವರಿಂದ ಜನಪದ ಗೀತೆ; ಶಿವಾನಿ ಎಂ.ಎಚ್. ಮತ್ತು ತಂಡ, ಬೆಂಗಳೂರು ಅವರಿಂದ ಭರತನಾಟ್ಯ
ರಾ. 8.30 : ಸಿರಿಕಲಾಮೇಳ, ಬೆಂಗಳೂರು, ಸುರೇಶ ಹೆಗಡೆ ಕಡತೋಕ ಅವರಿಂದ ಯಕ್ಷಗಾನ.

ಜಗನ್ಮೋಹನ ಅರಮನೆ ವೇದಿಕೆ

ಸಂ. 5.00 : ಶ್ರೀ ಬೆಟ್ಟಳ್ಳಿ ಮಾರಮ್ಮನ ಗೊರವರ ಕುಣಿತ ಕಲಾ ತಂಡ, ಚಾಮರಾಜನಗರ ಅವರಿಂದ ಗೊರವರ ಕುಣಿತ
ಸಂ. 5.30 : ಸುಜೀತ ಕುಲಕರ್ಣಿ ಮತ್ತು ತಂಡ, ಚಿತ್ರದುರ್ಗ ಅವರಿಂದ ಹಿಂದೂಸ್ಥಾನಿ ಸಂಗೀತ
ಸಂ. 6.30 : ಸುನಿತಾ ಪಿ. ಕುಲಕರ್ಣಿ ಮತ್ತು ತಂಡ, ಬಾಗಲಕೋಟೆ ಅವರಿಂದ ಭರತನಾಟ್ಯ
ರಾ. 7.30 : ಶ್ರೀ ಗೋಸಾಯಿ ಮಹಾಸಂಸ್ಥಾನ ಮಠ, ಬೆಂಗಳೂರು ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ
ರಾ. 8.30 : ನಾಟ್ಯಶ್ರೀ ಕಲಾ ತಂಡ, ಶಿವಮೊಗ್ಗ ಅವರಿಂದ ಯಕ್ಷಗಾನ : ಹನುಮಾರ್ಜುನ.

ಕರ್ನಾಟಕ ಕಲಾಮಂದಿರ ವೇದಿಕೆ

ಸಂ. 5.00 : ವಿದ್ವಾನ್ ಎಂ.ಆರ್. ಮಂಜುನಾಥ ಮತ್ತು ತಂಡ, ಮೈಸೂರು ಅವರಿಂದ ತಾಳವಾದ್ಯ ಲಹರಿ
ಸಂ. 5.30 : ರೇವತಿ ನೃತ್ಯ ಕಲಾಮಂದಿರ, ತುಮಕೂರು ಅವರಿಂದ ಭರತನಾಟ್ಯ
ಸಂ. 6.30 : ಗುರುಕಿರಣ ಜೆ. ಯಲಿಗಾರ ಮತ್ತು ತಂಡ, ಬೆಂಗಳೂರು ಅವರಿಂದ ಸಂಗೀತ ಕಾರ್ಯಕ್ರಮ
ರಾ. 7.30 : ಹೊರನಾಡ ಕನ್ನಡಿಗರು, ಕರ್ನಾಟಕ ಸಂಘ, ಚೆನ್ನೈ ದಾಕ್ಷಾಯಿಣಿ ಎಸ್. ದಳವಾಯಿ ಅವರಿಂದ ನೃತ್ಯರೂಪಕ
ರಾ. 8.30 : ಪ್ರಸಾದ ಸುತಾರ ಮತ್ತು ತಂಡ, ಗದಗ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ.

ಬಿ.ಎಂ. ಶ್ರೀ ಸಭಾಂಗಣ

ಬೆ. 9.30 : ಪ್ರುಚುರ ಕವಿಗೋಷ್ಠಿ, ಉದ್ಘಾಟನೆ : ಗೀತ ರಚನೆಕಾರ ಜೋಗಿ ಪ್ರೇಮ್, ಗೀತಯಾನ : ಡಾ. ಸುಮಂತ್ ವಸಿಷ್ಠ ಮತ್ತು ತಂಡ; ಅಧ್ಯಕ್ಷತೆ : ಕವಯಿತ್ರಿ ಡಾ. ಸುಕನ್ಯ ಮಾರುತಿ, ಮುಖ್ಯ ಅತಿಥಿಗಳು : ಕವಿ ರಾಜೇಂದ್ರ ಪ್ರಸಾದ್, ಶಿವಾನಂದ ತಗಡೂರು.

ಉತ್ತನಹಳ್ಳಿ ಬಳಿ ಯುವ ದಸರಾ


ಪ್ರೀತಮ್

ಸಂ. 6.00 : ಉತ್ತನಹಳ್ಳಿ ರಿಂಗ್ ರಸ್ತೆಯ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಸ್ಥಾನದ ಬಳಿ ಯುವ ದಸರಾ : ಸಂಗೀತ, ನಿರ್ದೇಶಕ–ಸಂಯೋಜಕ, ಗಾಯಕ ಪ್ರೀತಮ್ ಚಕ್ರವರ್ತಿ ಅವರಿಂದ ಸಂಗೀತ ಸಂಜೆ ಹಾಗೂ ಶೋರೆ ಪೊಲೀಸ್ ಗಾಯಕರ ತಂಡದಿಂದ ಸಂಗೀತ ಕಾರ್ಯಕ್ರಮ

ಲಲಿತಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ

ತೊಗಲು ಗೊಂಬೆ ಭಿತ್ತಿ ಚಿತ್ರಕಲಾ ಶಿಬಿರ ಮತ್ತು ಮೈಸೂರು ಶೈಲಿಯ ಸಾಂಪ್ರಾದಾಯಿಕ ಚಿತ್ರಕಲೆ ಪ್ರದರ್ಶನ, ಸಂಜೆ 4.30 ರಿಂದ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ತಂಜಾವೂರು ಅವರಿಂದ ಜಾನಪದ ನೃತ್ಯ, ಮೈಸೂರು ವಿವಿ ಲಲಿತಕಲಾ ಕಾಲೇಜು ವಿದ್ಯಾರ್ಥಿ ಗಳಿಂದ ರಂಗ ಸಂಗೀತ, ಸ್ಥಳ: ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು (ಕಾವಾ), ಸಿದ್ಧಾರ್ಥನಗರ.

ಕರ್ನಾಟಕ ಕಲಾ ಮಂದಿರ

ಸಾಂಸ್ಕೃತಿಕ ಕಾರ್ಯಕ್ರಮ, ಬೆಳಗ್ಗೆ 9.30ಕ್ಕೆ.

ರಂಗಾಯಣ

ರಂಗ ಭೀಷ್ಮ ಬಿ.ವಿ. ಕಾರಂತ ಕಾಲೇಜು ನವರಾತ್ರಿ ರಂಗೋತ್ಸವ, ಹಾರ್ಡ್ವಿಕ್ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ರಾಕ್ಷಸ ನಾಟಕ ಪ್ರದರ್ಶನ, ರಚನೆ: ಹೂಲಿ ಶೇಖರ್, ನಿರ್ದೇಶನ : ಅಂಕರಾಜು ಎನ್. ಕೊಳ್ಳೇಗಾಲ.

ದೈನಂದಿನ ಆಕರ್ಷಣೆಗಳು

ಬೆ. 9 ರಿಂದ ರಾ. 9 : ದಸರಾ ಫಲಪುಷ್ಪ ಪ್ರದರ್ಶನ, ಕುಪ್ಪಣ್ಣ ಪಾರ್ಕ್, ಜಯಚಾಮರಾಜ ಒಡೆಯರ್ ಸರ್ಕಲ್ (ಹಾರ್ಡಿಂಜ್ ವೃತ್ತ)
ಬೆ. 6.30 ರಿಂದ ಸಂ 5.30 : ದಸರಾ ಫಲಪುಷ್ಪ ಪ್ರದರ್ಶನ, ಕುಕ್ಕರಹಳ್ಳಿ ಕೆರೆ
ಬೆ. 9 ರಿಂದ ರಾ. 9 : ದಸರಾ ಫಲಪುಷ್ಪ ಪ್ರದರ್ಶನ, ಲಿಂಗಾಂಬುದ್ಧಿ ಬಟಾನಿಕಲ್ ಗಾರ್ಡನ್
ಮ. 1, 4 ಮತ್ತು ಸಂಜೆ 7 : ಜೆಮಿನಿ ಸರ್ಕಸ್, ಹಾರ್ಸ್ ಪಾರ್ಕ್ ಮೈದಾನ, ಕಾರಂಜಿ ಕೆರೆ ಸಮೀಪ (3 ಪ್ರದರ್ಶನ)
ಸಂಜೆ 6, 7, 8 ಮತ್ತು ರಾತ್ರಿ 9 : ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ– ದಿನ 4 ಟ್ರಿಪ್),
ಬೆ. 10 ರಿಂದ 5 : ಕಲಾ ವಸ್ತುಪ್ರದರ್ಶನ, ಕಾವಾ, ಸಿದ್ಧಾರ್ಥನಗರ
ಬೆ. 10 ರಿಂದ ರಾತ್ರಿ 8 : ರೈಲ್ ಮ್ಯೂಸಿಯಂ (ಸಂಜೆ ದೀಪಾಲಂಕಾರ)

ಮೂರನೇ ಪುಟದಿಂದ

ಅಪಘಾತಗಳ ಮೂಲಕ ಪುಂಡರಿಂದ ಸುಲಿಗೆ

ತಮ್ಮಯ್ಯ, ಕಳೆದ ಶನಿವಾರ ವಿಜಯ ನಗರ ಮೂರನೇ ಹಂತದ ಮೂಲಕ ಜಯಲಕ್ಷ್ಮೀಪುರಂನ ಕಾಳಿದಾಸ ರಸ್ತೆ ಕಡೆಗೆ ತಮ್ಮ ಕಾರಿನಲ್ಲಿ ಹೋಗುತ್ತಿದ್ದರು. ಆಗ ಬೆಳಿಗ್ಗೆ ಸುಮಾರು 11.30 ಗಂಟೆ. ವಿಜಯನಗರ 3ನೇ ಹಂತದ ಐಶ್ವರ್ಯ ಪೆಟ್ರೋಲ್ ಬಂಕ್ ಬಳಿಯ ಕೆನರಾ ಬ್ಯಾಂಕ್ ಎದುರು ಕಾರಿನ ಹಿಂದೆ ಎಡ ಭಾಗದಲ್ಲಿ ಶಬ್ಧ ಕೇಳಿಬಂದಿದೆ. ಈಗಾಗಲೇ ನಕಲಿ ಅಪ ಘಾತ ವಂಚಕರ ಬಗ್ಗೆ ಪತ್ರಿಕೆ ಓದಿ ಅರಿತಿದ್ದ ಕಿರಿಯಮಾಡ ತಮ್ಮಯ್ಯನವರು, ಅದೇ ಮಾದರಿಯ ವಂಚಕರಿರಬಹುದೆಂದು ಎಚ್ಚೆತ್ತು ಕಾರು ನಿಲ್ಲಿಸದೇ ಮುಂದೆ ಸಾಗಿದ್ದಾರೆ.

ಸ್ವಲ್ಪ ದೂರ ಹೋಗುತ್ತಿದ್ದಂತೆಯೇ ದ್ವಿಚಕ್ರ ವಾಹನದಲ್ಲಿ ಹಿಂಬಾಲಿಸಿದ ಯುವಕ ನೋರ್ವ ಕಾರಿನ ಎಡಬದಿ ಬಂದು ಗೌಡ್ರೇ ಎಂದು ಜೋರಾಗಿ ಕೂಗಿ ಅವರ ಗಮನ ಸೆಳೆಯಲು ಯತ್ನಿಸಿದ್ದಾನೆ. ಆದರೆ ಕೇಳಿಯೂ ಕೇಳದಂತೆ ಅವರು ಕಾರು ನಿಲ್ಲಿಸದೇ ಅದೇ ವೇಗದಲ್ಲಿ ಮುಂದೆ ಸಾಗಿದ್ದಾರೆ.

ಆ ವೇಳೆ ಕಾರಿನ ಬಾಗಿಲಿನ ಗ್ಲಾಸ್ ಸ್ವಲ್ಪ ತೆರೆದಿದ್ದು, ಉಳಿದ ಎಲ್ಲಾ ಕಿಟಕಿಗಳ ಗಾಜು ಮುಚ್ಚಿತ್ತು. ಒಂದು ವೇಳೆ ಕಾರಿನ ವೇಗ ತಗ್ಗಿಸಿದ್ದರೆ ಇಲ್ಲ ಕಾರು ನಿಲ್ಲಿಸಿದ್ದರೆ, ವಂಚಕ ನನ್ನ ಬಳಿ ಹಣ ಕೀಳುತ್ತಿದ್ದ. ಮುಂದೆ ಸ್ವಲ್ಪ ದೂರದಲ್ಲಿ ಒಂದು ಪೊಲೀಸ್ ವಾಹನ ಹಾಗೂ ಕೆಲವರು ನಿಂತಿರುವುದು ಕಂಡಿತು. ಅವರ ಸಹಾಯ ಪಡೆಯಬಹು ದೆಂಬ ಧೈರ್ಯದಿಂದ ಅವರು ಮುಂದೆ ಸಾಗುತ್ತಿದ್ದಂತೆ, ಹಿಂದೆ ಬರುತ್ತಿದ್ದ ವ್ಯಕ್ತಿ ಕಣ್ಮರೆಯಾಗಿದ್ದ ಎಂದು ಕಿರಿಯಮಾಡ ತಮ್ಮಯ್ಯ 'ಮೈಸೂರು ಮಿತ್ರ'ನಲ್ಲಿ ತಮಗಾದ ಅನುಭವ ತಿಳಿಸಿದ್ದಾರೆ.

ಸುರಕ್ಷಿತವಾಗಿ ಮನೆ ತಲುಪಿದ ನಾನು ಕಾರನ್ನು ಪರಿಶೀಲಿಸಿದಾಗ ಯಾವ ಭಾಗ ದಲ್ಲೂ ಅಪಘಾತದ ಗುರುತು ಕಂಡು ಬರಲಿಲ್ಲ. ನನ್ನ ಬಳಿ ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್‌ಗಳಿದ್ದವು. ಒಂದು ವೇಳೆ ವಂಚಕನಿಗೆ ನಾನು ಸಿಕ್ಕಿಬಿದ್ದಿದ್ದರೆ ಆತ ಸಾಕಷ್ಟು ಹಣ ವನ್ನು ಸುಲಿಗೆ ಮಾಡುತ್ತಿದ್ದ. ಈ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸ ಲಿಲ್ಲ. ಆದರೆ ಸಮಾಜದಲ್ಲಿ ಈ ಬಗೆಯ ದುಷ್ಕರ್ಮಿಗಳು ತಮ್ಮ ಕೃತ್ಯವೆಸಗುತ್ತಿರು ವುದರಿಂದ ಹಿರಿಯ ನಾಗರಿಕರು ಎಚ್ಚರಿಕೆ ವಹಿಸುವುದು ಅವಶ್ಯ ಎಂದರು.

61 ಸಾವಿರ ಸುಲಿಗೆ ಮಾಡಿದ್ದರು: ಮೈಸೂರಿನ ಬೃಂದಾವನ ಬಡಾವಣೆಯ 71 ವರ್ಷದ ಹಿರಿಯ ನಾಗರಿಕರೊಬ್ಬರು ಆಗಸ್ಟ್ 22 ರಂದು ಬೆಳಗ್ಗೆ 10.50ರ ಸಮಯ ದಲ್ಲಿ ತಮ್ಮ ವ್ಯಾಗನ್‌ಆರ್ ಕಾರಿನಲ್ಲಿ ಶ್ರೀಮತಿಯವರನ್ನು ಹೆಬ್ಬಾಳಿನ ಸೂರ್ಯ ಬೇಕರಿ ಸರ್ಕಲ್ ಬಳಿಯ ಸಂಬಂಧಿಕರ ಮನೆಗೆ ಡ್ರಾಪ್ ಮಾಡಿ, ಹಿಂದಿರುಗುತ್ತಿ ದ್ದಾಗ ಹೈಟೆನ್ಷನ್ ರೋಡ್‌ನ ವಿದ್ಯಾ ವರ್ಧಕ ಇಂಜಿನಿಯರ್ ಕಾಲೇಜು ಎದುರು ಕಾರಿನ ಹಿಂಬದಿ ಯಾವುದೋ ಶಬ್ಧ ಕೇಳಿ ಬಂದಿದೆ. ಆದರೆ ಮುಂದೆ ಸಾಗಿ ತ್ರಿನೇತ್ರ ಸರ್ಕಲ್ ಬಳಿಯ ಮೀನು ಮಾರಾಟ ಮಳಿಗೆ ಬಳಿ ಕಾರು ನಿಲ್ಲಿಸಿ ಡೋರ್ ತೆಗೆಯು ತ್ತಿದ್ದಂತೆಯೇ ಯುವಕನೋರ್ವ ಕಾರಿನ ಮುಂಭಾಗದ ಎಡಬದಿ ಬಾಗಿಲ ಮೂಲಕ ನುಗ್ಗಿ ಕುಳಿತುಕೊಂಡ ಎಂದು ಹೆಸರೇಳಲಿ ಚ್ಛಿಸದ ಹಿರಿಯ ನಾಗರಿಕರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಸುಮಾರು 27 ರಿಂದ 28 ವರ್ಷದ ಆ ಯುವಕ ನೀವು ವಿದ್ಯಾವರ್ಧಕ ಇಂಜಿನಿ ಯರ್ ಕಾಲೇಜು ಬಳಿ ಬೈಕ್‌ಗೆ ಡಿಕ್ಕಿ ಹೊಡೆದು ಬಂದಿದ್ದೀರಿ. ಹಿಂಬದಿ ಕುಳಿತಿದ್ದ ನನ್ನ ಸ್ನೇಹಿತನಿಗೆ ತೀವ್ರ ಗಾಯಗಳಾಗಿ ಒದ್ದಾಡುತ್ತಿದ್ದಾನೆ. ಅಲ್ಲಿ ನೂರಾರು ಮಂದಿ ಸೇರಿದ್ದು ಅಲ್ಲಿಗೆ ಬಂದರೆ ನಿಮ್ಮ ಕಾರನ್ನು ಸುಟ್ಟುಹಾಕುತ್ತಾರೆ. ಆತನ ಚಿಕಿತ್ಸೆಗೆ 4 ಲಕ್ಷ ರೂ. ಖರ್ಚಾಗುತ್ತದೆ. ಹಣ ಕೊಡು ವಂತೆ ಒತ್ತಾಯಿಸಿದ. ನನ್ನ ಬಳಿ ಹಣವಿಲ್ಲ ಕೇವಲ 1,500 ರೂ. ಮಾತ್ರವಿದೆ ಎಂದು ಹೇಳಿ ಅದನ್ನೇ ಕೊಟ್ಟೆ, ಆದರೆ, ಅಷ್ಟಕ್ಕೇ ಸುಮ್ಮನಾಗದ ಯುವಕ ನನ್ನ ಕೈಯಿಂದ ಮೊಬೈಲ್ ಕಿತ್ತುಕೊಂಡು ಬ್ಯಾಂಕಿಂಗ್ ಕೋಡ್, ಮತ್ತಿತರ ಮಾಹಿತಿಯನ್ನು ಬಲವಂತ ವಾಗಿ ಕೇಳಿ ಪಡೆದುಕೊಂಡು ಅದರಿಂದ ಎರಡು ಬಾರಿ 30 ಸಾವಿರದಂತೆ ಒಟ್ಟು 60,000 ರೂ.ಗಳನ್ನು ಆನ್‌ಲೈನ್‌ನಲ್ಲಿ ಟ್ರಾನ್ಸ್‌ಫರ್ ಮಾಡಿಕೊಂಡ ಎಂದರು.

ಉರ್ದು ಮಿಶ್ರಿತ ಕನ್ನಡ ಮಾತನಾಡು ತ್ತಿದ್ದ ಆ ಯುವಕ ತನ್ನ ಹೆಸರು ರವಿ ಎಂದನಲ್ಲದೇ ನೀವು ಇಲ್ಲೇ ನಿಂತಿದ್ದರೆ ಗಲಾಟೆಯಾಗಬಹುದು ಹೊರಡಿ. ಗಾಯ ಗೊಂಡಿರುವ ನನ್ನ ಸ್ನೇಹಿತನನ್ನು ಆಸ್ಪತ್ರೆಗೆ ಕರೆದೊಯ್ಯುತ್ತೇನೆ ಎಂದನಂತೆ. ಘಟನೆ ಯಿಂದ ಗಾಬರಿಗೊಂಡಿದ್ದ ಹಿರಿಯ ನಾಗರಿಕರು ಅಲ್ಲಿಂದ ಹೊರಟು ವಿ.ವಿ. ಪುರಂ ಠಾಣೆ ಯಲ್ಲಿ ನಡೆದ ಘಟನೆ ಬಗ್ಗೆ ವಿವರಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಇನ್ಸ್ ಪೆಕ್ಟರ್ ವಿವೇಕಾನಂದ, ತನಿಖೆ ಕೈಗೊಂಡು ನಕಲಿ ಅಪಘಾತದ ನೆಪದಲ್ಲಿ ಹಣ ಸುಲಿಗೆ ಮಾಡುತ್ತಿರುವ ದುಷ್ಕರ್ಮಿಯ ಪತ್ತೆಗೆ ವ್ಯಾಪಕ ಶೋಧ ನಡೆಸುತ್ತಿದ್ದಾರೆ.

ಮತ್ತೊಂದು ವಿಫಲ ಯತ್ನ: ಮೈಸೂರಿನ ಟಿ.ಕೆ. ಲೇಔಟ್ 3ನೇ ಹಂತದ ನಿವಾಸಿ ಎನ್.ಗಂಗರಾಜು ಹಾಗೂ ನಿವೃತ್ತ ಅಧಿಕಾರಿ, ಗ್ಯಾಂಗ್‌ನ ಕೃತ್ಯಕ್ಕೆ ಒಳಗಾ ದರೂ ತಮ್ಮ ಧೈರ್ಯದಿಂದ ದುಷ್ಕರ್ಮಿ ಗಳಿಂದ ಪಾರಾಗಿದ್ದಾರೆ. ಮೇ 27 ರಂದು ರಾತ್ರಿ ಸುಮಾರು 10.15ರ ಸಮಯದಲ್ಲಿ ದಟ್ಟಗಳ್ಳಿಯ ಆದಿತ್ಯ ಸರ್ಕಲ್ ಬಳಿ ರಿಂಗ್ ರಸ್ತೆಯ ಹೋಟೆಲ್‌ವೊಂದರಲ್ಲಿ ಇಬ್ಬರೂ ಊಟ ಮುಗಿಸಿಕೊಂಡು, ನಮ್ಮ ಬಲೆನೋ ಕಾರಿನಲ್ಲಿ ಹಿಂದಿರುಗುತ್ತಿದ್ದಾಗ ಏಕಾಏಕಿ ನುಗ್ಗಿ ಬಂದ ಆಟೋ ಡಿಕ್ಕಿ ಹೊಡೆದು ಕಾರಿನ ಮುಂಭಾಗ ಜಖಂಗೊಂಡಿದೆ.

ತಕ್ಷಣ ಆಟೋದಲ್ಲಿದ್ದ ಐವರ ಗುಂಪು ನಮ್ಮನ್ನು ಅವಾಚ್ಯ ಶಬ್ಧಗಳಿಂದ ಬೈದು ಕಿರುಚಾಡಿದರು. ನಂತರ ತಮ್ಮ ಆಟೋ ಜಖಂ ಆಗಿರುವುದರಿಂದ 50,000 ರೂ ಹಣ ನೀಡುವಂತೆ ಒತ್ತಾಯಿಸಿದರು. ಅಲ್ಲದೇ ನೀವು ಕುಡಿದು ಅಪಘಾತ ಮಾಡಿದ್ದೀರಿ ಎಂದು ಬೆದರಿಕೆಯೊಡ್ಡಿದರು. ನಾವು ಕೇವಲ ಊಟ ಮಾಡಿದ್ದೇವೆಯೇ ಹೊರತು ಮದ್ಯ ಸೇವಿಸಿಲ್ಲವೆಂದು ಎಷ್ಟೇ ಹೇಳಿದರೂ ಕೇಳಲಿಲ್ಲ.

ಕಡೆಗೆ ನಾವು ಪೊಲೀಸರಿಗೆ ಕರೆ ಮಾಡಲು ಪ್ರಯತ್ನಿಸಿದಾಗ ಹೊಡೆದು ಫೋನ್ ಅನ್ನು ಕೆಳಗೆ ಬೀಳಿಸಿದರು. ಹಣಕ್ಕೆ ತೀವ್ರ ಒತ್ತಾಯ ಮಾಡಿದಾಗ ನನ್ನ ಬಳಿ ಹಣವಿಲ್ಲ, ಹೋಟೆಲ್‌ಗೆ ಹೋಗಿ ಮಾಲೀಕ ರಿಂದ ತೆಗೆದುಕೊಂಡು ಬರುತ್ತೇವೆಂದು ಹೇಳಿ ಹೋಟೆಲ್‌ಗೆ ಬಂದು ಪೊಲೀಸರಿಗೆ ಫೋನ್ ಮಾಡಿ ಹೊರ ಬರುವಷ್ಟರಲ್ಲಿ ಯಾರೋ ಸಾರ್ವಜನಿಕರು ನೀಡಿದ ಮಾಹಿತಿಯಿಂದ ಕುವೆಂಪುನಗರ ಠಾಣೆ ಪೋಲಿಸರು ಸ್ಥಳಕ್ಕೆ ಬಂದಿದ್ದರು. ನಾವು ಅವರಿಗೆ ನಡೆದ ಘಟನೆಯನ್ನು ವಿವರಿಸಿದೆವು. ಆದರೆ, ಆಟೋದಲ್ಲಿದ್ದವರು ಮದ್ಯಪಾನ ಮಾಡಿ ಆಟೋಗೆ ಡಿಕ್ಕಿ ಹೊಡೆದಿದ್ದಾ ರೆಂದು ವಾದಿಸಿದರು. ಕಡೆಗೆ ಪೊಲೀಸರು ನಮ್ಮನ್ನು ವೈದ್ಯಕೀಯ ತಪಾಸಣೆ ಮಾಡಿಸಿದಾಗ ನೆಗೆಟಿವ್ ಬಂದಿತು.

ಇತ್ತ ಸ್ಥಳದಲ್ಲಿದ್ದ ಸಿಸಿ ಕ್ಯಾಮರಾ ಫುಟೇಜ್ ಗಳನ್ನು ಪರಿಶೀಲಿಸಿದಾಗ ಆಟೋ ಏಕ ಮುಖ ಸಂಚಾರದಲ್ಲಿ ಬಂದು ಕಾರಿಗೆ ಡಿಕ್ಕಿ ಹೊಡೆದು, ಅದರಲ್ಲಿದ್ದವರು ಹಣಕ್ಕಾಗಿ ದಾಂದಲೆ ಮಾಡಿದ್ದು ಖಾತರಿಯಾಗುತ್ತಿ ದ್ದಂತೆಯೇ ಡ್ರೈವರ್ ಬಿಟ್ಟು ಉಳಿದ ನಾಲ್ವರು ಅಲ್ಲಿಂದ ಕಾಲ್ಕಿತ್ತರು. ಕಡೆಗೆ ಸತ್ಯ ಸಂಗತಿ ತಿಳಿದ ಪೊಲೀಸರು ಗಂಗರಾಜು ಅವರ ಕಾರು ಡ್ಯಾಮೇಜ್ ಆಗಿದ್ದರಿಂದ ಮಾಂಡೋವಿ ಮೋಟಾರ್ಸ್‌ನಲ್ಲಿ ತಗಲಿದ 15,000 ರೂ ವೆಚ್ಚವನ್ನು ಆಟೋ ಡ್ರೈವರ್ ನಿಂದ ಕೊಡಿಸಿ ಮುಚ್ಚಳಿಗೆ ಬರೆಸಿಕೊಂಡು ಕಳುಹಿಸಿದರು ಎಂದು ತಿಳಿಸಿದರು.

ದಟ್ಟಗಳ್ಳಿ ಕುವೆಂಪುನಗರ, ಸರಸ್ವತಿ ಪುರಂ, ಆರ್.ಟಿ. ನಗರ ಸೇರಿದಂತೆ ಆ ಭಾಗದ ರಿಂಗ್ ರಸ್ತೆ ಹಾಗೂ ಇನ್ನಿತರ ನಿರ್ಜನ ಪ್ರದೇಶದಲ್ಲಿ ನಿವೃತ್ತರು, ವಯಸ್ಸಾ ದವರನ್ನೇ ಟಾರ್ಗೆಟ್ ಮಾಡಿ, ನಕಲಿ ಅಪಘಾತದ ನೆಪದಲ್ಲಿ ಹಣ ಸುಲಿಗೆ ಮಾಡುತ್ತಿರುವ ಪ್ರಕರಣಗಳು ಹೆಚ್ಚಾಗು ತ್ತಿವೆ. ಪೊಲೀಸರು ನಿರಂತರವಾಗಿ ಗಸ್ತು ಕಾರ್ಯಾ ಚರಣೆ ನಡೆಸಿ ದುಷ್ಕರ್ಮಿಗಳ ಜೈಲಿಗೆ ಕಳುಹಿಸದಿದ್ದರೆ ಕಾನೂನು–ಸುವ್ಯವಸ್ಥೆ ಹಾಳಾಗಲಿದೆ. ಜನ ಸಾಮಾನ್ಯರಿಗೆ ಕಂಟಕವಾಗಲಿದೆ ಎಂದು ಗಂಗರಾಜು ಅಭಿಪ್ರಾಯಪಟ್ಟಿದ್ದಾರೆ.

ಕಾವೇರಿ ಆರತಿ

ಸುತ್ತೂರು ಮಹಾ ಸಂಸ್ಥಾನ ಮಠಾಧ್ಯಕ್ಷರಾದ ಶ್ರೀ ಡಾ. ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮೀಜಿ, ಸಿದ್ಧಗಂಗಾ ಮಠದ ಅಧ್ಯಕ್ಷರಾದ ಶ್ರೀ ಸಿದ್ದಲಿಂಗ ಸ್ವಾಮೀಜಿ, ವಿಶ್ವ ಒಕ್ಕಲಿಗ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ಕೃಷಿ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾದ ಚಲುವರಾಯಸ್ವಾಮಿ, ಮಂಡ್ಯ ಜಿಲ್ಲೆಯ ಶಾಸಕರುಗಳಾದ ರಮೇಶ್ ಬಾಬು ಬಂಡಿಸಿದ್ದೇಗೌಡ, ನರೇಂದ್ರಸ್ವಾಮಿ, ರವಿಕುಮಾರ್ ಗಣಿಗ, ಕೆ.ಎನ್.ಉದಯ್, ದರ್ಶನ್ ಪುಟ್ಟಣ್ಣಯ್ಯ, ಮಧು ಮಾದೇ ಗೌಡ, ದಿನೇಶ್ ಗೂಳಿಗೌಡ ಸೇರಿದಂತೆ ಜಿಲ್ಲೆಯ ಜನಪ್ರತಿ ನಿಧಿಗಳು, ನೀರಾವರಿ ನಿಗಮದ ಅಧಿಕಾರಿಗಳು ಪಾಲ್ಗೊಳ್ಳುವರು.

ನದಿಯಷ್ಟೇ ಪವಿತ್ರಳು ಕಾವೇರಿ

ವೀಕ್ಷಿಸಿ ಸರ್ಕಾರಕ್ಕೆ ವರದಿ ನೀಡಿತ್ತು. ಆ ಪ್ರಕಾರ ಸರ್ಕಾರ ಕಾವೇರಿ ಆರತಿ ಮಾಡಲು ತೀರ್ಮಾನಿಸಿ, ಸುಮಾರು 10 ಸಾವಿರ ಜನರು ಭವ್ಯ ಕಾರ್ಯಕ್ರಮ ವೀಕ್ಷಣೆ ಮಾಡಬಹುದಾದ ಬೃಹತ್ ಸ್ಟೇಡಿಯಂ ನಿರ್ಮಿಸಲು ಸಚಿವ ಸಂಪುಟ ಅನುಮೋದನೆ ನೀಡಿತು. ಈ ಬಾರಿಯ ದಸರಾದಲ್ಲಿ ಸಾಂಕೇತಿಕವಾಗಿ 5 ದಿನಗಳ ಕಾಲ ಕೆಆರ್‌ಎಸ್‌ನಲ್ಲಿ ಕಾವೇರಿ ತಾಯಿಗೆ ಆರತಿ ಮಾಡಲು ನಿರ್ಧರಿಸಲಾಗಿದೆ. ರಾಜ್ಯ ದಲ್ಲಿ ಮಳೆ, ಬೆಳೆ ಒಳ್ಳೆಯದಾಗಲಿ, ರಾಜ್ಯಕ್ಕೆ ಸನ್ಮಂಗಳವಾಗಲಿ ಎಂದು ತಾಯಿ ಕಾವೇರಿಯಲ್ಲಿ ಪೂಜೆ ಮಾಡಿ ಪ್ರಾರ್ಥಿಸಲಾಗುವುದು ಎಂದು ಸಚಿವರು ವಿವರಿಸಿದ್ದಾರೆ.

ಕುಣಿದು ಕುಪ್ಪಳಿಸಿದ ಯುವ ಸಮೂಹ

ಅನುಪಮ ಭಟ್ ನಿರೂಪಣೆ ನೀಡಿ ಪ್ರೇಕ್ಷಕರ ಎದೆಗೆ ಲಗ್ಗೆಯಿಟ್ಟರು.

ಗ್ರ್ಯಾಂಡ್ ಎಂಟ್ರಿ: ಮುಗಿಲು ಮುಟ್ಟು ವಂತೆ ಸೂಸುತ್ತಿದ್ದ ಮ್ಯೂಸಿಕ್‌ನೊಂದಿಗೆ ಗ್ರ್ಯಾಂಡ್ ಎಂಟ್ರಿ ಕೊಟ್ಟ ಅರ್ಜುನ್ ಜನ್ಯ, ಮ್ಯೂಸಿಕಲ್ ರ್‍ಯಾಂಪ್ ವಾಕ್ ಮೂಲಕ ತಮ್ಮ ತಂಡದ ಗಾಯಕರು, ಸಂಗೀತಗಾರ ರನ್ನು ವೇದಿಕೆಗೆ ಕರೆಸಿ ಅವರನ್ನು ಪ್ರೇಕ್ಷಕರಿಗೆ ವಿನೂತನ ಮಾದರಿಯಲ್ಲಿ ಪರಿಚಯಿಸಿ ದರು. ಗಾಯಕರಾದ ವ್ಯಾಸರಾಜ್, ಪೃಥ್ವಿ, ಐಶ್ವರ್ಯ ರಂಗರಾಜನ್, ಹೇಮಂತ್, ಇಂದು ನಾಗರಾಜ್, ಜಸ್ಕರಣ ಸಿಂಗ್, ಕೀರ್ತನ್ ಹೊಳ್ಳ ಗಾನದ ಘಮಲು ಸೂಸಿದರೆ, ಇವರಿಗೆ ಖ್ಯಾತ ಮ್ಯೂಸಿಷಿಯನ್‌ಗಳು ಗೀಟರ್, ಕೀ ಬೋರ್ಡ್, ಡ್ರಮ್ ಸೇರಿದಂತೆ ಮೊದಲಾದ ಸಂಗೀತ ಸಲಕರಣೆಗಳ ಮೂಲಕ ಮುಗಿಲು ಮುಟ್ಟುವಂತೆ ಮ್ಯೂಸಿಕ್ ಹೊಮ್ಮಿಸಿ, ಪ್ರೇಕ್ಷಕರಲ್ಲಿ ರೋಮಾಂಚನ ಉಂಟು ಮಾಡಿದರು.

'ಪೈಲ್ವಾನ್' ಚಿತ್ರದ ಟೈಟಲ್ ಸಾಂಗ್ 'ಬಂದ ನೋಡು ಪೈಲ್ವಾನ್...', 'ರೋಮಿಯೋ' ಚಿತ್ರದ 'ಆಲೋಚನೆ ಆರಾಧನೆ ಎಲ್ಲಾ ನಿಂದೇನೆ...' ಗೀತೆಗಳು ಪ್ರೇಕ್ಷಕರನ್ನು ಹೆಚ್ಚೆದ್ದು ಕುಣಿಯುವಂತೆ ಮಾಡಿದವು. 'ವೇದ' ಸಿನಿಮಾದಲ್ಲಿ ತಮ್ಮದೇ ಕಂಠಸಿರಿ ಯಲ್ಲಿ ಮೂಡಿಬಂದಿರುವ ಗೀತೆಯನ್ನು ಇಂದು ನಾಗರಾಜ್ ಸಾದರಪಡಿಸಿದರೆ, 'ಬಿರುಗಾಳಿ' ಚಿತ್ರದ 'ಹೂವಿನ ಬಾಣದಂತೆ...' ಗೀತೆಯನ್ನು ಐಶ್ವರ್ಯ ರಂಗರಾಜನ್ ಪ್ರಸ್ತುತಪಡಿಸಿ ಅಭಿಮಾನದ ಚಪ್ಪಾಳೆ ಗಿಟ್ಟಿಸಿದರು.

ಲಗೋರಿ ಬ್ಯಾಂಡ್ ಲಗ್ಗೆ: ಇದಕ್ಕೂ ಮುನ್ನ ಲಗೋರಿ ಬ್ಯಾಂಡ್ ತಂಡ ನಡೆಸಿ ಕೊಟ್ಟ ಸಂಗೀತ ಕಾರ್ಯಕ್ರಮವೂ ಪ್ರೇಕ್ಷಕರು ನರ್ತಿಸಿ ನಲಿಯುವಂತೆ ಮಾಡಿತು. ತಂಡದ ಗಾಯಕ ವೇದಿಕೆಯಲ್ಲಿ ಕುಣಿದು ಕುಪ್ಪಳಿಸಿ ಸಂಗೀತ ಪ್ರಸ್ತುತಪಡಿಸಿ ಯುವ ಪಡೆಗೆ ಲಗ್ಗೆಯಿಟ್ಟರು. ಈ ತಂಡದ ಗಾಯಕಿ ಜಾನವಿ, 'ಬೆಳಗೆದ್ದು ಯಾರ ಮುಖವಾ ನಾನು ನೋಡಿದೆ...' ಸೇರಿದಂತೆ ವಿವಿಧ ಗೀತೆಗಳನ್ನು ಹಾಡಿದ್ದಲ್ಲದೆ, ಕುಣಿದು ಬೆಡಗು ಬಿನ್ನಾಣದೊಂದಿಗೆ ಯುವಕರ ಮನಕ್ಕೆ ಲಗ್ಗೆಯಿಟ್ಟರು. ಪಾಶ್ಚಿಮಾತ್ಯ ಸಂಗೀತ ಶೈಲಿಯಲ್ಲಿ ನಾಡಿನ ಜಾನಪದ ಗೀತೆಗಳನ್ನು ಸಾದರ ಪಡಿಸಿದ ಈ ತಂಡ ರೋಮಾಂಚನ ಉಂಟು ಮಾಡಿತು. ಇಡೀ ಮೈದಾನದ ಎಲ್ಲಾ ಆಸನಗಳು ಭರ್ತಿಯಾಗಿ ದ್ದವು. ವಿಶೇಷವಾಗಿ ಯುವ ಜನರೇ ಹೆಚ್ಚಿನ ಸಂಖ್ಯೆಯಲ್ಲಿ ನೆರೆದು, ಸಂಭ್ರಮಿಸಿದರು. ತಾವಿ ದ್ದಲ್ಲೇ ಸಂಗೀತ ಗಾನಕ್ಕೆ ಹೆಜ್ಜೆ ಹಾಕಿದರು.


ಯುವ ದಸರಾಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

ಕಿರಿಕಿರಿಯೂ ಇತ್ತು: ಈ ನಡುವೆ ಕೆಲ ಅವ್ಯವಸ್ಥೆಯೂ ಹಲವರಿಗೆ ಕಿರಿಕಿರಿ ಉಂಟು ಮಾಡಿತು. ಯಾವ ದ್ವಾರದಲ್ಲಿ ಯಾರಿಗೆ ಪ್ರವೇಶ ನೀಡಬೇಕೆಂಬ ಬಗ್ಗೆ ಸ್ಥಳದಲ್ಲಿದ್ದ ಪೊಲೀಸರಿಗೆ ಸಮರ್ಪಕ ಮಾಹಿತಿ ಇಲ್ಲದೇ ಅನೇಕರು ಅಲೆದಾಡಿ, ಪರದಾಡಿದ್ದೂ ಆಯಿತು.


ಚಾಲನೆ: ಯುವ ದಸರಾ ಉದ್ಘಾಟಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮೈಸೂರು ದಸರಾ ಜನಸಮು ದಾಯವನ್ನು ಒಗ್ಗೂಡಿಸುವ ಉತ್ಸವ. ಇದು ಸೌಹಾರ್ದತೆ ಸಾರುತ್ತದೆ. ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ನೇತೃತ್ವದಲ್ಲಿ ದಸರಾ ಅಚ್ಚುಕಟ್ಟಾಗಿ ನಡೆಯು ತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಟಿಡಿ ಹಾಡು: 'ಮೈಸೂರು ದಸರಾ ಎಷ್ಟೊಂದು ಸುಂದರ...' ಎಂದು ಹಾಡು ಹೇಳಿದ ಶಾಸಕ ಜಿ.ಟಿ.ದೇವೇಗೌಡ ಅವರು, ಮೈಸೂರು ದಸರಾ ಚಂದ, ಯುವ ದಸರವೇ ಅಂದ ಎಂದರಲ್ಲದೆ, ಯುವ ಸಂಭ್ರಮ ಯಾವುದೇ ಕಪ್ಪುಚುಕ್ಕೆ ಇಲ್ಲದೇ ಯಶಸ್ವಿ ಯಾಗಿ ನಡೆದಿದೆ. ಅಂತೆಯೇ ಯುವ ದಸರಾ ಸೇರಿದಂತೆ ದಸರಾದ ಎಲ್ಲಾ ಕಾರ್ಯಕ್ರಮ ಗಳು ಶಾಂತ ಹಾಗೂ ಶಿಸ್ತಿನಲ್ಲಿ ನಡೆಯಲು ಎಲ್ಲರೂ ಸಹಕರಿಸಬೇಕು. ಮೈಸೂರು ಶಾಂತಿ ಮತ್ತು ಪ್ರೀತಿಗೆ ಹೆಸರಾಗಿದೆ. ಇದು ಹೀಗೆಯೇ ಮುಂದುವರೆಯಬೇಕು ಎಂದು ಹೇಳಿದರು.

ಶಾಸಕರಾದ ಕೆ.ಹರೀಶ್‌ಗೌಡ, ಡಿ.ರವಿ ಶಂಕರ್, ಎಂಎಲ್‌ಸಿಗಳಾದ ಸಿ.ಎನ್.ಮಂಜೇ ಗೌಡ, ಕೆ.ಶಿವಕುಮಾರ್, ದಸರಾ ವಿಶೇಷಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಯುವ ದಸರಾ ಉಪಸಮಿತಿ ಉಪವಿಶೇಷಾಧಿಕಾರಿಗಳೂ ಆದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ ಸೇರಿದಂತೆ ಇನ್ನಿತರ ಅಧಿಕಾರಿಗಳು, ಗಣ್ಯರು ಹಾಜರಿದ್ದರು.


ಯುವ ದಸರಾದಲ್ಲಿ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮೀ ಚೌಧರಿ ಸೇರಿದಂತೆ ಇತರ ಗಣ್ಯರ ಸಂಭ್ರಮ.

ದಕ್ಷಿಣ ಕನ್ನಡದಿಂದ ಸಾಮಾಜಿಕ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ರಾಯಚೂರಿನ ಮಾನ್ವಿಗೆ ಗಡಿಪಾರು!



ಮಂಗಳೂರು, ಸೆ.23– ಧರ್ಮಸ್ಥಳದ ಬುರುಡೆ ಪ್ರಕರಣ ಹಾಗೂ ಸೌಜನ್ಯ ಪ್ರಕರಣದಲ್ಲಿ ಹೋರಾಟ ನಡೆಸುತ್ತಿದ್ದ ಸಾಮಾಜಿಕ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿಯನ್ನು ಮಂಗ ಳೂರಿನಿಂದ ಗಡಿಪಾರು ಮಾಡಿ ಸಹಾಯಕ ಆಯುಕ್ತ ಸ್ಟೆಲ್ಲಾ ವರ್ಗೀಸ್ ಆದೇಶ ಹೊರಡಿಸಿದ್ದಾರೆ. ಮಹೇಶ್ ತಿಮರೋಡಿ ವಿರುದ್ಧ ಸುಮಾರು 32 ವಿವಿಧ ಪ್ರಕರಣಗಳು ದಾಖಲಾಗಿದ್ದವು. ಹೀಗಾಗಿ ಮಹೇಶ್ ಶೆಟ್ಟಿ ತಿಮರೋಡಿಯನ್ನು ಗಡಿಪಾರು ಮಾಡುವಂತೆ ಆಗ್ರಹಗಳು ವ್ಯಕ್ತವಾಗಿದ್ದವು. ಇದೀಗ ಮಂಗಳೂರಿನಿಂದ ರಾಯ ಚೂರಿನ ಮಾನ್ವಿ ತಾಲೂಕಿಗೆ ಮಹೇಶ್ ಶೆಟ್ಟಿ ತಿಮರೋಡಿಯನ್ನು ಒಂದು ವರ್ಷಗಳ ಕಾಲ ಗಡಿಪಾರು ಮಾಡಲಾಗಿದೆ.

ಮಹಿಷಾ ದಸರಾ ಕರೆ ಹಿನ್ನೆಲೆ; ನಿಷೇಧಾಜ್ಞೆ ಜಾರಿ

ಮೈಸೂರು, ಸೆ.23(ಎಂಕೆ)– ಮಹಿಷಾ ದಸರಾ ಹಿನ್ನಲೆಯಲ್ಲಿ ಚಾಮುಂಡಿಬೆಟ್ಟದ ಮಹಿಷಾಸುರ ಪ್ರತಿಮೆ ವೃತ್ತದ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇದಾಜ್ಞೆ ಜಾರಿಗೊಳಿಸಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಆದೇಶ ಹೊರಡಿಸಿದ್ದಾರೆ.

ಮಹಿಷಾ ದಸರಾ ಆಚರಣೆ ವಿಚಾರದಲ್ಲಿ ವಿವಿಧ ಸಂಘಟನೆಗಳಲ್ಲಿ ಭಿನ್ನಾಭಿಪ್ರಾಯಗಳಿದ್ದು, ನಾಡಹಬ್ಬ ದಸರಾ ಅಂಗವಾಗಿ ದೇಶ–ವಿದೇಶಗಳಿಂದ ಚಾಮುಂಡಿ ಬೆಟ್ಟಕ್ಕೆ ಆಗಮಿಸುವ ಪ್ರವಾಸಿಗರು, ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಸೆ.23ರ ಮಧ್ಯರಾತ್ರಿ 12 ಗಂಟೆಯಿಂದ ಸೆ.25ರ ಬೆಳಗ್ಗೆ 6 ಗಂಟೆಯವರೆಗೆ ಬಿಎನ್‌ಎಸ್ 160 ಕಾಯ್ದೆಯಡಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಸಿನಿಮಾ ಟಿಕೆಟ್ ದರ 200 ರೂಪಾಯಿ ನಿಗದಿಪಡಿಸಿದ್ದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ

ರಾಜ್ಯ ಸರ್ಕಾರಕ್ಕೆ ಹಿನ್ನಡೆ

ಬೆಂಗಳೂರು, ಸೆ.23– ರಾಜ್ಯದ ಎಲ್ಲಾ ಚಿತ್ರಮಂದಿರ ಗಳಲ್ಲೂ ಒಂದು ಟಿಕೆಟ್‌ನ ಬೆಲೆ 200 ರೂಪಾಯಿಗೆ ನಿಗದಿಪಡಿಸಿ ಸಿದ್ದರಾಮಯ್ಯ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಕರ್ನಾಟಕ ಹೈಕೋರ್ಟ್ ತಡೆ ನೀಡಿದೆ.

ಸರ್ಕಾರದ ದರ ನಿಗದಿ ಪ್ರಶ್ನಿಸಿ ಮಲ್ಟಿಪ್ಲೆಕ್ಸ್ ಹಾಗೂ ಹೊಂಬಾಳೆ ಫಿಲ್ಮ್ಸ್ ಹೈಕೋರ್ಟ್ ಮೊರೆ ಹೋಗಿತ್ತು. ಸರ್ಕಾರದ ಈ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ ಕೊಟ್ಟಿದೆ.

ಪರಭಾಷಾ ಸಿನಿಮಾಗಳ ಹಾವಳಿ, ಮಿತಿ ಮೀರಿದ ಟಿಕೆಟ್ ದರದ ವಿರುದ್ಧ ಇಡೀ ಇಂಡಸ್ಟ್ರಿ ಏಕರೂಪ ಟಿಕೆಟ್ ದರ ನಿಗದಿ ಮಾಡಬೇಕು ಎಂದು ದಶಕ ಗಳಿಂದ ಹೋರಾಟ ನಡೆದಿತ್ತು. ಹತ್ತಾರು ಬಾರಿ ಈ ವಿಚಾರವಾಗಿ ಚರ್ಚೆ, ವಾದ– ಪ್ರತಿವಾದಗಳು ನಡೆದಿದ್ದವು. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ರಾಜ್ಯ ಸರ್ಕಾರ ಏಕರೂಪದ ಟಿಕೆಟ್ ದರ ನಿಗದಿ ಮಾಡುತ್ತು.

200 ರೂಪಾಯಿ ನಿಗದಿ ವಿರುದ್ಧ ವಿರೋಧ ಕೂಡ ವ್ಯಕ್ತವಾಗಿತ್ತು. ಬಿಗ್ ಬಜೆಟ್ ಸಿನಿಮಾಗಳಿಗೆ ಇದರಿಂದ ತೊಂದರೆ ಆಗಲಿದೆ ಎಂಬ ಚರ್ಚೆ ಶುರುವಾಯ್ತು. ಕೊನೆಗೆ ಸರ್ಕಾರದ ನಿರ್ಧಾರವನ್ನ ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಕೆ ಆಗಿತ್ತು. ವಿಚಾರಣೆ ನಡೆಸಿದ್ದ ಹೈಕೋರ್ಟ್‌ನ ನ್ಯಾಯ ಮೂರ್ತಿ ರವಿ ಹೊಸಮನಿ ನೇತೃತ್ವದ ಪೀಠವು, ಸರ್ಕಾರದ ಆದೇಶಕ್ಕೆ ತಡೆ ನೀಡಿದೆ. ಜೊತೆಗೆ ವಿಚಾರಣೆಯನ್ನ ಮುಂದೂಡಿಕೆ ಮಾಡಿದೆ.

ಅನಾರೋಗ್ಯದಿಂದ ಬಳಲುತ್ತಿದ್ದ ವ್ಯಕ್ತಿ ಪತ್ರ ಬರೆದಿಟ್ಟು ನಾಪತ್ತೆ



ಮೈಸೂರು: ಅನಾರೋಗ್ಯದಿಂದ ಬಳಲುತ್ತಿದ್ದ ವ್ಯಕ್ತಿಯೊಬ್ಬರು ಮನೆಯಲ್ಲಿ ಪತ್ರವೊಂದನ್ನು ಬರೆದಿಟ್ಟು ಮನೆ ಬಿಟ್ಟು ಹೋಗಿ ರುವ ಸಂಬಂಧ ಮೈಸೂರಿನ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖ ಲಾಗಿದೆ. ವಿಜಯನಗರ 4ನೇ ಹಂತದ ನಿವಾಸಿ ಕೆ.ಬಿ.ಜಯಣ್ಣ (67) ಎಂಬುವರೆ ಮನೆ ಬಿಟ್ಟು ಹೋದವರು.

ಕಳೆದ 6–7 ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದು, ಪುತ್ರ ಮಂಜುನಾಥ್ ನಿವಾಸದಲ್ಲಿ ವಾಸವಾಗಿದ್ದು ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಅನಾರೋಗ್ಯ ಅವರನ್ನು ಬೆಂಬಿಡದೆ ಕಾಡಿದ್ದರಿಂದ, ನನ್ನನ್ನು ಹುಡುಕುವ ಪ್ರಯತ್ನ ಮಾಡಬೇಡಿ. ನನ್ನ ಸಾವಿಗೆ ನಾನೇ ಕಾರಣ, ನನ್ನನ್ನು ಕ್ಷಮಿಸಿ' ಎಂದು ಪತ್ರವೊಂದನ್ನು ಬರೆದಿಟ್ಟು ಮನೆ ಬಿಟ್ಟು ಹೊರಟು ಹೋಗಿದ್ದಾರೆ. ಇದುವರೆಗೂ ಅವರ ಬಗ್ಗೆ ಯಾವುದೇ ಮಾಹಿತಿ ಸಿಕ್ಕಿಲ್ಲ. ಈ ಸಂಬಂಧ ಪುತ್ರ ಮಂಜುನಾಥ್ ವಿಜಯನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ. ಇವರ ಬಗ್ಗೆ ಸುಳಿವು ಸಿಕ್ಕವರು ಮೊಬೈಲ್ ಸಂಖ್ಯೆ 96328–08592 ಮೂಲಕ ತಿಳಿಸಲು ಕೋರಲಾಗಿದೆ.


ನವಚೇತನ ಜನಸೇವಾ ಟ್ರಸ್ಟ್‌ನ ಅಧ್ಯಕ್ಷರು, ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ
ಸನ್ಮಾನ್ಯ ಶ್ರೀ ಚೇತನ್ ವಿಷಕಂಠೇಗೌಡ ರವರಿಗೆ
ಕುಂಬಾರಕೊಪ್ಪಲು
ಜನ್ಮದಿನದ ಶುಭಾಶಯಗಳು
ಶುಭಕೋರುವವರು : ಟಿ.ಎ.ಪಿ.ಸಿ.ಎಂ.ಎಸ್ ನಿರ್ದೇಶಕರು, ಮೈಸೂರು ತಾಲ್ಲೂಕು
ಶುಭಕೋರುವವರು
ಚಂದ್ರಶೇಖರ್
ಟಿಎಪಿಸಿಎಂಎಸ್ ನಿರ್ದೇಶಕರು,
ಬೋಗಾದಿ, ಮೈಸೂರು


ನವ ಚೇತನ ಟ್ರಸ್ಟ್ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳು ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ
ಹಾಗೂ ಶ್ರೀ ಮಹದೇಶ್ವರ ವಿವಿದೋದ್ದೇಶ ಸಹಕಾರ ಸಂಘದ ನಿರ್ದೇಶಕರು ಕುಂಬಾರಕೊಪ್ಪಲು
ಸನ್ಮಾನ್ಯ ಶ್ರೀ ಚೇತನ್ ವಿಷಕಂಠೇಗೌಡ ರವರಿಗೆ
ಜನ್ಮದಿನದ ಶುಭಾಶಯಗಳು
ಚೇತನ್ ವಿಷಕಂಠೇಗೌಡ
ಕುಂಬಾರಕೊಪ್ಪಲು
ಶುಭಾಶಯಕೋರುವವರು:
ಶ್ರೀ ವಿನಾಯಕ ಭಕ್ತ ಮಂಡಳಿ
ಕುಂಬಾರಕೊಪ್ಪಲು, ಮೈಸೂರು